Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–25 | ಜೂನ್ 17–23, 2024 | ಪುಟ 16 | ರೂ.10/–
Volume-18 | Issue-25 | June 17-23, 2024 | Pages:16 | Price: 10/-



ಸಂಸತ್ತಿನ ಒಳಗೆ ಮತ್ತು ಹೊರಗೆ ಹಿಂದುತ್ವ ನಿರಂಕುಶಾಧಿಕಾರದ ವಿರುದ್ಧ ಹೋರಾಟ - ಸಿಪಿಐ(ಎಂ)



ಪಶ್ಚಿಮ ಬಂಗಾಳ: ತೃಣಮೂಲ ದೌರ್ಜನ್ಯ ಅನಾವರಣ

ದಕ್ಷಿಣದಲ್ಲಿ ಬಿಜೆಪಿಗೆ ಸ್ವಲ್ಪ ಮುನ್ನಡೆ: ಒಡಿಶಾದಲ್ಲಿ ಭಾರಿ ಗೆಲುವು ಆತಂಕಕಾರಿ



ಮೆಕ್ಸಿಕೊ: ಎಡಪಂಥೀಯ ಮಹಿಳಾ ಅಧ್ಯಕ್ಷರ ಆಯ್ಕೆ

ನೀಟ್ ಆಯ್ಕೆಯಲ್ಲ ಹೊರತಳ್ಳುವ ಹಗರಣ

ಬಸ್ಸುಗಳ ಕಾರ್ಯಾಚರಣೆಗೂ ಇಳಿದಿದೆ ಅಮೆರಿಕ ಮೂಲದ 'ಉಬರ್'

ಪಶ್ಚಿಮ ಬಂಗಾಳ; ಚುನಾವಣಾ ನಂತರ ತೃಣಮೂಲ ದೌರ್ಜನ್ಯ ಅನಾವರಣ; ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ

ಸುಬಿನೋಯ್ ಮೌಲಿಕ್

18 ನೇ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ರಾಜ್ಯದ 42 ಸ್ಥಾನಗಳಲ್ಲಿ 29 ರಲ್ಲಿ ತೃಣಮೂಲ ಕಾಂಗ್ರೆಸ್ ನಿರ್ಣಾಯಕ ಗೆಲುವು ಸಾಧಿಸಿದೆ. ಬಿಜೆಪಿ ಬೆಂಬಲಿತ ಮಾಧ್ಯಮಗಳ ಯೋಜಿತ "ಗಾಳಿಯ ಗೆಲುವು" ನಕಲಿ ಎಕ್ಸಿಟ್ ಸಮೀಕ್ಷೆಗಳು ಈ ಫಲಿತಾಂಶದಿಂದ ಸಂಪೂರ್ಣವಾಗಿ ಕಣ್ಮರೆಯಾಗಿವೆ. ಬಿಜೆಪಿ 12 ಸ್ಥಾನಗಳನ್ನು ಮಾತ್ರ ಗಳಿಸಿದ್ದು, ಕಳೆದ ಬಾರಿ 18 ಸ್ಥಾನಗಳನ್ನು ಪಡೆದಿತ್ತು. ಅದು 6 ಸ್ಥಾನಗಳನ್ನು ಕಳೆದುಕೊಂಡಿದೆ. ಜಂಟಿಯಾಗಿ ಚುನಾವಣೆ ಎದುರಿಸಿದ್ದ ಎಡ–ಕಾಂಗ್ರೆಸ್ ಬಾರಿ ಹಿನ್ನಡೆ ಅನುಭವಿಸಿವೆ. ಮಾಲ್ಡಾ ದಕ್ಷಿಣದಲ್ಲಿ ಮಾತ್ರ ಕಾಂಗ್ರೆಸ್ ಒಂದು ಸ್ಥಾನವನ್ನು ಗೆದ್ದಿದೆ. ಇದೇ ಸಂದರ್ಭದಲ್ಲಿ ತೃಣಮೂಲ ಬೆಂಬಲಿಗರ ಅಗಾಧ ಸಂಭ್ರಮದ ನಡುವೆ, ತೃಣಮೂಲ ಬೆಂಬಲಿತ ಗೂಂಡಾಗಳು ಹಿಂಸಾತ್ಮಕ ದಾಳಿಗಳನ್ನು ಆರಂಭಿಸಿದರು. ಪ್ರಾಥಮಿಕವಾಗಿ ಸಿಪಿಐ(ಎಂ) ಮತ್ತು ವಿರೋಧಿ ರಾಜಕೀಯವನ್ನು ಗುರಿಯಾಗಿಸಿಕೊಂಡು ದಾಳಿಗಳನ್ನು ನಡೆಸಿದ್ದಾರೆ.

ಮತ ಎಣಿಕೆ ಕಾರ್ಯ ಮುಂದುವರಿದಿದ್ದ ಸಮಯದಲ್ಲಿಯೂ, ತೃಣಮೂಲದ ದುಷ್ಕರ್ಮಿಗಳು ವಿವಿಧ ಪ್ರದೇಶಗಳಲ್ಲಿ ಸಿಪಿಐ(ಎಂ) ಪಕ್ಷದ ಕಚೇರಿಗಳ ಮೇಲೆ ದಾಳಿ ನಡೆಸಿ ಧ್ವಂಸಗೊಳಿಸಿದ್ದಾರೆ. ತೃಣಮೂಲ ಪಕ್ಷದ ಉತ್ತರಾಧಿಕಾರಿ ಅಭಿಷೇಕ್ ಬ್ಯಾನರ್ಜಿ ಏಳು ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಜಯಗಳಿಸಿದ ಡೈಮಂಡ್ ಹಾರ್ಬರ್ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರಗಳು ಈ ದೃಶ್ಯಗಳಿಗೆ ಸಾಕ್ಷಿಯಾಗಿದ್ದವು. ಎರಡನೆ ಸುತ್ತಿನ ಎಣಿಕೆ ಮುಗಿಯುವ ಮುನ್ನವೇ ಎದೆಯ ಬ್ಯಾಡ್ಜ್ ಗಳಿಂದ ಪಿನ್ ಗಳನ್ನು ಬಿಚ್ಚಿ ಸಿಪಿಐ(ಎಂ) ಎಣಿಕೆ ಏಜೆಂಟರಿಗೆ ಚೂರಿ ಕೂಡ ಹಾಕಿದ್ದಾರೆ. ಬಡ್ಜ್ ಬಡ್ಜ್ ಅಸೆಂಬ್ಲಿ ಸೆಗ್ಮೆಂಟ್ ನಲ್ಲಿ ಸಿಪಿಐ(ಎಂ)ನ ಎಣಿಕೆ ಏಜೆಂಟರನ್ನು ಮೊದಲು ಎಳೆದು ಹೊರಗೆ ಕರೆದೊಯ್ದರು. ನಂತರ, ಡೈಮಂಡ್ ಹಾರ್ಬರ್ ಮತ್ತು ಫಾಲ್ಟಾ ವಿಧಾನಸಭಾ ಕ್ಷೇತ್ರಗಳ ಎಣಿಕೆ ಏಜೆಂಟ್ ಗಳನ್ನು ಸಹ ಹೊರಹಾಕಲಾಯಿತು.

ಈ ಹಿಂಸಾಚಾರವು ಡೈಮಂಡ್ ಹಾರ್ಬರ್ ಆಚೆಗೂ ವಿಸ್ತರಿಸಿತ್ತು, ರಾಜ್ಯದಾದ್ಯಂತ ಸಿಪಿಐ(ಎಂ) ಕಚೇರಿಗಳು ಮತ್ತು ಸದಸ್ಯರ ಮೇಲೆ ದಾಳಿಗಳು ನಡೆದವು. ಗೂಂಡಾಗಳು ಜೂನ್ 4 ರಂದು ದಿನವಿಡೀ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಗಲಭೆ ನಡೆಸಿದರು. ಅನೇಕ ಸಂದರ್ಭಗಳಲ್ಲಿ ದಾಳಿಗಳು ನಡೆಯುತ್ತಿದ್ದಾಗ ಪೊಲೀಸರು ಮೂಕ ಪ್ರೇಕ್ಷಕರಂತೆ ನಿಂತಿದ್ದರು. ಇದರಿಂದಾಗಿ ಹಿಂಸಾಚಾರ ಉಲ್ಬಣಗೊಳ್ಳಲು ಅವಕಾಶವನ್ನು ಅವರೇ ಮಾಡಿಕೊಟ್ಟರು ಎನ್ನಬಹುದು. ಬೆಳಿಗ್ಗೆ ತೃಣಮೂಲ ದುಷ್ಕರ್ಮಿಗಳು ಸಿಪಿಐ(ಎಂ) ಕಚೇರಿ, ಜಾಧವ್ ಪುರ ಲೋಕಸಭಾ ಕ್ಷೇತ್ರದ ವಿಜಯಗರ್ ದಲ್ಲಿರುವ ಮತಎಣಿಕೆ ಕೇಂದ್ರದ ಬಳಿಯಲ್ಲಿ, ಭೋಲಾ ಬೋಸ್ ಸ್ಮೃತಿ ಭವನವನ್ನು ಧ್ವಂಸಗೊಳಿಸಿದ್ದಾರೆ. ದಾಳಿಯಲ್ಲಿ ಪಕ್ಷದ ಮೂವರು ಕಾರ್ಯಕರ್ತರು ಗಾಯಗೊಂಡಿದ್ದು, ಒಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ದುಷ್ಕರ್ಮಿಗಳಿಂದ ಬಘಾ ಜತಿನ್ ನಲ್ಲಿ ಪಕ್ಷದ ಕಾರ್ಯಕರ್ತನ ಮನೆಯನ್ನು ಧ್ವಂಸ ಮಾಡಲಾಗಿದೆ. ದಕ್ಷಿಣ ಜಾದವ್ ಪುರದಲ್ಲಿ ಗಣಶಕ್ತಿ ಪತ್ರಿಕಾ ಪ್ರದರ್ಶನ ಫಲಕವನ್ನು ಒಡೆದುರುಳಿಸಲಾಗಿದೆ.

ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸುವುದು, ಪಕ್ಷದ ಕಾರ್ಯಕರ್ತರು ಮತ್ತು ಎಣಿಕೆ ಏಜೆಂಟ್ ಗಳ ಮೇಲೆ ದೈಹಿಕ ಹಲ್ಲೆಗಳು ಮತ್ತು ರಾಜಕೀಯ ವಿರೋಧಿಗಳ ಕುಟುಂಬ ಸದಸ್ಯರ ಮೇಲೆ ದಾಳಿಗಳು ನಡೆದಿವೆ. ತೃಣಮೂಲದ ದುಷ್ಕರ್ಮಿಗಳ ಅಜಾಗರೂಕ ದಾಳಿಗಳು, ವಿಧ್ವಂಸಕತೆ ಕೃತ್ಯಗಳು ಸರ್ವೆಸಾಮಾನ್ಯವಾಗಿದೆ. ಡೈಮಂಡ್ ಹಾರ್ಬರ್ ಲೋಕಸಭಾ ಕ್ಷೇತ್ರದ ಮಹೇಸ್ತಲದ ವಿವಿಧ ಭಾಗಗಳಲ್ಲಿ ಕಚೇರಿಗಳನ್ನು ಧ್ವಂಸಗೊಳಿಸಲಾಗಿದೆ. ಮಹೇಸ್ತಲದ ಬಾಟಾದಲ್ಲಿರುವ ಖುದಿರಾಮ್ ಕ್ಲಬ್ ನಲ್ಲಿ ವ್ಯಾಪಕ ವಿಧ್ವಂಸಕ ಕೃತ್ಯಗಳನ್ನು ನಡೆಸಲಾಯಿತು. ತೃಣಮೂಲ ಪಡೆಗಳು ಸಿಪಿಐ(ಎಂ) ಕಾರ್ಯಕರ್ತರಾದ ಕಾನು ಗೋಪಾಲ್ ದಾಸ್ ಮತ್ತು ದಲಿಯಾ ಬೋಸ್ ಅವರ ಮನೆಯನ್ನು ಧ್ವಂಸಗೊಳಿಸಿದ್ದಾರೆ. ಮಹೇಸ್ತಲದ ಸರದಾಪಲ್ಲಿ ನಿವಾಸಿಗಳು ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು ಎಂದು ಪಕ್ಷದ ಪ್ರದೇಶ ಸಮಿತಿ ಕಾರ್ಯದರ್ಶಿ ರಾಜಾ ಮಿತ್ರ ತಿಳಿಸಿದ್ದಾರೆ. ತೃಣಮೂಲದ ಶಸ್ತ್ರ ಸಜ್ಜಿತ ಕ್ರಿಮಿನಲ್ ಗಳು ಮಹೇಸ್ತಲದ ವಿವಿಧ ಪ್ರದೇಶಗಳಲ್ಲಿ ಭಯೋತ್ಪಾದನೆಯ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ. ಇದರಿಂದ ಜನಸಾಮಾನ್ಯರು ಭಯಭೀತರಾಗಿದ್ದಾರೆ.

ತೃಣಮೂಲದ ದುಷ್ಕರ್ಮಿಗಳು ದಕ್ಷಿಣ ಕೋಲ್ಕತ್ತಾದ ಪಕ್ಕದಲ್ಲಿರುವ 24 ಪರಗಣದಲ್ಲಿ, ಸಿಪಿಐ(ಎಂ) ಹಲ್ಲು ಪ್ರದೇಶ ಸಮಿತಿಯ ಕಚೇರಿಯನ್ನು ಧ್ವಂಸಗೊಳಿಸಿದ್ದಾರೆ. ಬರ್ದ್ವಾನ್ ನಲ್ಲಿ ಪಕ್ಷದ ಕಾರ್ಯಕರ್ತನ ತಂದೆಯ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಬರಾಸತ್ ನಲ್ಲಿ ಮಹಿಳಾ ಏಜೆಂಟ್ ರೊಬ್ಬರ ಮನೆಯನ್ನು ಧ್ವಂಸಗೊಳಿಸಲಾಗಿದೆ. ಶ್ರೀರಾಂಪುರದಲ್ಲಿ ಇಬ್ಬರು ಎಣಿಕೆ ಏಜೆಂಟರಿಗೆ ಥಳಿಸಲಾಗಿದೆ.

ದೊಮ್ಮಜೂರಿನ ಸಿಪಿಐ(ಎಂ)ನ ಎಣಿಕೆ ಏಜೆಂಟ್ ಜಯಂತ್ ರಂಗ್ ಅವರನ್ನು ಥಳಿಸಿ ಮತ ಎಣಿಕೆ ಕೇಂದ್ರದಿಂದ ಹೊರ ಹಾಕಲಾಯಿತು. ದುರ್ಗಾಪುರದಲ್ಲಿ ಸಿಪಿಐ(ಎಂ) ಮತ ಎಣಿಕೆ ಏಜೆಂಟ್ ಗೆ ಥಳಿಸಿದ ಪರಿಣಾಮ ತಲೆಗೆ ಗಂಭೀರ ಗಾಯವಾಗಿದೆ.

ಜೂನ್ 4 ರಂದು ಮಧ್ಯಾಹ್ನದ ಸುಮಾರಿಗೆ ತೃಣಮೂಲದ ದುಷ್ಕರ್ಮಿಗಳು ಜಾಧವ್ ಪುರ ಲೋಕಸಭಾ ಕ್ಷೇತ್ರದ ವಿಜಯಗಢ್ ನಲ್ಲಿ ಜ್ಯೋತಿಶ್ ರಾಯ್ ಕಾಲೇಜ್ ಪಕ್ಕದಲ್ಲಿರುವ ಸಿಪಿಐ(ಎಂ) ಪಕ್ಷದ ಕಚೇರಿ ಭೋಲಾ ಬೋಸ್ ಸ್ಮೃತಿ ಭವನದ ಮೇಲೆ ದಾಳಿ ಮಾಡಿದರು. ಈ ಕಾಲೇಜಿನಲ್ಲಿ ಜಾಧವ್ ಪುರ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯ ನಡೆಯುತ್ತಿತ್ತು. ಫಲಿತಾಂಶದ ಪ್ರಾರಂಭದ ನಂತರ, ತೃಣಮೂಲ ದುಷ್ಕರ್ಮಿಗಳ ಗುಂಪು, ಹರ್ಷೋದ್ಗಾರದಲ್ಲಿ, ದೂರದಿಂದ ಮೊದಲು ಕಲ್ಲು ತೂರಾಟವನ್ನು ಪ್ರಾರಂಭಿಸಿದರು. ಆಗ ತೃಣಮೂಲ ಬೆಂಬಲಿತ ಪುಂಡ ಪೋಕರಿಗಳು ಬಂದು ಬಾಗಿಲು, ಕಿಟಕಿಗಳನ್ನು ಒಡೆದು ಪೀಠೋಪಕರಣಗಳನ್ನು ಒಡೆದು ಹಾಕಿದ್ದಾರೆ. ಈ ವೇಳೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷದ ಕಚೇರಿಯೊಳಗೆ ಇದ್ದರು. ತೃಣಮೂಲದ ಈ ಹಿಂಸಾಚಾರ ಮತ್ತು ದಾಳಿಯಲ್ಲಿ ಸೋಮನಾಥ್ ಕರ್ಮಾಕರ್ ಎಂಬ ಪಕ್ಷದ ಕಾರ್ಯಕರ್ತ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಜಾಧವ್ ಪುರ ಲೋಕಸಭಾ ಕ್ಷೇತ್ರದ ಸಿಪಿಐ(ಎಂ)



ಅಭ್ಯರ್ಥಿ ಸೃಜನ್ ಭಟ್ಟಾಚಾರ್ಯ ಸುದ್ದಿ ತಿಳಿದು ಪಕ್ಷದ ಕಚೇರಿಗೆ ತೆರಳಿದರು. ಇದು ತೃಣಮೂಲದ ಸಂಸ್ಕೃತಿಯಾಗಿದ್ದು, ಇದು ಅಪರಾಧಿಗಳಿಗೆ ಆಶ್ರಯ ನೀಡುತ್ತದೆ ಎಂದು ಅವರು ಹೇಳಿದರು. ಈ ರೀತಿಯ ಗೂಂಡಾಗಿರಿಯನ್ನು ಟೋಲಿಗಂಜ್ ನಲ್ಲಿ ಹಿಂದೆಂದೂ ನೋಡಿರಲಿಲ್ಲ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಲೋಕಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಜೂನ್ 4 ರಂದು ಪೂರ್ವ ಬರ್ಧಮಾನ್ ರೈನಾದ ಚಕ್ಚಂದನ್‌ನಲ್ಲಿರುವ ಸಿಪಿಐ(ಎಂ) ಕಾರ್ಯಕರ್ತನ ಮನೆಯ ಮೇಲೆ ತೃಣಮೂಲ ದುಷ್ಕರ್ಮಿಗಳು ದಾಳಿ ನಡೆಸಿದರು. ಮನೆಯಲ್ಲಿ ಪಕ್ಷದ ಕಾರ್ಯಕರ್ತ ಸಿಗದ ಕಾರಣ ದುಷ್ಕರ್ಮಿಗಳು ಅವರ ತಂದೆಯ ಮೇಲೆ ಹಲ್ಲೆ ನಡೆಸಿದರು. ತಂದೆ ಶೇಖ್ ಬಾಬರ್ ರನ್ನು ತೀವ್ರವಾಗಿ ಥಳಿಸಿದ್ದಾರೆ. ಚಿಂತಾಜನಕ ಸ್ಥಿತಿಯಲ್ಲಿದ್ದ ಅವರನ್ನು ದುರ್ಗಪುರ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸಿಪಿಐ(ಎಂ) ಕಾರ್ಯಕರ್ತ ಶೇಖ್ ರಹಮತ್ ಮತದಾನದ ದಿನದಂದು ಬೂತ್ ನಲ್ಲಿ ಏಜೆಂಟ್ ಆಗಿದ್ದರು. ಅವರು ತೃಣಮೂಲ ಮತ ಲೂಟಿಯನ್ನು ನಿಲ್ಲಿಸಿದರು. ಆ ದಿನವೇ ಆತ ಬೆದರಿದ್ದ. ಆ ದಿನ ಫಲಿತಾಂಶಗಳು ಹೊರಬಿದ್ದ ನಂತರ ತೃಣಮೂಲ ಅವರ ಮನೆ ಮೇಲೆ ದಾಳಿ ಮಾಡಿತು. ಆಗ ಶೇಖ್ ರಹಮತ್ ಮನೆಯಲ್ಲಿ ಇರಲಿಲ್ಲ. ಆಗ ದುಷ್ಕರ್ಮಿಗಳು ತಂದೆಯ ಮೇಲೆ ಹಲ್ಲೆ ನಡೆಸಿದ್ದಾರೆ. ಚುನಾವಣಾ ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ತೃಣಮೂಲದ ದುಷ್ಕರ್ಮಿಗಳು ಬರಾಸತ್ ಲೋಕಸಭಾ ಕ್ಷೇತ್ರದ ಕಲಿಪದ ಸಮಂತಾ ಕಾಲೋನಿಯಲ್ಲಿರುವ ಸಿಪಿಐ(ಎಂ) ಮತಗಟ್ಟೆ ಏಜೆಂಟ್ ಮಮತಾ ದಾಸ್ ಅವರ ಮನೆಗೆ ನುಗ್ಗಿದ್ದಾರೆ. ಅವರು ಇಡೀ ಮನೆಯನ್ನು ದೋಚಿದರು. ಯುಸಿಆರ್‌ಸಿ ಮುಖಂಡರು ಸ್ಥಳಕ್ಕೆ ಆಗಮಿಸಿ ಸಂತ್ರಸ್ತರ ಬೆಂಬಲಕ್ಕೆ ನಿಂತರು.


ಬುರ್ದ್ವಾನ್ ದುರ್ಗಾಪುರ ಲೋಕಸಭಾ ಕ್ಷೇತ್ರದ ಸಿಪಿಐ(ಎಂ) ಮತ ಎಣಿಕೆ ಏಜೆಂಟರೊಬ್ಬರ ಮೇಲೆ ಜೂನ್ 4 ರಂದು ಬುರ್ದ್ವಾನ್ ನ ಮತ ಎಣಿಕೆ ಕೇಂದ್ರದ ಹೊರಗೆ ತೃಣಮೂಲ ಗೂಂಡಾಗಳು ದಾಳಿ ನಡೆಸಿದ್ದಾರೆ. ಮತ ಎಣಿಕೆ ಕೇಂದ್ರದಿಂದ ದುರ್ಗಾಪುರಕ್ಕೆ ವಾಪಸಾಗುತ್ತಿದ್ದಾಗ ಅವನ ತಲೆಗೆ ಗಾಯವಾಯಿತು, ಅವನ ದೇಹಕ್ಕೆ ವಿಪರೀತ ಗಾಯಗಳಾಗಿವೆ. ದುರ್ಗಾಪುರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪೊಲೀಸರು ಮತ್ತು ಕೇಂದ್ರ ಪಡೆಗಳ ಎದುರೇ ದಾಳಿ ನಡೆದಿದೆ. ಪಕ್ಷದ ಇತರ ಕಾರ್ಯಕರ್ತರು ಅವರ ಸಹಾಯಕ್ಕೆ ಧಾವಿಸಿದರು. ದಾಳಿಕೋರರು ವಾಹನದ ಮೇಲೆ ಕಲ್ಲು ಎಸೆದಿದ್ದಾರೆ. ಸುಪ್ರಿಯೋ ಬಿಸ್ವಾಸ್ ಅವರ ಮನೆ ದುರ್ಗಾಪುರದ ಸಾಗರಭಂಗಾದಲ್ಲಿದೆ. ಈತ ಖಾಸಗಿ ಕಾರ್ಖಾನೆ ಯೊಂದರಲ್ಲಿ ಗುತ್ತಿಗೆ ಕಾರ್ಮಿಕನಾಗಿದ್ದಾನೆ.

ಏತನ್ಮಧ್ಯೆ, ತೃಣಮೂಲ ದುಷ್ಕರ್ಮಿಗಳು ಮತ ಎಣಿಕೆ ವೇಳೆ ಉತ್ತರ 24 ಪರ್ ಗಣಾಸ್ ಜಿಲ್ಲೆಯ ಬಾರಾನಗರದಲ್ಲಿರುವ ಸಿಪಿಐ(ಎಂ) ಪಕ್ಷದ ಕಚೇರಿಯನ್ನು ಧ್ವಂಸಗೊಳಿಸಿದ್ದಾರೆ. ಬಾರಾನಗರ ವಿಧಾನಸಭಾ ಉಪಚುನಾವಣೆಯಲ್ಲಿ ತೃಣಮೂಲ ಗೆಲುವು ಸಾಧಿಸುವ ಮುನ್ನವೇ ಈ ದಾಳಿ ನಡೆದಿದೆ. ತೃಣಮೂಲ ಬೆಂಬಲಿತ ದುಷ್ಕರ್ಮಿಗಳ ಗುಂಪೊಂದು ವಾರ್ಡ್ ನಂ. 34ರ ಪುತಿ ಘಾಟ್ ನಲ್ಲಿರುವ ಪಕ್ಷದ ಕಚೇರಿಗೆ ನುಗ್ಗಿದೆ.

ಮಧ್ಯಾಹ್ನ ಬಾರಾನಗರ ಪುರಸಭೆ ವ್ಯಾಪ್ತಿಯಲ್ಲಿ. ಒಳಗಿದ್ದ ಟಿವಿ, ಕುರ್ಚಿ, ಟೇಬಲ್ ಸೇರಿದಂತೆ ಎಲ್ಲವನ್ನೂ ಒಡೆದು ಹಾಕಿದ್ದಾರೆ. 2011 ರ ನಂತರ, ಸಿಪಿಐ(ಎಂ) ಬಾರಾನಗರ ನಂ.2 ಪ್ರದೇಶ ಸಮಿತಿಯ ಪಕ್ಷದ ಕಚೇರಿಯ ಮೇಲೆ ನಡೆದಿರುವ ಎರಡನೇ ದಾಳಿ ಇದಾಗಿದೆ. ತೃಣಮೂಲ ದುಷ್ಕರ್ಮಿಗಳು ಮೆಟಿಯಾಬ್ರೂಜ್ ಪ್ರದೇಶದಲ್ಲಿ ಹಿರಿಯ ಸಿಪಿಐ(ಎಂ) ನಾಯಕ ದಿಲೀಪ್ ಸೇನ್ ಅವರ ಮನೆ ಮೇಲೆ ದಾಳಿ ನಡೆಸಿದ್ದಾರೆ. ದಿಲೀಪ್ ಸೇನ್ ಅವರ ಮಗ ಮತ್ತು ಅಜ್ಜಿಯನ್ನು ಸಹ ಬಿಡಲಿಲ್ಲ.

ಮತ ಎಣಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಸಲೀಂ, ಮತದಾನದ ನಂತರ ರಾಜ್ಯದಲ್ಲಿ ಶಾಂತಿ ಕಾಪಾಡಬೇಕು ಎಂದು ಆಗ್ರಹಿಸಿದರು. ಕೇಂದ್ರ ಪಡೆಗಳು ಇನ್ನೂ ಹತ್ತು ದಿನ ಮಾತ್ರ ಇರುತ್ತವೆ. ಸಿಪಿಐ (ಎಂ) ಸೇರಿದಂತೆ ವಿವಿಧ ವಿರೋಧ ಪಕ್ಷಗಳ ಮೇಲೆ ತೃಣಮೂಲ ಕಾರ್ಯಕರ್ತರು ನಡೆಸಿದ ದಾಳಿಯನ್ನು ಅವರು ಖಂಡಿಸಿದರು. ಯಾವುದೇ ಜವಾಬ್ದಾರಿಯುತ ಆಡಳಿತ ಪಕ್ಷದಿಂದ ಈ ಹಿಂಸಾಚಾರ ಸ್ವೀಕಾರಾರ್ಹವಲ್ಲ. ಇದು ಪ್ರಜಾಪ್ರಭುತ್ವದಲ್ಲಿ ಅಪಾಯಕಾರಿ ಬೆಳವಣಿಗೆ ಎಂದು ಸಲೀಂ ಒತ್ತಿ ಹೇಳಿದರು.

ಅನು: ನಾಗರಾಜ ನಂಜುಂಡಯ್ಯ



ನ್ಯಾಯ ಕೊಡುವವರಿಗೆ ಸಂವೇದನೆ ಮೂಡಿಸುವವರಾರು?

ಕಾನೂನಿನ ಕುಣಿಕೆ ಅನ್ಯಾಯದೆದುರು ಸಡಿಲಗೊಳ್ಳುತ್ತಲೇ ಇರುವುದಾದರೆ ನ್ಯಾಯ ಎಂಬ ಪದಕ್ಕೆ ಅರ್ಥ ಕೊಡುವವರು ಯಾರು? ಆರೋಪಿ ಹೊತ್ತವರ ಸ್ಥಾನ ಮಾನ, 'ಘನತೆ?ಗಳ ಗುಣಗಾನ ಮಾಡುತ್ತ ಜನ ಸಾಮಾನ್ಯರನ್ನು ವೆಂಕ ನಾಣಿ ಶೀನ, ಟಾಮ್ ಡಿಕ್ ಹ್ಯಾರಿ ಎಂಬ ಹಗುರ ಮಾತುಗಳು ನ್ಯಾಯಪೀಠದಿಂದಲೇ ಬರುವುದಾದರೆ ನ್ಯಾಯದ ದಾರಿ ಸುಗಮವಾದೀತೆ?

ಕೆ.ಎಸ್.ವಿಮಲಾ

ನ್ಯಾಯ ಕೇಳಿದವರ ಪ್ರಕರಣದ ಚರ್ಚೆಯ ಬದಲು ದೂರುದಾರರ ಚರಿತ್ರೆ ಮತ್ತು ಚಾರಿತ್ರ್ಯ, ನಡತೆ, ಉದ್ಯೋಗ/ಕೆಲಸಗಳನ್ನು ಮುಖ್ಯವಾಗಿರಿಸಿಕೊಂಡು ನ್ಯಾಯಾಲಯದಲ್ಲಿ ಚರ್ಚೆ ನಡೆಸುವುದು ಎಷ್ಟು ಸೂಕ್ತ?

ಭಾರತದ ನ್ಯಾಯ ವ್ಯವಸ್ಥೆಯಲ್ಲಿ ಕಾನೂನಿನಲ್ಲಿ ನಂಬಿಕೆ ಇಟ್ಟು ಪ್ರತಿನಿತ್ಯ ಲಕ್ಷಾಂತರ ಪ್ರಕರಣಗಳು ದಾಖಲಾಗುತ್ತವೆ. ಕೊಟ್ಟ ದೂರು ಸ್ವೀಕಾರಗೊಳ್ಳದ, ಸ್ವೀಕರಿಸಿದ ನಂತರವೂ ಮೌನಪೆಟ್ಟಿಗೆಯಲ್ಲಿ ಭದ್ರವಾಗಿ ಕುಳಿತುಕೊಳ್ಳುವುದು ಹೊಸತಲ್ಲ. ಬೇಸತ್ತು ಸುಮ್ಮನಿರುವುದೂ ಹೊಸತಲ್ಲ. ಆದರೆ ಕೆಲವರು ತಾವು ನ್ಯಾಯ ಪಡೆಯಲೇ ಬೇಕು, ತಮಗಾದ ಅನ್ಯಾಯಕ್ಕೆ ತಲೆಬಾಗಲಾರೆ ಎಂದು ಸೆಣಸಿದರೆ ಅವರನ್ನು ಗೌರವಿಸುವ ಸಮಾಜವೂ ಇಲ್ಲ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ನ್ಯಾಯಸ್ಥಾನವೂ ಇಲ್ಲ ಎಂಬುದು ಈ ಜಗದ ವಿಪರ್ಯಾಸ.

ದಿನಾಂಕ 14 ಜೂನ್ 2024 ರಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರವರ ಮೇಲಿರುವ ಪೋಕ್ಸೋ ಪ್ರಕರಣದ ಜಾಮೀನು ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ, ಆಪಾದಿತರ ನಡೆ ನುಡಿಗಳ ಬಗ್ಗೆ ಚರ್ಚೆಯಾಗುವ ಬದಲು ದೂರುದಾರಳ ವಿವರಗಳ ಕೂಲಂಕುಷ ಚರ್ಚೆ ನಡೆಯಿತು.

ದೂರುದಾರಳ ಅಸಹಜ ಸಾವು, ಅವಳು ತಮ್ಮ ದೀರ್ಘ ಹೋರಾಟದಲ್ಲಿ ಎದುರಿಸಿರಬಹುದಾದ ಮಾನಸಿಕ ಯಾತನೆ, ಸಮಾಜದಲ್ಲಿ 'ಪ್ರತಿಷ್ಠಿತರು' ಎಂದು ಕರೆಯಿಸಿಕೊಂಡೂ ಇಂತಹ ಆರೋಪಕ್ಕೆ ಒಳಗಾಗುವ ಮತ್ತು ಅದು ಸಾರ್ವಜನಿಕಗೊಳ್ಳದಂತೆ ತಪ್ಪಿಸಿಕೊಳ್ಳಲು ನ್ಯಾಯಾಲಯಗಳಿಂದ ಪ್ರಸಾರ ನಿರ್ಬಂಧವೂ ಸೇರಿದಂತೆ, ತಮಗಿರುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳುವವರಿಂದ ಎಂತೆಂತಹ ಬೆದರಿಕೆಗಳನ್ನು ಎದುರಿಸಿರಬಹುದು ಎಂಬುದು ಯಾಕೆ ಈ ಸಮಾಜಕ್ಕೆ ಪ್ರಶ್ನೆಯಾಗುವುದೇ ಇಲ್ಲ? ಅದೂ ನ್ಯಾಯಪೀಠದಲ್ಲಿ ಕುಳಿತು ನ್ಯಾಯದ ಪರವಾಗಿ, ಸಂವಿಧಾನವನ್ನು ಪಾಲಿಸುವ ಪ್ರಮಾಣ ಮಾಡಿದವರೂ ಯಾಕೆ ಇಷ್ಟು ಪಕ್ಷಪಾತಿಗಳಾಗುತ್ತಾರೆ?

ನ್ಯಾಯಪೀಠದಿಂದ ಮಹಿಳೆಯರ ಘನತೆಗೆ ಕುಂದುಂಟು ಮಾಡುವ ಮಾತುಗಳು, ತೀರ್ಪುಗಳು ಈ ಹಿಂದೆಯೂ ಬಂದಿವೆ. ಅತ್ಯಾಚಾರ, ಕಸ್ಟೋಡಿಯಲ್ ರೇಪ್, ಸಾಮೂಹಿಕ ಅತ್ಯಾಚಾರಗಳಂತಹ ಪ್ರಕರಣಗಳನ್ನು ಬಹಳ ಹಗುರವಾಗಿ ಪರಿಗಣಿಸಿದ, ಆರೋಪಿಗಳ ಬದಲು ದೂರುದಾರರನ್ನೇ ದೂಷಿಸಿದ ಎಷ್ಟೋ ಪ್ರಕರಣಗಳು ಈ ನೆಲದ ಸತ್ಯಗಳಾಗಿ ಸದಾ ಅಣಕಿಸುತ್ತಲೇ ಇವೆ. 70 ರ ದಶಕದ ಮಥುರಾ, 80–90 ರ ಭಾಂವ್ರಿ, ಇನ್ನೂ ಅನೇಕಾನೇಕ ಪ್ರಕರಣಗಳಿವೆ.

ಅವೆಲ್ಲವುಗಳನ್ನೂ ಈಗಲೂ ಮತ್ತೆ ಮತ್ತೆ ಪ್ರಸ್ತಾಪಿಸುತ್ತೇವೆ. ನ್ಯಾಯಕ್ಕಾಗಿ ನಮ್ಮ ಕೂಗು ನಡೆಯುತ್ತಲೇ ಇದೆ. ಆದರೆ ಸಂವೇದನೆ ಇನ್ನಷ್ಟು ಮಂದವಾಗುತ್ತಿದೆ. 2020 ರಲ್ಲಿ ಸಂಬಂಧಿಸಿ ರಾಕೇಶ್ ಬಿ./ಸ್ಟೇಟ್ ಆಫ್ ಕರ್ನಾಟಕ ಪ್ರಕರಣದಲ್ಲಿ ದೂರುದಾರಳ ನಡತೆಯ ಮೇಲೆ ಮಾಡಿದ ಹಗುರ ಹೇಳಿಕೆ (ನಂತರ ಅದನ್ನು ಎಕ್ಸಪಂಜ್ ಮಾಡಲಾದ ವಿಶೇಷ ಪ್ರಸಂಗದ ಪ್ರಕರಣವದು) ನಮ್ಮ ಸ್ಮೃತಿಪಟಲದಿಂದ ಮಾಸಿಲ್ಲವಷ್ಟೆ.

ಈಗ ಮತ್ತೆ ತನ್ನ ತಾಯಿ ನಡೆಸುತ್ತಿದ್ದ ಹೋರಾಟವನ್ನು, ತನ್ನ ತಂಗಿಯ ಘನತೆಯ ಬದುಕಿಗೆ ಕೊಳ್ಳಿ ಇಟ್ಟ ಘಟನೆಗಳಿಗೆ ನ್ಯಾಯ ಕೇಳುತ್ತಿರುವ ಮಗ, ಸ್ವತಃ ನೋವಿನಿಂದ ನರಳುತ್ತಿರುವ ಆ ಯುವತಿ ಇವರೆಲ್ಲ ಘನತೆಗೆ ತಕ್ಕುದಾದವರಲ್ಲವೇ? ಟಾಮ್ ಡಿಕ್ ಅಂಡ್ ಹ್ಯಾರಿಗಳು ಮಾಡಿದರೆ ಮಾತ್ರ ಅಪರಾಧವಾಗುತ್ತದೆ. 'ಘನತೆವೆತ್ತ' ಮಾಜಿ ಮಂತ್ರಿಗಳು, ಶಾಸಕರು, ಸಂಸದರು ಇತ್ಯಾದಿ ಬಲಾಢ್ಯರಿಗೆ ವಿಶೇಷ ಅವಕಾಶ ನೀಡಲು ಕಾನೂನು ಮಾನ್ಯತೆ ನೀಡುವುದೇ ಲಿಂಗ ಸಂವೇದನೆಯ, ಸಂವಿಧಾನ ಖಾತ್ರಿಪಡಿಸುವ ಘನತೆಯ ಬದುಕು ಎಲ್ಲರಿಗೂ ಸಿಗುವಂತೆ ಮಾಡುವುದು ನ್ಯಾಯಪೀಠದ ಕೆಲಸ ಎಂಬುದನ್ನು ನ್ಯಾಯಸ್ಥಾನದಲ್ಲಿ ಇರುವವರಿಗೂ ತಿಳಿಸಿಕೊಡುವವರಾರು?

ಹಿಂದೂ ಕುಟುಂಬದಲ್ಲಿ ಮುಸ್ಲಿಂ ಧರ್ಮದ ಹೆಸರು

ರಾಹುಲ್ ಬಾಳಪ್ಪ

ಇವತ್ತು ಇಡೀ ದೇಶದಲ್ಲಿ ಧಾರ್ಮಿಕ ಸಾಮರಸ್ಯ ಹೆಚ್ಚು ಚರ್ಚೆಯಾಗುತ್ತಿರುವ ರಾಷ್ಟ್ರೀಯ ಮಹತ್ವದ ವಿಷಯ. ಆದರೆ ನೂರಾರು ವರ್ಷಗಳ ಕಾಲದಿಂದಲೂ ಹಿಂದೂ–ಮುಸ್ಲಿಂ ಎಂಬ ಭೇದ ಇಲ್ಲದೇ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಹೆಗಲಾಗಿ ಸೌಹಾರ್ದ ಹಾಗೂ ಸಾಮರಸ್ಯದ ಬದುಕು ನಡೆದುಕೊಂಡು ಬಂದಿರುವುದಕ್ಕೆ ನನ್ನ ಕುಟುಂಬದ ಒಂದು ಉದಾಹರಣೆಯನ್ನು ನಿಮಗೆ ನೀಡುತ್ತಿರುವೆ.

ನಮ್ಮದು ಒಂದು ಸಾಮಾನ್ಯ ಕೂಲಿಕಾರರ ಕುಟುಂಬ. ನನ್ನ ತಂದೆ ತಾಯಿಗೆ ನಾಲ್ಕು ಮಕ್ಕಳು, ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನಾನು ಕೊನೆಯವನು.



ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಾಳೆಮ್ಮ ಕ್ಯಾಂಪ್ (ಶರಣಬಸವೇಶ್ವರ ನಗರ) ನಮ್ಮೂರು. ನನ್ನ ಅಣ್ಣನ ಹೆಸರು ಹುಸೇನಪ್ಪ .ಇವರು ನನ್ನ ತಂದೆ ತಾಯಿಗೆ ಮೊದಲನೇ ಮಗ. ನನ್ನ ತಂದೆ ಮದುವೆಯಾದ ಸಂದರ್ಭದಲ್ಲಿ ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದರು. ಅಷ್ಟರಲ್ಲಿ ನನ್ನ ತಾಯಿಗೆ ಎರಡು ಸಾರಿ ಗರ್ಭಪಾತವಾಗಿತ್ತು. ಒಂದು ಕಡೆ ತಂದೆಯ ತೀವ್ರ ಅನಾರೋಗ್ಯ ಇನ್ನೊಂದು ಕಡೆ ಮಕ್ಕಳಾಗದೇ ಇರುವ ಯಾತನೆ ಈ ರೀತಿ ಸಮಸ್ಯೆ ನನ್ನ ತಂದೆ ತಾಯಿ ಯನ್ನು ಕಾಡುತ್ತಿತ್ತು. ನಮ್ಮ ಊರಿನ ಹತ್ತಿರದಲ್ಲಿ ಮುದಗಲ್ ಎಂಬ ಗ್ರಾಮವುಲ್ ಪ್ರಸಿದ್ಧ ಮೊಹರಂ ಜಾತ್ರೆಗೆ ಹೆಸರುವಾಸಿ. ಅಲ್ಲಿಗೆ ಹೋಗಿ ಹರಕೆ ಕಟ್ಟಿಕೊಳ್ಳುವುದು ಬಹಳ ಹಿಂದಿನಿಂದ ಇರುವ ಪದ್ಧತಿ. ಇಂತಹ ಸಮಸ್ಯೆಗಳು ಪರಿಹಾರ ಆಗುತ್ತವೆ ಎಂಬ ನಂಬಿಕೆ ಸುತ್ತಮುತ್ತಲಿನ ಪ್ರದೇಶಗಳ ಜನರಲ್ಲಿ ಇದೆ. ಈಗಲೂ ಹರಕೆ ಹೊರುತ್ತಾರೆ.

ವರ್ಷಕ್ಕೊಮ್ಮೆ ನಡೆಯುವ ಮೊಹರಮ್ ಜಾತ್ರೆಯಲ್ಲಿ ಪೂಜಿಸುವ ಹುಸೇನ ದೇವರು ಬಹಳ ಶಕ್ತಿ ದೇವರು ಎಂದು ಪ್ರಸಿದ್ದಿ. ಮೊಹರಮ್ ದಿನದಂದು ಅಲಾಯಿ ದೇವರ ಮೂರ್ತಿ ಕೂರಿಸುವುದು ಈ ಹಬ್ಬದ ವಿಶೇಷ.

ಈ ಪ್ರದೇಶದ ಜನಪದರ ನಂಬಿಕೆಯಂತೆ ನನ್ನ ತಾಯಿ ಕೂಡ ಈ ದೇವರ ಮುಂದೆ ಹರಕೆ ಕಟ್ಟಿಕೊಳ್ಳುತ್ತಾಳೆ. "ತನ್ನ ಗಂಡನ ಆರೋಗ್ಯವನ್ನು ಈ ದೇವರು ಗುಣಪಡಿಸಿದರೆ, ತನಗೆ ಜನಿಸುವ ಮೊದಲ ಗಂಡು ಮಗುವಿಗೆ ಈ ದೇವರ ಹೆಸರನ್ನು ಇಡುವುದೇ" ನನ್ನ ತಾಯಿಯ ಹರಕೆಯಾಗಿತ್ತು.

ಕಾಕತಾಳೀಯ ಎಂಬಂತೆ ನನ್ನ ತಂದೆಯ ಆರೋಗ್ಯವು ಕೂಡ ಸುಧಾರಿಸಿತು. ಇದಾದ ನಂತರ ಮೊದಲನೇ ಮಗ ಜನಿಸಿದ. ಹರಕೆ ಹೊತ್ತಂತೆ ಈ ಮಗುವಿಗೆ ಹುಸೇನಪ್ಪ ಎಂದು ನಾಮಕರಣ ಮಾಡಲಾಯಿತು. ನನ್ನ ಅಣ್ಣನ ಶಾಲಾ ದಾಖಲೆಗಳು ಸೇರಿದಂತೆ ಎಲ್ಲಾ ದಾಖಲೆಗಳಲ್ಲೂ ಈ ಹೆಸರೇ ಇದೆ. ಈಗಲೂ ಈ ಹೆಸರೇ ಮುಂದುವರೆದಿದೆ.

ಹಿಂದೂ ಕುಟುಂಬದಲ್ಲಿ ಮುಸ್ಲಿಂ ಹೆಸರು ಇರುವ ಬಗ್ಗೆ ನಮ್ಮ ಭಾಗದಲ್ಲಿ ಯಾರೂ ಅಶ್ಚರ್ಯ ವ್ಯಕ್ತಪಡಿಸುವುದಿಲ್ಲ. ಏಕೆಂದರೆ ನಮ್ಮ ಬದುಕಿನಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯ ಹಾಸುಹೊಕ್ಕಾಗಿದೆ.

ಆದರೆ ಈಗಿನ ಸಮಾಜದ ಸ್ಥಿತಿಗತಿಗಳನ್ನು ನೋಡಿದಾಗ, ಒಂದು ಧರ್ಮದ ಪ್ರತಿಷ್ಠೆಗಾಗಿ ಇನ್ನೊಂದು ಧರ್ಮವನ್ನು ಅವಹೇಳನ ಮಾಡುತ್ತಿರುವ ಮನಸ್ಥಿತಿಗಳು ಎಲ್ಲೆಡೆ ಯಾವುದೇ ಎಗ್ಗಿಲ್ಲದೇ ನಡೆಯುತ್ತಿರುವುದು ನಮ್ಮ ಸಹೋದರತ್ವದ ಬುನಾದಿಯನ್ನೇ ಅಲುಗಾಡುವಂತೆ ಮಾಡುತ್ತಿದೆ.



ಬಿಜೆಪಿ ಮತ್ತು ಅದರ ನಾಯಕತ್ವದ ಎನ್.ಡಿ.ಎ ಕೂಟಕ್ಕೆ ಪೂರ್ವ ರಾಜ್ಯಗಳಲ್ಲಿ ಮಿಶ್ರ ಫಲಿತಾಂಶ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ನಷ್ಟ ಅನುಭವಿಸಿದರೆ, ಒಡಿಶಾದಲ್ಲಿ ಅನಿರೀಕ್ಷಿತವಾಗಿ ಸ್ವೀಪ್ ಮಾಡಿದೆ. ಸಿಕ್ಕಿಂ ನಲ್ಲಿ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ. ಪೂರ್ವ ಪ್ರದೇಶದಲ್ಲಿ ಎನ್.ಡಿ.ಎ ಮತ್ತು ಇಂಡಿಯಾ ಕೂಟಗಳಲ್ಲದೆ ಇತರ ಪಕ್ಷಗಳು – ಪ.ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್, ಒಡಿಶಾದಲ್ಲಿ ಬಿಜೆಡಿ, ಸಿಕ್ಕಿಂನಲ್ಲಿ ಎಸ್.ಕೆ.ಎಂ. ಮತ್ತು ಎಸ್.ಡಿ.ಎಫ್. ಸ್ಪರ್ಧೆಯಲ್ಲಿ ಪ್ರಮುಖವಾಗಿದ್ದವು..

ಎನ್.ಕೆ.ವಿ.

ಪೂರ್ವ ರಾಜ್ಯಗಳಲ್ಲಿ ಮಿಶ್ರ ಫಲಿತಾಂಶ

ಪೂರ್ವ ಪ್ರದೇಶದಲ್ಲಿ, ಒಟ್ಟು 64 ಸೀಟುಗಳು ಇದ್ದು, ಅದರಲ್ಲಿ ಎನ್.ಡಿ.ಎ. ಕೂಟ 6 ಸೀಟುಗಳನ್ನು ಹೆಚ್ಚುವರಿಯಾಗಿ ಪಡೆದು 32 ಸೀಟುಗಳಿಗೆ ಏರಿದೆ. ಪ.ಬಂಗಾಳದಲ್ಲಿ 6 ಸೀಟು ಕಳೆದುಕೊಂಡರೆ, ಒಡಿಶಾದಲ್ಲಿ 12 ಸೀಟು ಗಳಿಸಿದೆ. ಇಂಡಿಯಾ ಕೂಟ 1 ಸೀಟು ಕಳೆದುಕೊಂಡು 2 ಸೀಟುಗಳಿಗೆ ಸೀಮಿತವಾಗಿದೆ. ಇಲ್ಲಿ ಇತರರ ಜತೆ ಸೇರಿಸಲಾದ ತೃಣಮೂಲ ಕಾಂಗ್ರೆಸ್ 29, ಸಿಕ್ಕಿಂನಲ್ಲಿ ಎಸ್.ಕೆ.ಎಂ. 1 ಸೀಟು ಗಳಿಸಿದೆ. ಎನ್.ಡಿ.ಎ. ಕೂಟ ಈ ಪ್ರದೇಶದಲ್ಲಿ ಒಟ್ಟಾಗಿ ಶೇ.0.7 ಮತ ಹೆಚ್ಚಿಸಿಕೊಂಡು ಶೇ.40.3 ಮತ ಗಳಿಸಿದೆ. ಇಂಡಿಯಾ ಕೂಟ ಸಹ ಶೇ.2.5 ರಷ್ಟು ಮತಗಳಿಕೆ ಹೆಚ್ಚಿಸಿಕೊಂಡು ಶೇ. 11.6 ಮತ ಗಳಿಸಿದೆ. ಇತರರು (ತೃಣಮೂಲ ಕಾಂಗ್ರೆಸ್) ಶೇ. 3.2 ಮತ ಕಳೆದುಕೊಂಡು ಸಹ ಇಲ್ಲಿ ಅತ್ಯಧಿಕ ಶೇ.48.1 ಮತ ಗಳಿಸಿದ್ದಾರೆ. ಆದರೆ ರಾಷ್ಟ್ರಮಟ್ಟದ ದೃಷ್ಟಿಯಿಂದ ಹೇಳುವುದಾದರೆ, ಪೂರ್ವ ಪ್ರದೇಶದಲ್ಲಿ, ಕಾಂಗ್ರೆಸ್ ಕೂಟ (ತೃಣಮೂಲ ಸಹ ಈ ಕೂಟದ ಭಾಗವಾದ್ದರಿಂದ) 31 ಸೀಟು ಗಳಿಸಿದೆ. ಬಿಜೆಪಿಗಿಂತ ಹೆಚ್ಚಿನ ಮತಪ್ರಮಾಣ ಗಳಿಕೆ ಸಾಧಿಸಿದೆ.

ಪೂರ್ವ ಪ್ರದೇಶದ ಸೀಟು–ಮತಪ್ರಮಾಣ ಗಳಿಕೆ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ.	32	+6	40.3	+0.7
ಇಂಡಿಯಾ	2	-1	11.6	+2.5
ಇತರೆ (ತೃಣಮೂಲ +ಎಸ್.ಕೆ.ಎಂ)	30	-5	48.1	-3.2

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದಲ್ಲಿ ಎನ್.ಡಿ.ಎ. (ಈ ರಾಜ್ಯದಲ್ಲಿ ಎನ್.ಡಿ.ಎ. ಎಂದರೆ ಬಿಜೆಪಿಯೇ) ಭಾರೀ ಹೆಚ್ಚಳ ಸಾಧಿಸುತ್ತದೆ ಎಂದು ಒಪಿನಿಯನ್ ಮತ್ತು ಎಕ್ಸಿಟ್ ಪೋಲ್‌ಗಳು ಹೇಳಿದ್ದವು. ಈ ಪೋಲ್‌ಗಳನ್ನು ಪ.ಬಂಗಾಳದ ಮತದಾರರು ತಿರಸ್ಕರಿಸಿದ್ದಾರೆ. ಬಿಜೆಪಿ ಸೀಟುಗಳಲ್ಲಿ ಮೂರನೇ ಒಂದು ಭಾಗದಷ್ಟು (18ರಿಂದ 12ಕ್ಕೆ) ಮತಪ್ರಮಾಣದಲ್ಲೂ ಸ್ವಲ್ಪ ನಷ್ಟ (ಶೇ.1.7) ಅನುಭವಿಸಿದೆ. ಈ ರಾಜ್ಯದಲ್ಲಿ ಇಂಡಿಯಾ ಕೂಟ ಒಗ್ಗಟ್ಟಾಗಿ ಸ್ಪರ್ಧಿಸಲಿಲ್ಲ. ತೃಣಮೂಲ 2 ಕ್ಕಿಂತ ಹೆಚ್ಚು ಸೀಟುಗಳನ್ನು ಕೂಟದ ಇತರ ಪಕ್ಷಗಳಿಗೆ ಬಿಟ್ಟುಕೊಡಲು ತಯಾರಾಗಲಿಲ್ಲ. ಹಾಗಾಗಿ ಕಾಂಗ್ರೆಸ್ ಮತ್ತು ಸಿಪಿಐ(ಎಂ) ನಾಯಕತ್ವದ ಎಡರಂಗ ಮೂರನೇ ಕೂಟ ರಚಿಸಿ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸಿದ್ದವು. ಇಂಡಿಯಾ ಕೂಟ 2019 ರಲ್ಲಿದ್ದ 2 ರಲ್ಲಿ 1 ಸೀಟು ಕಳೆದುಕೊಂಡು 1 ಸೀಟಿಗೆ ಇಳಿದಿದೆ. ಕಾಂಗ್ರೆಸ್ 12 ಮತ್ತು ಎಡರಂಗ 30 ಸ್ಥಾನಗಳಲ್ಲಿ ಸ್ಪರ್ಧಿಸಿದ್ದವು. 2019ಕ್ಕೆ ಹೋಲಿಸಿದರೆ ಶೇ.2.0 ಮತಗಳಿಕೆ ಕಡಿಮೆಯಾಗಿದೆ. ಆದರೆ ಎಡರಂಗ ಮತ್ತು ಕಾಂಗ್ರೆಸ್ 2019ರಲ್ಲಿ ಪ್ರತ್ಯೇಕವಾಗಿ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸಿದ್ದರಿಂದ ಎರಡನ್ನು ಹೋಲಿಸುವುದು ಕಷ್ಟ. ಎಡರಂಗ ಮತ್ತು ಕಾಂಗ್ರೆಸ್ ಸ್ಪರ್ಧಿಸಿದಾಗ ಪರಸ್ಪರ ಮತ ವರ್ಗಾವಣೆ ಪೂರ್ತಿ ಆಗಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರ ನಡೆಸುತ್ತಿರುವ ಪಕ್ಷಗಳ ವಿರುದ್ಧದ ಆಡಳಿತದ–ವಿರುದ್ಧ ಅತೃಪ್ತಿಯ ಪ್ರಯೋಜನ ಪಡೆಯಲು ಸಾಧ್ಯವಾಗಿಲ್ಲ ಎಂದಷ್ಟೇ ಹೇಳಬಹುದು. ಇತರರಲ್ಲಿ ಪ್ರಮುಖವಾಗಿ ಇಂಡಿಯನ್ ಸೆಕ್ಯುಲರ್ ಫ್ರಂಟ್ 17, ಬಿ.ಎಸ್.ಪಿ. 5, ಎಐಎಂಐಎಂ 4 ಸೀಟುಗಳಲ್ಲಿ ಸ್ಪರ್ಧಿಸಿದ್ದವು.

ಪಶ್ಚಿಮ ಬಂಗಾಳದ ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ.	12	-6	38.7	-1.7
ಇಂಡಿಯಾ	1	-1	11.00	-2.0
ತೃಣಮೂಲ ಕಾಂಗ್ರೆಸ್	29	+7	45.8	+2.5
ಇತರೆ	0	0	3.5	+1.0

ತೃಣಮೂಲ ಕಾಂಗ್ರೆಸ್ ಮತ್ತು ಅದರ ಸರಕಾರ, ಕಾಂಗ್ರೆಸ್, ಎಡಪಕ್ಷಗಳು, ಬಿಜೆಪಿ ಸೇರಿದಂತೆ ಯಾವ ರಾಜಕೀಯ ಪಕ್ಷವೂ ಕೆಲಸ ಮಾಡದಂತೆ ಪೊಲೀಸ್ ಮತ್ತು ತನ್ನ ಕಾರ್ಯಕರ್ತರನ್ನು ಬಳಸಿ ಹಿಂಸಾಚಾರ, ದಮನ ಮಾಡುತ್ತಾ ಬಂದಿದೆ. ಚುನಾವಣೆಗಳ ಮೊದಲು ಈ ಹಿಂಸಾಚಾರ, ದಮನ ತಾರಕಕ್ಕೇರುತ್ತದೆ. ಚಿಟ್ ಫಂಡ್ಸ್ ನಂತಹ ಹಲವು ಹಗರಣಗಳು, ಸಂದೇಶಖಲಿ ಯಂತಹ ದಮನಕಾರಿ ಅಟಾಟೋಪದ ಆಡಳಿತ ಬರಿಯ ಬಿಜೆಪಿಯ ಆಪಾದನೆಯಲ್ಲ, ವಾಸ್ತವವೇ. ಬಿಜೆಪಿ ಪಕ್ಷ ಮತ್ತು ಕೇಂದ್ರ ಸರಕಾರ ರಾಜ್ಯಪಾಲರನ್ನು ಕೇಂದ್ರ ಪಡೆ ಕೇಂದ್ರೀಯ ಏಜೆನ್ಸಿಗಳನ್ನು ಬಳಸಿ ತೃಣಮೂಲ ಪಕ್ಷ ಮತ್ತು ಅದರ ಸರಕಾರವನ್ನು ಹಣಿಯಲು ಪ್ರಯತ್ನಿಸುತ್ತಾ ಬಂದಿದೆ. ಪಕ್ಷಾಂತರಕ್ಕೆ, 'ವಾಶಿಂಗ್ ಮಶೀನ್ ಭ್ರಷ್ಟಾಚಾರ ನಿರ್ಮೂಲನ"ಕ್ಕೆ ಪ್ರಯತ್ನಿಸುತ್ತಾ ಬಂದಿದೆ. ಕೋಮುವಾದಿ ಹಿಂಸಾಚಾರವನ್ನು ಪ್ರಚೋದಿಸುತ್ತಾ ಬಂದಿದೆ. ರಾಜ್ಯದ ವಿರುದ್ಧ ತಾರತಮ್ಯ ಮಾಡುತ್ತ ಬಂದಿದೆ. ಬಿಜೆಪಿಯ ಕೋಮು–ಧ್ರುವೀಕರಣ ಮತ್ತು ಜನತೆಗೆ ಸಂಕಷ್ಟ ತರುವ ಆರ್ಥಿಕ ನೀತಿಗಳ ವಿರುದ್ಧ ಜನತೆಗೆ ಆಕ್ರೋಶವಿತ್ತು.

ಕೆಲವು ನೇರನಗದು, ಸವಲತ್ತು ಕೊಡುವ ಮತ್ತಿತರ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಿದ್ದು ಬಿಟ್ಟರೆ ತೃಣಮೂಲದ ಬಳಿ ಯಾವುದೇ ಪರ್ಯಾಯ ನೀತಿಯಿಲ್ಲ. ಬಿಜೆಪಿ ಕೋಮು–ಧ್ರುವೀಕರಣದ ವಿರುದ್ಧ ಪ್ರತಿ ಕೋಮು–ಧ್ರುವೀಕರಣ ಬಿಟ್ಟರೆ ಅದರ ಬಳಿ ಯಾವುದೇ ಸೆಕ್ಯುಲರ್ ಬದಲಿ ಇಲ್ಲ. ಆದರೂ ಲೋಕಸಭಾ ಚುನಾವಣೆಯಾದ್ದರಿಂದ ಬಿಜೆಪಿ ಕೇಂದ್ರ ಸರಕಾರದ ಆಡಳಿತ–ವಿರೋಧಿ ಆಕ್ರೋಶ ಜನತೆಯ ಆಯ್ಕೆಯಲ್ಲಿ ನಿರ್ಣಾಯಕವಾಗಿದೆ. ರಾಜ್ಯ ಸರಕಾರಕ್ಕೆ ಅನುದಾನ ತೆರಿಗೆ ಹಂಚಿಕೆಯಲ್ಲಿ ಕಿರುಕುಳ, ರಾಜ್ಯದ ವಿರುದ್ಧ ತಾರತಮ್ಯ ಸಹ ಪ್ರಮುಖ ಅಂಶವಾಗಿದೆ. ರಾಜ್ಯ ಸರಕಾರದ ಸಾಧನೆಗಳು, ಕೊರತೆಗಳು ಗೌಣವಾಗಿವೆ.

ತ್ರಿಕೋನ ಸ್ಪರ್ಧೆಯಲ್ಲಿ ಒಟ್ಟಾರೆಯಾಗಿ ಮತ್ತು ಪ್ರತಿ ಕ್ಷೇತ್ರದ ಅತಿ ದೊಡ್ಡ ಸ್ಪರ್ಧಿಗೆ ಹೆಚ್ಚಿನ ಪ್ರಯೋಜನವಾಗುವುದು ಸ್ವಾಭಾವಿಕ. ಬರಿಯ ಅಂಕಗಣಿತದ ದೃಷ್ಟಿಯಿಂದ ನೋಡಿದರೆ ಒಟ್ಟಾರೆ ರಾಜ್ಯ ಮಟ್ಟದಲ್ಲಿ ನೋಡಿದರೆ ಇಂಡಿಯಾ ಕೂಟ ತೃಣಮೂಲ ಸೇರಿಸಿಕೊಂಡು ಒಟ್ಟಿಗೆ ಸ್ಪರ್ಧೆ ಮಾಡಿದ್ದರೆ ತಮಿಳುನಾಡಿನಂತೆ ಬಿಜೆಪಿಗೆ ಶೂನ್ಯ ಸಂಪಾದನೆಯಾಗುತ್ತಿತ್ತು ಎಂದು ವಾದಿಸಲಾಗುತ್ತದೆ. ಆದರೆ ಮತ್ತೆ ಅಂಕಗಣಿತದ ದೃಷ್ಟಿಯಿಂದ ಮಾತ್ರ ಕ್ಷೇತ್ರವಾರು ಆಗಿ ನೋಡಿದರೆ ತೃಣಮೂಲ 6 ಸೀಟುಗಳಲ್ಲಿ ತ್ರಿಕೋಣ ಸ್ಪರ್ಧೆಯ ಪ್ರಯೋಜನ ಪಡೆದು (ಅಂದರೆ 2 ಮುಖ್ಯ ಪ್ರತಿಸ್ಪರ್ಧಿಗಳಾದ ಬಿಜೆಪಿ, ಇಂಡಿಯಾ ಕೂಟ ಮತ ಸೇರಿಸಿದರೆ ಅದಕ್ಕಿಂತ ಕಡಿಮೆ ಮತ ಪಡೆದೂ) ಗೆದ್ದಿದೆ. ಬಿಜೆಪಿ 3 ಸೀಟುಗಳಲ್ಲಿ ಇಂತಹ ಪ್ರಯೋಜನ ಪಡೆದಿದೆ. ಅಂದರೆ ಮೂರು (ಕಾಂಗ್ರೆಸ್, ತೃಣಮೂಲ, ಎಡ) ಪಕ್ಷಗಳು ಇಂಡಿಯಾ ಕೂಟವಾಗಿ ಸ್ಪರ್ಧಿಸಿದ್ದರೆ ಮತ್ತು ಮೂರು ಪಕ್ಷಗಳ ಮತಗಳು ಪೂರ್ಣವಾಗಿ ಕೂಟದ ಸ್ಪರ್ಧಿ ಪಕ್ಷಕ್ಕೆ ವರ್ಗಾವಣೆಯಾಗುತ್ತದೆ ಎಂದರೂ ಇಂಡಿಯಾ ಕೂಟಕ್ಕೆ 3 ಹೆಚ್ಚು ಸೀಟು ಬರುತ್ತಿತ್ತು.

ಆದರೆ ಮೂರೂ ಪಕ್ಷಗಳ ನಡುವೆ ರಾಜಕೀಯ ಐಕ್ಯತೆಯಾಗಲಿ, ನೆಲೆಯಲ್ಲಿನ ವೈವಿಧ್ಯತೆಯಿಂದಾಗಿ ಪೂರ್ಣ ವರ್ಗಾವಣೆಯಾಗಲಿ ಪ್ರಾಯೋಗಿಕವಾಗಿರಲಿಲ್ಲ. ಭಾಗಶಃ ವರ್ಗಾವಣೆಯಿಂದಾಗಿ ಸೀಟುಗಳ ಹಾನಿ ಆಗುವ ಸಾಧ್ಯತೆ ಹೆಚ್ಚಿತ್ತು. ಹಾಗಾಗಿ ಕಾಂಗ್ರೆಸ್, ಎಡ ಪಕ್ಷಗಳು ಮಾತ್ರವಿರುವ ಇಂಡಿಯಾ ಕೂಟದ ಸ್ವತಂತ್ರ ಸ್ಪರ್ಧೆ ತೃಣಮೂಲ ಅಥವಾ ರಾಜ್ಯ ಸರಕಾರ ಆಡಳಿತ–ವಿರೋಧಿ ಮತಗಳು ಬಿಜೆಪಿಗೆ ಹೋಗುವುದನ್ನು ತಡೆದಿದೆ. ತೃಣಮೂಲ ಸಹ ಇಂಡಿಯಾ ಕೂಟದ ಭಾಗವಾಗಿದ್ದು, ಕೂಟದ ಐಕ್ಯ ಸ್ಪರ್ಧೆ ಆಗದಿದ್ದರೂ, ಬಿಜೆಪಿಯ ಸೀಟುಗಳನ್ನು ಕನಿಷ್ಠ ಮತ್ತು ಇಂಡಿಯಾ ಕೂಟದ ಸೀಟುಗಳನ್ನು ಗರಿಷ್ಠಗೊಳಿಸುವುದು ಸಾಧ್ಯವಾಗಿದೆ. ಇದು ಮೇಲಿನ ಚುನಾವಣಾ ಅಂಕಿಅಂಶಗಳ ವಿಶ್ಲೇಷಣೆಯಿಂದ ಹೊರಡುವ ಅಂಶ. ಆದರೆ ಚುನಾವಣೋತ್ತರ ಅವಧಿಯಲ್ಲಿ ವಿರೋಧ ಪಕ್ಷಗಳ, ಪ್ರಮುಖವಾಗಿ ಎಡಪಕ್ಷಗಳ ಕಚೇರಿ, ಕಾರ್ಯಕರ್ತರ ಮೇಲೆ ದಾಳಿ, ಹಿಂಸಾಚಾರ ಸಕಾರಾತ್ಮಕ ಬೆಳವಣಿಗೆಯಲ್ಲ.

ಒಡಿಶಾ

ಒಡಿಶಾ ಈ ಬಾರಿಯ ಚುನಾವಣೆಯಲ್ಲಿ, ಬಿಜೆಪಿಗೆ ಮೊದಲ ಬಾರಿಗೆ ನಿರ್ಣಾಯಕವಾಗಿ ಬೆಂಬಲಿಸಿದ ಮತ್ತು ಹಿಂದಿನ ಆಳುವ ಪ್ರಾದೇಶಿಕ ಪಕ್ಷವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಏಕಮಾತ್ರ ರಾಜ್ಯವಿರಬೇಕು. ಒಡಿಶಾದಲ್ಲಿ 21 ರಲ್ಲಿ 20 ಸೀಟು ಗಳಿಸುವ ಮೂಲಕ ಸ್ವೀಪ್ ಮಾಡಿದೆ. ಒಡಿಶಾದ ಈ ನಿರ್ಣಾಯಕ ವಿಜಯವಿಲ್ಲದೆ ಎನ್.ಡಿ.ಎ. ಆಗಿ ಸಹ ಸರಕಾರ ರಚಿಸುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಬಿಜೆಪಿ ಉತ್ತಮ ವಿಜಯ ಸಾಧಿಸುತ್ತದೆಯೆಂದು ನಿರೀಕ್ಷಿಸಲಾಗಿದ್ದರೂ, ಸ್ವೀಪ್ ನಿರೀಕ್ಷಿತವಾಗಿರಲಿಲ್ಲ. ಹೆಚ್ಚು ಕಡಿಮೆ ಬಿಜೆಪಿಯ ಪರವಾಗಿ ಭವಿಷ್ಯ ನುಡಿದ ಎಕ್ಸಿಟ್ ಪೋಲ್ ಗಳು ಸಹ ಒಡಿಶಾದಲ್ಲಿ ಬಿಜೆಪಿಗೆ ಇಷ್ಟು ಸೀಟು ಕೊಟ್ಟಿರಲಿಲ್ಲ.

ಒಡಿಶಾದಲ್ಲಿ ಸಹ ಎನ್.ಡಿ.ಎ. ಎಂದರೆ ಬಿಜೆಪಿ ಮಾತ್ರ. ಬಿಜೆಪಿ ಬಿಜು ಜನತಾದಳ(ಬಿಜೆಡಿ)ದ ಎಲ್ಲ 12 ಸೀಟುಗಳನ್ನು ಕಸಿದುಕೊಂಡು 20 ಸೀಟಿಗೇರಿದೆ. ಮತಪ್ರಮಾಣದಲ್ಲಿ ಸಹ ಶೇ.7.1ರಷ್ಟು ಹೆಚ್ಚಿನ ಮತ ಗಳಿಸಿದೆ.

ಈ ಬಾರಿ ಒಡಿಶಾದಲ್ಲಿ ಇಂಡಿಯಾ ಕೂಟದ ಭಾಗವಾಗಿ ಕಾಂಗ್ರೆಸ್ ಮತ್ತು ಜೆ.ಎಂ.ಎಂ. ಸೀಟು ಹೊಂದಾಣಿಕೆ ಮಾಡಿಕೊಂಡಿದ್ದು, ಕಾಂಗ್ರೆಸ್ 20 ಸೀಟುಗಳಲ್ಲಿ, ಜೆಎಂಎಂ ಒಂದರಲ್ಲಿ ಸ್ಪರ್ಧಿಸಿತ್ತು. ಇಂಡಿಯಾ ಕೂಟದ ಮತಪ್ರಮಾಣ ಸ್ವಲ್ಪ (ಶೇ.1.5) ಇಳಿಕೆಯಾಗಿದ್ದು, ಶೇ.13.2 ಗಳಿಸಿದೆ. ಕಾಂಗ್ರೆಸ್ ಕೊರಾಪುಟ್ ಕ್ಷೇತ್ರವನ್ನು ಮಾತ್ರ ಗೆದ್ದುಕೊಂಡಿದೆ. ಎಡಪಕ್ಷಗಳ ಜತೆ ಸೀಟು ಹೊಂದಾಣಿಕೆಯನ್ನು ಕಾಂಗ್ರೆಸ್ ನಿರಾಕರಿಸಿದ್ದರಿಂದ ಸ್ವತಂತ್ರವಾಗಿ ಸಿಪಿಐ, ಸಿಪಿಐ(ಎಂ) ಗಳು ಸ್ಪರ್ಧಿಸಿದ್ದವು. ಇವಲ್ಲದೆ ಬಿ.ಎಸ್.ಪಿ., ಎಸ್.ಪಿ., ಎ.ಜೆ. ಎಸ್.ಯು.ಪಿ., ಇತರ ಎಡ ಪಕ್ಷಗಳು, ಪಕ್ಷೇತರರು ಸ್ಪರ್ಧಿಸಿದ್ದರು. ಇತರರು ಶೇ.3.8 ಮತ ಗಳಿಸಿದ್ದಾರೆ.

ಒಡಿಶಾ – ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ.	20	+12	45.5	+7.1
ಇಂಡಿಯಾ	1	0	13.2	-1.5
ಬಿಜೆಡಿ	0	-12	37.5	-5.3
ಇತರೆ	0	0	3.8	-0.3

ಮೊದಲ ನೋಟಕ್ಕೆ ಬಿಜೆಪಿಯ ಗೆಲುವು ಸೀಟು, ಮತಗಳಿಕೆ ಎರಡರಲ್ಲೂ ಸಮಗ್ರವಾಗಿದೆ ಅಂತ ಕಂಡರೂ, ಮೂರು ಕೂಟಗಳ ಕ್ಷೇತ್ರವಾರು ಮತಗಳಿಕೆಯ ವಿವರಗಳಿಗೆ ಹೋದರೆ ಬಿಜೆಪಿ ತ್ರಿಕೋನ ಸ್ಪರ್ಧೆಯ ಪ್ರಯೋಜನ ಪಡೆದಿರುವುದು ಕಾಣುತ್ತದೆ. ತ್ರಿಕೋನ ಸ್ಪರ್ಧೆಯಲ್ಲಿ ಒಟ್ಟಾರೆಯಾಗಿ ಮತ್ತು ಪ್ರತಿ ಕ್ಷೇತ್ರದ ಅತಿ ದೊಡ್ಡ ಸ್ಪರ್ಧಿಗೆ ಹೆಚ್ಚಿನ ಪ್ರಯೋಜನವಾಗುವುದು ಸ್ವಾಭಾವಿಕ. ಬರಿಯ ಅಂಕಗಣಿತದ ದೃಷ್ಟಿಯಿಂದ ಒಟ್ಟಾರೆ ರಾಜ್ಯ ಪುಟ 6 ಕ್ಕೆ



ಆಂಧ್ರಪ್ರದೇಶದಲ್ಲಿನ ಚುನಾವಣೆಗಳಲ್ಲಿ ವೈಸಿಪಿ ಸೋಲಿಗೆ ಕಾರಣಗಳೇನು?

ಕೆ.ಯಸ್. ಲಕ್ಷ್ಮಣ ರಾವ್
(ಆಂಧ್ರ ವಿಧಾನ ಪರಿಷತ್ ಸದಸ್ಯರು)

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯ ಜೊತೆಗೆ ಆಂಧ್ರ ಪ್ರದೇಶದಲ್ಲಿನ ವಿಧಾನಸಭೆಗೂ ಚುನಾವಣೆ ನಡೆಯಿತು. ರಾಜ್ಯ ವಿಭಜನೆಯ ನಂತರ, ಆಂಧ್ರ ಪ್ರದೇಶ ವಿಧಾನಸಭೆಗೆ ನಡೆದ ಮೂರನೇ ಚುನಾವಣೆ ಇದು. ಈ ಚುನಾವಣೆಯಲ್ಲಿ ವೈ.ಎಸ್. ಆರ್. ಕಾಂಗ್ರೆಸ್ ಪಕ್ಷವು (YSRCP-YCP) ಹೀನಾಯ ಸೋಲನ್ನು ಅನುಭವಿಸಿದೆ. ಅದು ಕೇವಲ 11 ಸ್ಥಾನಗಳನ್ನು ಮಾತ್ರ ಗೆದ್ದುಕೊಂಡಿದೆ. ತೆಲುಗು ದೇಶಂ ಪಕ್ಷ(ಟಿಡಿಪಿ) ದ ಮೈತ್ರಿಕೂಟ 164 ಸ್ಥಾನಗಳೊಂದಿಗೆ ಭರ್ಜರಿ ಜಯಭೇರಿ ಬಾರಿಸಿದೆ. ಲೋಕಸಭೆ ಚುನಾವಣೆಯಲ್ಲಿ ಒಟ್ಟು 25 ಸ್ಥಾನಗಳಲ್ಲಿ 21 ಸ್ಥಾನಗಳನ್ನು ಟಿಡಿಪಿ ಮೈತ್ರಿ ಕೂಟ ಪಡೆದುಕೊಂಡಿದ್ದರೆ, 4 ಸ್ಥಾನಗಳಲ್ಲಿ ವೈಸಿಪಿ ಗೆದ್ದಿದೆ. ವೈಸಿಪಿ ಇಷ್ಟು ದೊಡ್ಡ ಸೋಲಿಗೆ ಕೆಲವು ಪ್ರಮುಖ ಕಾರಣಗಳೇನು ಎಂಬುದನ್ನು ನಾವು ಪರಿಶೀಲಿಸೋಣ.

ಆಂಧ್ರಪ್ರದೇಶದಲ್ಲಿ ನಡೆದ ಲೋಕಸಭೆ ಮತ್ತು ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ವೈ.ಎಸ್.ಆರ್. ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋತಿದೆ. ಅದು 11 ವಿಧಾನಸಭಾ ಸ್ಥಾನಗಳನ್ನು ಮಾತ್ರ ಗೆದ್ದುಕೊಂಡಿದೆ. 4 ಲೋಕಸಭಾ ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ. ತೆಲುಗು ದೇಶಂ ಪಕ್ಷದ ಮೈತ್ರಿಕೂಟ ಭರ್ಜರಿ ಜಯ ಸಾಧಿಸಿದೆ. ರಾಜ್ಯದ ಎಲ್ಲೆಡೆಯೂ ಪ್ರದೇಶಗಳನ್ನು ಲೆಕ್ಕಿಸದೆ, ಉತ್ತರ ಆಂಧ್ರ, ದಕ್ಷಿಣ ಕರಾವಳಿ, ರಾಯಲಸೀಮ ಈ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ರೀತಿಯ ಯಶಸ್ಸನ್ನು ಈ ಮೈತ್ರಿ ಕೂಟ ಸಾಧಿಸಿದೆ. ವೈ.ಎಸ್. ಜಗನ್ ಮೋಹನ್ ರೆಡ್ಡಿ ಸಂಪುಟದ 26 ಸಚಿವರ ಪೈಕಿ 24 ಮಂದಿ ಸೋಲು ಕಂಡಿದ್ದಾರೆ. ಹಿಂದಿನ 13 ಜಿಲ್ಲೆಗಳ ಪೈಕಿ 8 ಜಿಲ್ಲೆಗಳಲ್ಲಿ ವೈಸಿಪಿಗೆ ಒಂದೇ ಒಂದು ಸ್ಥಾನ ಸಿಕ್ಕಿಲ್ಲ. 2024ರ ಚುನಾವಣೆಯಲ್ಲಿ ತೆಲುಗು ದೇಶಂ ಪಕ್ಷಕ್ಕೆ ಶೇ.45.60, ಜನಸೇನಾ ಶೇ.6.85 ಮತ್ತು ಬಿಜೆಪಿ ಶೇ.2.83 ಮತಗಳನ್ನು ಪಡೆದಿವೆ. ವೈಸಿಪಿ ಶೇ.39.37 ಮತಗಳಿಗೆ ಸೀಮಿತವಾಗಿತ್ತು. ಲೋಕಸಭೆ ಚುನಾವಣೆಯಲ್ಲಿ ಒಟ್ಟು 25 ಸ್ಥಾನಗಳಲ್ಲಿ 21 ಸ್ಥಾನಗಳನ್ನು ಮೈತ್ರಿ ಕೂಟ ಪಡೆದುಕೊಂಡಿದೆ. ವೈಸಿಪಿ ಯ ಇಷ್ಟು ದೊಡ್ಡ ಸೋಲಿಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಕೆಲವು ಪ್ರಮುಖ ಕಾರಣಗಳು ಇಲ್ಲಿವೆ.

ಜಗನ್ ಮೋಹನ್ ರೆಡ್ಡಿ ಸರ್ವಾಧಿಕಾರಿ ಧೋರಣೆ

2019 ರ ಚುನಾವಣೆಗೆ ಮುನ್ನ ಪಾದಯಾತ್ರೆಯಲ್ಲಿ ಜನರ ಜೊತೆ ಬೆರೆತ ಜಗನ್ ಮೋಹನ್ ರೆಡ್ಡಿ, ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಪ್ರಜಾಪ್ರಭುತ್ವದ ಪ್ರವೃತ್ತಿಗೆ ವ್ಯತಿರಿಕ್ತವಾಗಿ ನಿರಂಕುಶ ಮತ್ತು ಅಹಂಕಾರದ ಧೋರಣೆಯೊಂದಿಗೆ ಆಡಳಿತವನ್ನು ಮುಂದುವರೆಸಿದರು. ಜನತೆ ಮತ್ತು ಅವರ ನಡುವೆ 'ಕಬ್ಬಿಣದ ಪರದೆ' ಏರ್ಪಟ್ಟಿತ್ತು. ಆಂಧ್ರಪ್ರದೇಶ ಇಬ್ಭಾಗ ಆಗುವ ಮೊದಲು ವೈ. ಎಸ್.ರಾಜಶೇಖರ್ ರೆಡ್ಡಿ ಅವರು 2004–2009ರ ನಡುವೆ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆಗ ಅವರು ಒಂದು ಕ್ರಮಬದ್ಧತೆಯಲ್ಲಿ ಜನರನ್ನು, ಜನರ ಪ್ರತಿನಿಧಿಗಳನ್ನು, ಸಂಘ ಸಂಸ್ಥೆಗಳ ಮುಖಂಡರನ್ನು, ರಾಜಕೀಯ ಮುಖಂಡರನ್ನು ಮತ್ತು ಅಧಿಕಾರಿಗಳನ್ನು ಭೇಟಿಯಾಗುತ್ತಿದ್ದರು. ಬೆಳಗ್ಗೆ 9 ಗಂಟೆಗೆಲ್ಲಾ ಬೇಗಂಪೇಟೆಯ ಕ್ಯಾಂಪ್ ಕಚೇರಿಯಲ್ಲಿ ಹಲವರನ್ನು ಒಟ್ಟುಗೂಡಿಸಿ, ಅವರು ಹೇಳುವ ವಿಷಯಗಳನ್ನು ಆಸಕ್ತಿಯಿಂದ ಕೇಳಿ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದರು.

ಐದು ವರ್ಷ ಆಡಳಿತ ನಡೆಸಿದ ಜಗನ್ ಮೋಹನ್ ರೆಡ್ಡಿ ಅವರು ಜನರ ಪ್ರತಿನಿಧಿಗಳನ್ನು, ಶಾಸಕರು, ಸಂಸದರು, ಸಚಿವರು, ವಿಧಾನ ಪರಿಷತ್ ಸದಸ್ಯರನ್ನು, ವಿವಿಧ ಸಂಘ ಸಂಸ್ಥೆಗಳ ಮುಖಂಡರನ್ನು, ಬುದ್ಧಿಜೀವಿಗಳನ್ನು ಭೇಟಿ ಮಾಡಲು ಇಚ್ಛೆಸಲಿಲ್ಲ. ಇತರೆ ಮಾರ್ಗಗಳ ಮೂಲಕ ಜನರ ಸಮಸ್ಯೆಗಳ ಕುರಿತಾದ ಮಾಹಿತಿಗಳನ್ನೂ ಅವರು ಸ್ವೀಕರಿಸಲಿಲ್ಲ. ಇದರ ಪರಿಣಾಮ ಸಜ್ಜಲ ರಾಮಕೃಷ್ಣಾ ರೆಡ್ಡಿ, ಧನುಂಜಯ ರೆಡ್ಡಿ ಮುಂತಾದವರು ಪ್ರಧಾನ ವ್ಯಕ್ತಿಗಳಾಗಿ ರೂಪುಗೊಂಡರು. ಮಾಹಿತಿಗಳು ಮುಖ್ಯಮಂತ್ರಿಯವರ ತನಕ ಹೋಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಉದಾಹರಣೆಗೆ, 1,05,000 ಅಂಗನವಾಡಿ ಕಾರ್ಯಕರ್ತೆಯರು 42 ದಿನಗಳ ಕಾಲ ಮುಷ್ಕರ ನಡೆಸಿದರೆ, ಅದರ ಪರಿಹಾರದ ಭಾಗವಾಗಿ ಮುಖ್ಯಮಂತ್ರಿಯನ್ನು ಭೇಟಿ ಮಾಡಲು ಅವರಿಗೆ ಅವಕಾಶವೇ ಸಿಗಲಿಲ್ಲ. ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರು ಮುಖ್ಯಮಂತ್ರಿಗಳಿಗೆ ತಮ್ಮ ಅಹವಾಲು ಸಲ್ಲಿಸಲು ಅವಕಾಶ ಕಚೇರಿಗಳಲ್ಲಿ ಸಿಗದೆ, ಜಿಲ್ಲೆಗಳಲ್ಲಿರುವ ಹೆಲಿಪ್ಯಾಡ್ ಗಳಲ್ಲಿ ಮಾತ್ರ ಸಿಗುತ್ತಿತ್ತು. ಇದು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಲ್ಲಿ ತೀವ್ರ ಅಸಂತೃಪ್ತಿ ಮತ್ತು ನಿರಾಸೆಗೆ ಕಾರಣವಾಯ್ತು. ಇದರೊಂದಿಗೆ 'ಸ್ವಯಂಸೇವಕ ವ್ಯವಸ್ಥೆ' ಪಕ್ಷದ ಕಾರ್ಯಕರ್ತರಿಗೆ ಆದ್ಯತೆ ಇಲ್ಲದಂತೆ ಮಾಡಿದ್ದು ಕಾರ್ಯಕರ್ತರಲ್ಲಿ ಪಕ್ಷದ ಮೇಲಿನ ಉತ್ಸಾಹದ ಕೊರತೆ ಉಂಟಾಯಿತು. ಸ್ವಯಂಸೇವಕರು, ಸಚಿವಾಲಯದ ವ್ಯವಸ್ಥೆಯನ್ನು ಹೊಂದಿರುವ ಸ್ಥಳೀಯ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಪ್ರಾಧಾನ್ಯತೆ ಕಳೆದುಕೊಂಡರು.

ಮೂಲಸೌಕರ್ಯಗಳ ಸೃಷ್ಟಿ ಯಾವುದು?

ಐದು ವರ್ಷಗಳ ಆಡಳಿತದಲ್ಲಿ ಕಲ್ಯಾಣಕ್ಕಾಗಿ 'ಬಟನ್ ಒತ್ತುವ' ('ನೇರ ನಗದು ಯೋಜನೆ'–ಡಿಬಿಟಿ) ಮೂಲಕ ಜನರಿಗೆ 2,70,000 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಮ್ಮ ಹಲವಾರು ಸಾರ್ವಜನಿಕ ಸಭೆಗಳಲ್ಲಿ ಹೇಳಿಕೊಂಡಿದ್ದಾರೆ. ಆದರೆ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದ ಅಂಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಕೈಗಾರಿಕೆಗಳನ್ನು ಸ್ಥಾಪಿಸಲು ಯಾವುದೇ ಕ್ರಮಕೈಗೊಂಡಿಲ್ಲ. ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ನಾಲ್ಕು ವರ್ಷಗಳಲ್ಲಿ ರೂ.62,000 ಕೋಟಿ ಮಂಜೂರು ಮಾಡಲಾಗಿದ್ದು, ಕೇವಲ ರೂ.31,000 ಕೋಟಿ ಮಾತ್ರ ಖರ್ಚು ಮಾಡಲಾಗಿದೆ. ವೆಲಿಗೊಂಡ, ಉತ್ತರಾಂಧ್ರ ಸುಜಲ ಸ್ರವಂತಿ, ಹಾಂದ್ರಿ–ನೀವಾ, ಗಾಲೇರು–ನಗರಿ ಮುಂತಾದ ಯೋಜನೆಗಳನ್ನು ಪೂರ್ಣಗೊಳಿಸುವ ಆಸಕ್ತಿ ತೋರಲಿಲ್ಲ. ಗುಂಟೂರು ನಾಲೆ, ವಾರಿಕಪುಡಿಶೇಲ ಮುಂತಾದ ಕಿರು ನೀರು ಹರಿಸುವ ಯೋಜನೆಗಳಿಗೆ ಹಣ ಮಂಜೂರು ಮಾಡಿಲ್ಲ. ರಾಜ್ಯದಲ್ಲಿ ಮೂಲಭೂತ ಸೌಕರ್ಯ ಅದರಲ್ಲೂ ರಸ್ತೆ ನಿರ್ಮಾಣದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿದ್ದಾರೆ. ಪ್ರಮುಖ ರಸ್ತೆಗಳು ಸಾವಿರಾರು ಕಿಲೋಮೀಟರ್ ಹಾಳಾಗಿದ್ದರೂ ಅವುಗಳ ಮರುನಿರ್ಮಾಣಕ್ಕೆ ಪ್ರಯತ್ನಿಸಲಿಲ್ಲ. ರಸ್ತೆಗಳಲ್ಲಿನ ಗುಂಡಿಗಳಿಂದ ಅನೇಕ ಜನರು ಸಾವನ್ನಪ್ಪಿದ್ದಾರೆ. ಸಚಿವರು ಈ ವಿಷಯವನ್ನು ಲಘುವಾಗಿ ಪರಿಗಣಿಸಿದ್ದಾರೆ.

ನೌಕರರು, ಶಿಕ್ಷಕರು, ಪಿಂಚಣಿದಾರರು

ಐದು ವರ್ಷಗಳ ಆಡಳಿತದಲ್ಲಿ ಸರ್ಕಾರ ನೌಕರರು, ಶಿಕ್ಷಕರು ಮತ್ತು ಪಿಂಚಣಿದಾರರನ್ನು ಸಂಪೂರ್ಣವಾಗಿ ದೂರವಿಟ್ಟಿತು. ಪ್ರಮುಖ ಸಂಘಗಳ ಜತೆ ಚರ್ಚೆ ಮಾಡುವುದಿರಲಿ, ಅವರ ಅನೇಕ ಸಮಸ್ಯೆಗಳ ಕುರಿತಾಗಿಯೂ ಮುಖ್ಯಮಂತ್ರಿಗಳು ಚರ್ಚೆ ನಡೆಸಲಿಲ್ಲ. ಚರ್ಚೆಗಳು ಕೇವಲ ಸಜ್ಜಲ ರಾಮಕೃಷ್ಣ ರೆಡ್ಡಿ ಮತ್ತು ಬೊತ್ಸಾ ಸತ್ಯನಾರಾಯಣ ಅವರಿಗೆ ಮಾತ್ರ ಸೀಮಿತವಾಗಿದ್ದವು. ಸರ್ಕಾರ ತಮಗೆ ಅನುಕೂಲಕರವಾಗಿದ್ದ ನಾಲ್ವರು ನಾಯಕರ ಅಭಿಪ್ರಾಯಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡಿತು. ವಿಜಯವಾಡ ಬಿ.ಆರ್.ಟಿ.ಎಸ್. ರಸ್ತೆಯಲ್ಲಿ ಫೆಬ್ರವರಿ 3, 2022 ರಂದು ನಡೆದ ಪ್ರತಿಭಟನೆಯ ನಂತರ ಸರ್ಕಾರವು ಪ್ರತಿಭಟನಾನಿರತರ ಜೊತೆಗೆ ಸಕಾರಾತ್ಮಕವಾಗಿ ಸ್ಪಂದಿಸದೆ, ಚಳವಳಿಗಳನ್ನು ಹತ್ತಿಕ್ಕಲು ಪ್ರಯತ್ನಿಸಿತು.

ನೌಕರರಿಗೆ, ಶಿಕ್ಷಕರಿಗೆ, ಪಿಂಚಣಿದಾರರಿಗೆ ನೀಡಲಾದ ವೇತನ ಆಯೋಗದ ಶಿಫಾರಸುಗಳಲ್ಲಿ ವಿಶೇಷವಾಗಿ 11 ನೇ ಪಿ.ಆರ್.ಸಿ. (Pay Revision Commission) ಯಲ್ಲಿ ಸಂಪೂರ್ಣ ಅನ್ಯಾಯ ಮಾಡಿದೆ. ಪ್ರತಿ ತಿಂಗಳು 1ನೇ ತಾರೀಖಿನಂದು ವೇತನ ಬರುವುದಿಲ್ಲ. ನೌಕರರು, ಶಿಕ್ಷಕರು ಮತ್ತು ಪಿಂಚಣಿದಾರರಿಗೆ ಇನ್ನೂ ಸುಮಾರು ರೂ.18,000 ಕೋಟಿಗಳ ಬಾಕಿ ಪಾವತಿಯಾಗಬೇಕಿದೆ. ಇವುಗಳ ಜತೆಗೆ ಸಿ.ಪಿ.ಎಸ್. (ಕೊಡುಗೆ ಪಿಂಚಣಿ ಯೋಜನೆ–CPS) ರದ್ದುಪಡಿಸುವ ಭರವಸೆಯನ್ನು ಜಾರಿ ಮಾಡದೆ ಜಿ.ಪಿ.ಎಸ್. (ಖಾತರಿ ಪಿಂಚಣಿ ವ್ಯವಸ್ಥೆ –ಉಕಖ) ಎಂಬ ಹೊಸ ವ್ಯವಸ್ಥೆ ರೂಪಿಸಿದ್ದಾರೆ. ರಾಜ್ಯದಾದ್ಯಂತ ಲಕ್ಷಾಂತರ ನೌಕರರು, ಶಿಕ್ಷಕರು ಮತ್ತು ಪಿಂಚಣಿದಾರರು ತೀವ್ರ ಅಸಮಾಧಾನದಿಂದ ಸರ್ಕಾರದ ವಿರುದ್ಧ ತಿರುಗಿಬಿದ್ದರು. ಅದೇ ರೀತಿ ಶಿಕ್ಷಕರನ್ನು ಆಪ್ ಗಳ ಹೆಸರಿನಲ್ಲಿ, ಪ್ರವೀಣ್ ಪ್ರಕಾಶ್ ಭೇಟಿ ಹೆಸರಿನಲ್ಲಿ ಕಿರುಕುಳ ನೀಡಲಾಗಿದ್ದರೂ ಶಾಲೆಗಳ ಮೂಲಸೌಕರ್ಯ ಸ್ವಲ್ಪ ಸುಧಾರಿಸಿದರೂ ಉಪಯೋಗಕ್ಕೆ ಬಾರದಂತಾಗಿದೆ.

ಬಣ ಸಾಧನೆ ಪ್ರವೃತ್ತಿ

ಗೆದ್ದು ಅಧಿಕಾರಕ್ಕೆ ಬಂದ ನಂತರ ಯಾವುದೇ ಪಕ್ಷವಾದರೂ, ನಾಯಕನಾದರೂ ಸಂಯಮದಿಂದ ವ್ಯವಹರಿಸಬೇಕು. ವಿಶೇಷವಾಗಿ ಅವರು ಪ್ರಬುದ್ಧತೆ ಹೊಂದಿರಬೇಕು. ಆದರೆ ಜಗನ್ ಮೋಹನ್ ರೆಡ್ಡಿ ಸರ್ಕಾರ ಬಂದ ನಂತರ ಬಣ ಸಾಧನೆಯ ಪ್ರವೃತ್ತಿಯಿಂದ ವ್ಯವಹರಿಸಿದೆ. ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಪ್ರಜಾವೇದಿಕೆಯನ್ನು ಕೆಡವಿದರು. ಕೌಶಲ್ಯಾಭಿವೃದ್ಧಿ ಹಗರಣದ ಹೆಸರಿನಲ್ಲಿ ಚಂದ್ರಬಾಬು ನಾಯ್ಡು ಅವರನ್ನು ಬಂಧಿಸಿ ಹಲವು ದಿನ ಜೈಲಿನಲ್ಲಿಟ್ಟಿದ್ದು ಜನರಲ್ಲಿ ಅನುಕಂಪ ಮೂಡಿಸಿದೆ. ಇದಲ್ಲದೆ ಲ್ಯಾಂಡ್ ಟೈಟ್ಲಿಂಗ್ ಕಾಯ್ದೆ (Land Titling Act) ಗೆ ಸಂಬಂಧಿಸಿದಂತೆ ರೈತರಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ರಾಜ್ಯಾದ್ಯಂತ ಹಲವು ಪ್ರದೇಶಗಳಲ್ಲಿ ರಾಜಕೀಯ ಬಣಗಳೊಂದಿಗೆ ವಿರೋಧ ಪಕ್ಷಗಳ ಮೇಲೆ ದಾಳಿಗಳನ್ನು ವಿರೋಧಿಸಿ ಜನರು

ಪುಟ 7 ಕ್ಕೆ

ವೈದ್ಯಕೀಯ ಶಿಕ್ಷಣ ಪ್ರವೇಶಕ್ಕಾಗಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸುವ 'ನೀಟ್' (ರಾಷ್ಟ್ರೀಯ ಅರ್ಹತೆ ಪ್ರವೇಶ ಪರೀಕ್ಷೆ) ಸ್ಪರ್ಧಾತ್ಮಕ ಪರೀಕ್ಷೆಗೆ ಈ ಬಾರಿ 24 ಲಕ್ಷ ವಿದ್ಯಾರ್ಥಿಗಳು ಬರೆದಿದ್ದಾರೆ. ಆದರೆ ಫಲಿತಾಂಶದ ನಂತರ ಈ ಪರೀಕ್ಷೆಯ ಹಗರಣ ಬಯಲಾಗಿದೆ. 67 ವಿದ್ಯಾರ್ಥಿಗಳಿಗೆ 720/720 ಅಂಕಗಳು ಬಂದಿವೆ. ಇದುವರೆಗೂ ಯಾವುದೇ ಕಾರಣಕ್ಕೂ ಗ್ರೇಸ್ ಅಂಕ ಕೊಡುವಂತಿಲ್ಲ ಎಂದು ನೀತಿ ರೂಪಿಸಲಾಗಿದೆ. ಆದರೆ ನಿಯಮ ಉಲ್ಲಂಘಿಸಿ ಸಮಯದ ಅಭಾವದ ನೆಪವೊಡ್ಡಿ ಗ್ರೇಸ್ ಅಂಕ ಕೊಡಲಾಗಿತ್ತು. ನಂತರ ಅದನ್ನು ರದ್ದುಪಡಿಸಿದ ಕಾರಣದಿಂದ 1,563 ವಿದ್ಯಾರ್ಥಿಗಳು ಈ ಅಂಕಗಳನ್ನು ಕಳೆದುಕೊಂಡಿದ್ದಾರೆ. ಗುಜರಾತ್‌ನ 12ನೆ ತರಗತಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ, ಒಂದು ವಿಷಯದಲ್ಲಿ ಫೇಲಾದ ವಿದ್ಯಾರ್ಥಿ ನೀಟ್‌ನಲ್ಲಿ 705 ಅಂಕ ಪಡೆದಿದ್ದಾರೆ. ರಾಜಸ್ಥಾನದ ಒಂದು ಕೇಂದ್ರದಲ್ಲಿ ಕ್ರಮಸಂಖ್ಯೆ 61–66ರವರೆಗಿನ ಆರು ವಿದ್ಯಾರ್ಥಿಗಳಿಗೆ 670 ಅಂಕ ಬಂದಿದೆ.



ನೀಟ್: ಆಯ್ಕೆಯಲ್ಲ, ಹೊರತಳ್ಳುವ ಹಗರಣ

ಶ್ರೀಪಾದ ಭಟ್

ಬೆಚ್ಚಿಬೀಳಿಸುವ ವಿವರಗಳು

1 ಮೇ, 2016ರಂದು ಕೇಂದ್ರ ಸರಕಾರವು ನೀಟ್ ಅಡಿಯಲ್ಲಿ ಮೊಟ್ಟ ಮೊದಲ ಬಾರಿಗೆ ವೈದ್ಯಕೀಯ ವ್ಯಾಸಂಗಕ್ಕೆ ಅರ್ಹತೆ ಪಡೆಯಲು ಕಡ್ಡಾಯವಾದ ರಾಷ್ಟ್ರೀಯ ಮಟ್ಟದ ಏಕ ಗವಾಕ್ಷಿಯ ಪ್ರವೇಶ ಪರೀಕ್ಷೆ ನಡೆಸಿತು. ಇದಕ್ಕಾಗಿ ಸಂಸತ್ತಿನಲ್ಲಿ ಬಹುಮತವನ್ನು ಪಡೆದುಕೊಂಡಿತ್ತು ಮತ್ತು ಸುಪ್ರೀಂ ಕೋರ್ಟ್ ನಿಂದಲೂ ಅನುಮತಿಯ ರಕ್ಷಣೆಯನ್ನು ಪಡೆದುಕೊಂಡಿತ್ತು. ರಾಜ್ಯ ಪಟ್ಟದ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ರದ್ದುಗೊಳಿಸಿ ಈ ನೀಟ್ ತರಹದ ಕೇಂದ್ರೀಕರಣಗೊಂಡ, ಸಿಬಿಎಸ್‌ಇ, ಐಸಿಎಸ್‌ಇ ಪಠ್ಯಕ್ರಮ ಆಧರಿಸಿದ ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆಗಳು ಖಾಸಗಿ ಕೋಚಿಂಗ್ ಮಾಫಿಯವನ್ನು ಸೃಷ್ಟಿಸಿದೆ. ಇದು ಸಹಜವಾಗಿಯೆ ಮೇಲ್ವರ್ಗದ, ಶ್ರೀಮಂತ ಮಕ್ಕಳಿಗೆ ಅನುಕೂಲ ಮಾಡಿಕೊಡುತ್ತದೆ. ಇದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪರೀಕ್ಷೆಯಲ್ಲ, ಬಡ ಕುಟುಂಬದ ವಿದ್ಯಾರ್ಥಿಗಳನ್ನು ಹೊರತಳ್ಳುವ ಪರೀಕ್ಷೆ. ಶಿಕ್ಷಣವನ್ನು ಈ ರೀತಿಯಲ್ಲಿ ಕೇಂದ್ರೀಕರಣಗೊಳಿಸುವುದರ ವಿರುದ್ಧ, ಗ್ರಾಮೀಣ ಭಾಗದ, ರಾಜ್ಯ ಪಠ್ಯಕ್ರಮ ಓದುವ ವಿದ್ಯಾರ್ಥಿಗಳಿಗೆ ಪ್ರತಿಕೂಲವಾಗಿರುವ, ಚೈತನ್ಯ, ನಾರಾಯಣ, ಅಲೆನ್ಸ್, ಆಕಾಶ್, ಆಳ್ವಾಸ್ ಮುಂತಾದ ಕೋಚಿಂಗ್ ಸಂಸ್ಥೆಗಳ ಮಾಫಿಯಾದ ವಿರುದ್ಧ ಪ್ರಗತಿಪರ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು ಹೋರಾಟ ನಡೆಸಿದರೂ ಯಾವುದೆ ಪ್ರಯೋಜನವಾಗಿಲ್ಲ. ಕಳೆದ ಎಂಟು ವರ್ಷಗಳಲ್ಲಿ ರಾಜಸ್ಥಾನದ ಕೋಟ ಜಿಲ್ಲೆಯು ಆತ್ಮಹತ್ಯೆಗಳ ಶಿಬಿರವಾಗಿ ಮಾರ್ಪಟ್ಟಿದೆ. ಈ ಮಾರಣಹೋಮ ಎಂಟನೆ ವರ್ಷಕ್ಕೆ ಕಾಲಿಟ್ಟಿದೆ.

ಇಡೀ ಭಾರತದಲ್ಲಿ ಎಂಬಿಬಿಎಸ್, ಬಿಡಿಎಸ್, ಬಿಎಎಂಎಸ್, ಬಿಯುಎಂಎಸ್, ಬಿಎಚ್‌ಎಂಎಸ್ ಒಳಗೊಂಡಂತೆ ವೈದ್ಯಕೀಯ ಸೀಟುಗಳ ಸಂಖ್ಯೆ 1 ಲಕ್ಷದ 6 ಸಾವಿರ. ಆದರೆ ಇದಕ್ಕಾಗಿ 24 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಕರ್ನಾಟಕದಲ್ಲಿ 9,345 ಸೀಟುಗಳಿವೆ. 1 ಲಕ್ಷದ 19 ಸಾವಿರ ವಿದ್ಯಾರ್ಥಿಗಳು ಪ್ರವೇಶ ಬರೆದಿದ್ದಾರೆ. ಒಟ್ಟಾರೆ ಆಯ್ಕೆಯಾದ 1 ಲಕ್ಷ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಉಳಿದ 23 ಲಕ್ಷ ವಿದ್ಯಾರ್ಥಿಗಳ ಪಾಡೇನು? ಅವರು ಕೌಟುಂಬಿಕ ಒತ್ತಡಕ್ಕೆ ಮಣಿದು ಮರಳಿ ಮತ್ತೊಮ್ಮೆ, ಮಗದೊಮ್ಮೆ ನೀಟ್ ಪರೀಕ್ಷೆ ಬರೆಯುವರೇ? ಸತತ ಪ್ರಯತ್ನದ ನಂತರವೂ ಪ್ರವೇಶ ದೊರಕದೆ ಹೋದರೆ ಈ ವಿದ್ಯಾರ್ಥಿಗಳು ಯಾವ ದಾರಿ ಕಂಡುಕೊಳ್ಳುತ್ತಾರೆ? ಹಲವರು ಹತಾಶರಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಿಕ್ಕವರು? ಇದರ ಕುರಿತು ವಿವರವಾದ ಸಮೀಕ್ಷೆಯಾಗಿಲ್ಲ. ಪ್ರತಿ ವರ್ಷ ಈ ರೀತಿ ಹತಾಶರಾದ, ಖಿನ್ನತೆಗೊಳಗಾದ 23 ಲಕ್ಷ ವಿದ್ಯಾರ್ಥಿಗಳು ಉತ್ಪತ್ತಿಯಾಗುತ್ತಿದ್ದಾರೆ. ಈ ವಿದ್ಯಾರ್ಥಿಗಳ ಮನಸ್ಸಿನಲ್ಲಿ 'ಮಾಡು ಇಲ್ಲವೇ ಮಡಿ' ಎನ್ನುವ ಬೀಜ ಬಿತ್ತಿ ವೈದ್ಯಕೀಯ ಪ್ರವೇಶ ಪಡೆಯದೇ ಹೋದರೆ ಬದುಕೇ ವ್ಯರ್ಥ ಎನ್ನುವ ವಾತಾವರಣ ಸೃಷ್ಟಿಸಲಾಗಿದೆ. ಮಾನವಿಕ ವಿಭಾಗಗಳನ್ನು ನಿರ್ಲಕ್ಷಿಸಿ ಕೇವಲ ವೃತ್ತಿಪರ ಶಿಕ್ಷಣಕ್ಕೆ ಏಕಪಕ್ಷೀಯವಾಗಿ ಹೆಚ್ಚಿನ ಬೆಂಬಲ ಕೊಡುವುದರ ಕುರಿತು ಹುಸಿಯಾದ ಭ್ರಮೆಗಳನ್ನು ಮೂಡಿಸಿದ ಸರ್ಕಾರದ ಸಾರ್ವಜನಿಕ ನೀತಿ, ಮಕ್ಕಳ ಮೇಲೆ ಅನಗತ್ಯವಾಗಿ ಒತ್ತಡ ಹೇರಿ ಅವರ ಮಾನಸಿಕ ಅಸ್ಥಿರತೆಗೆ ಕಾರಣವಾಗುವ ಪೋಷಕರು ಇಡೀ ನೀಟ್ ಹಗರಣದ ಜವಾಬ್ದಾರಿ ಹೊರಬೇಕು.

ಪ್ರತಿಷ್ಠಿತರ ಶಿಕ್ಷಣವಾಗಿದೆ

ವೈದ್ಯಕೀಯ ಕ್ಷೇತ್ರ ಇಂದಿಗೂ ಪ್ರತಿಷ್ಠಿತರ ಶಿಕ್ಷಣವಾಗಿರುವುದು ಇಲ್ಲಿನ ವೈರುದ್ಯ. ಇದು ಉಳ್ಳವರು ಮತ್ತು ವಂಚಿತರ ನಡುವಿನ ಸ್ಪರ್ಧೆಯಾಗಿದೆ. ಇಲ್ಲಿ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಅರ್ಹತೆ ಗಳಿಸಲು ಸ್ಪರ್ಧಾತ್ಮಕ ಕೋಂಚಿಗ್‌ನಲ್ಲಿ ತರಬೇತಿ ಪಡೆಯಲು ಸೂಕ್ತ ಅವಕಾಶಗಳಿಲ್ಲದೆ ಬಹುಪಾಲು ಗ್ರಾಮೀಣ ಭಾಗದ ವಂಚಿತ ಸಮುದಾಯದ ವಿದ್ಯಾರ್ಥಿಗಳು ತೇರ್ಗಡೆ ಆಗುವುದಿಲ್ಲ. ಮತ್ತೊಂದೆಡೆ 9ನೆ ತರಗತಿಯಿಂದ 12ನೆ ತರಗತಿಯವರೆಗೆ (ಕರ್ನಾಟಕದಲ್ಲಿ ಪಿಯುಸಿ) ಶಿಕ್ಷಣವು ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಮಾಫಿಯ ಹಿಡಿತಕ್ಕೆ ಒಳಪಟ್ಟಿದೆ. ಈ ಖಾಸಗಿ ಸಂಸ್ಥೆಗಳ ವಿದ್ಯಾರ್ಥಿಗಳನ್ನು 8ನೆ ತರಗತಿಯಿಂದಲೇ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಒತ್ತು ನೀಡಿ ತರಬೇತಿ ನೀಡಲಾಗುತ್ತದೆ.

ಸರಕಾರಿ ಶಾಲೆ, ಕಾಲೇಜುಗಳಲ್ಲಿ ರಾಜ್ಯ ಪಠ್ಯಕ್ರಮವನ್ನು ಓದುವ ವಿದ್ಯಾರ್ಥಿಗಳಿಗೆ ಅತ್ತ ಈ ಖಾಸಗಿ ಕೋಚಿಂಗ್‌ನ ಲಭ್ಯತೆಯೂ ಇಲ್ಲದೆ, ಇತ್ತ ಕೇಂದ್ರ ಪಠ್ಯಕ್ರಮ ಆಧಾರಿತ ನೀಟ್ ಪರೀಕ್ಷೆಗೆ ಸೂಕ್ತ ತಯಾರಿಯೂ ಇಲ್ಲದೆ ಪ್ರತಿಭೆ ಇದ್ದರೂ ಪ್ರವೇಶ ದೊರಕುವುದಿಲ್ಲ. ವೈದ್ಯಕೀಯ ಶಿಕ್ಷಣದಿಂದ ವಂಚಿತರಾಗುತ್ತಾರೆ. ಇಲ್ಲಿ ಸಮಾನತೆಯೂ ಇಲ್ಲ, ಸಮತೆಯೂ ಇಲ್ಲ. ಈ ರೀತಿ ವರ್ಗ ಅಸಮಾನತೆಯನ್ನು ಸೃಷ್ಟಿಸಿ ನಂತರ ರಾಷ್ಟ್ರ ಮಟ್ಟದಲ್ಲಿ ಮೆರಿಟ್‌ನ್ನು ಒಂದಂಶದ ಅರ್ಹತೆಯನ್ನಾಗಿಸಿದಾಗ ಅದು ಸಾಮಾಜಿಕ ನ್ಯಾಯದ ನೀತಿಗಳಿಗೆ ವಿರೋಧಿಯಾಗುತ್ತದೆ. ಸಂವಿಧಾನದ ಆಶಯಗಳಿಗೆ ಧಕ್ಕೆ ತರುತ್ತದೆ. ಇದನ್ನು ನಿಯಂತ್ರಿಸಬೇಕಾದ ಸರಕಾರವು ಖಾಸಗಿಯವರೊಂದಿಗೆ ಕೈ ಜೋಡಿಸಿ ನೀಟ್‌ದಂತಹ ಮಸೂದೆಗಳನ್ನು ತಂದು ಬಡ ವಿದ್ಯಾರ್ಥಿಗಳಿಗೆ ಕಂಟಕವಾಗುತ್ತಿದೆ.

ನೂರಾರು ವಿದ್ಯಾರ್ಥಿಗಳ ಆತ್ಮಹತ್ಯೆ

ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಯಾವುದೇ ಮುಂದಾಲೋಚನೆ ಇಲ್ಲದೆ ಏಕಾಏಕಿ ಇಡೀ ಪ್ರವೇಶ ಪರೀಕ್ಷೆಯನ್ನು ಕೇಂದ್ರೀಕರಣಗೊಳಿಸಿ ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಿಸಿ ಎಂದು ಕಾಯ್ದೆ ಮಾಡಿದಾಗ ಈ ಪ್ರವೇಶ ಪರೀಕ್ಷೆಗೆ ಅಗತ್ಯವಾದ ಪಠ್ಯಕ್ರಮ, ಮಾದರಿ ಕುರಿತಾಗಿ ಯಾವುದೆ ಸ್ಪಷ್ಟತೆ ಇಲ್ಲದೆ ಲಕ್ಷಾಂತರ ವಿದ್ಯಾರ್ಥಿಗಳು ಕಂಗಾಲಾದರು. ಸುಪ್ರೀಂ ಕೋರ್ಟ್ ಸಹ ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ ಎನ್ನುವುದನ್ನು ಕಡೆಗಣಿಸಿ ಇದನ್ನು ಒಂದು ರಾಷ್ಟ್ರೀಯತೆ ಪ್ರಶ್ನೆ ಎನ್ನುವ ಅರ್ಥದಲ್ಲಿ ಆದೇಶ ನೀಡಿದ್ದು ಬಲು ದೊಡ್ಡ ವಿರೋಧಭಾಸವನ್ನು ಸೃಷ್ಟಿಸಿತು. ತಮಿಳುನಾಡಿನಲ್ಲಿ ಅನಿತಾ ಎನ್ನುವ ದಲಿತ ವಿದ್ಯಾರ್ಥಿ 2016ರ 12ನೆ ತರಗತಿಯ ಪರೀಕ್ಷೆಯಲ್ಲಿ ಶೇ.98 ಪ್ರಮಾಣ ಅಂಕ ಗಳಿಸಿ ವೈದ್ಯಕೀಯ ವ್ಯಾಸಂಗದ ಕನಸಿನಲ್ಲಿದ್ದಳು. ಆದರೆ ಅದೆ ವರ್ಷ ಕೇಂದ್ರ ಸರಕಾರ ಹಠಾತ್ತನೆ ನೀಟ್ ಪರೀಕ್ಷೆಯನ್ನು ಕಡ್ಡಾಯ ಮಾಡಿದಾಗ ಪ್ರತಿಭಾವಂತಳಾದ ಅನಿತಾ ನೀಟ್ ಪರೀಕ್ಷೆಯಲ್ಲಿ 86 ಅಂಕಗಳನ್ನು ಗಳಿಸಿದ್ದಳು. ಆದರೆ ವೈದ್ಯಕೀಯ ಕೋರ್ಸ್‌ಗೆ ಆಯ್ಕೆ ಆಗಲಿಲ್ಲ. ಇದು ಅನಿತಾಳನ್ನು ಹತಾಶೆಗೆ ತಳ್ಳಿತು. ಕಡೆಗೆ 1, ಸೆಪ್ಟೆಂಬರ್ 2016ರಂದು ಆತ್ಮಹತ್ಯೆ ಮಾಡಿಕೊಂಡಳು. ಕಳೆದ ಎಂಟು ವರ್ಷಗಳಲ್ಲಿ 12ನೆ ತರಗತಿ/ಪಿಯುಸಿನಲ್ಲಿ ಅತ್ಯುತ್ತಮ ಅಂಕ ಗಳಿಸಿಯೂ ನೀಟ್ ಕಾರಣಕ್ಕೆ ವೈದ್ಯಕೀಯ ಪ್ರವೇಶ ಪಡೆಯಲು ವಿಫಲರಾದ ಸರಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದ ನೂರಾರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿಭಾವಂತರಾದರೂ ಸಹ ಬಡತನದ ಕಾರಣಕ್ಕೆ, ಜಾತಿ ಕಾರಣಕ್ಕೆ ಈ ಖಾಸಗಿ ಮಾಫಿಯ ಸಂಚಿಗೆ ಬಲಿಯಾಗುತ್ತಿದ್ದಾರೆ. ಪ್ರಭುತ್ವದ ಈ ಕರಾಳ ನೀತಿಗಳು ವಂಚಿತ ಸಮುದಾಯದ, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮರಣಶಾಸನವಾಗುತ್ತಿದೆ.

ಪೂರ್ವ ರಾಜ್ಯಗಳಲ್ಲಿ ಮಿಶ್ರ ಫಲಿತಾಂಶ........... ಪುಟ 4 ರಿಂದ

ಮಟ್ಟದಲ್ಲಿ ನೋಡಿದರೆ ಬಿಜೆಡಿ ಇಂಡಿಯಾ ಕೂಟಕ್ಕೆ ಸೇರಿ ಸ್ಪರ್ಧೆ ಮಾಡಿದ್ದರೆ ತಮಿಳುನಾಡಿನಂತೆ ಬಿಜೆಪಿಗೆ ಶೂನ್ಯ ಸಂಪಾದನೆಯಾಗುತ್ತಿತ್ತು. ಆದರೆ ಮತ್ತೆ ಅಂಕಗಣಿತದ ದೃಷ್ಟಿಯಿಂದ ಮಾತ್ರ ಕ್ಷೇತ್ರವಾರು ಆಗಿ ನೋಡಿದರೆ 8 ಕ್ಷೇತ್ರಗಳಲ್ಲಿ ಬಿಜೆಪಿ ತ್ರಿಕೋನ ಸ್ಪರ್ಧೆಯಿಂದಾಗಿ ಗೆದ್ದಿದೆ. ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಡಿ ಮತಗಳನ್ನು ಸೇರಿಸಿದರೆ ಬಿಜೆಪಿಗಿಂತ ಗಮನಾರ್ಹವಾಗಿ ಹೆಚ್ಚಾಗಿರುತ್ತಿತ್ತು. ಬಿಜೆಪಿ ಸೀಟುಗಳ ಸಂಖ್ಯೆ 12ಕ್ಕೆ (ಹೆಚ್ಚಳ 4)ಕ್ಕೆ ಸೀಮಿತವಾಗಿರುತ್ತಿತ್ತು.

ಒಡಿಶಾದಲ್ಲಿ ಸುಮಾರು 25 ವರ್ಷಗಳಿಂದ ಆಡಳಿತ ಮಾಡುತ್ತಿದ್ದ ಬಿಜೆಡಿ 1998ರಿಂದ 2009ರ ವರೆಗೆ ಬಿಜೆಪಿಯ ಎನ್.ಡಿ.ಎ. ಕೂಟದಲ್ಲಿ ಭಾಗಿಯಾಗಿತ್ತು. 2009ರಲ್ಲಿ ಬಿಜೆಪಿಯ ಜತೆ ಸಂಪರ್ಕ ಕಡಿದುಕೊಂಡ ಬಿಜೆಡಿ ಈ ವರೆಗೆ ಸ್ವತಂತ್ರವಾಗಿ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲೂ ಬಹುಸಂಖ್ಯಾತ ಸೀಟುಗಳನ್ನು ಗೆಲ್ಲುತ್ತಾ ಬಂದಿತ್ತು. ದೇಶದ ಮತ್ತು ರಾಜ್ಯದ ಮುತ್ಸದ್ದಿ ನಾಯಕನಾಗಿದ್ದ ಬಿಜು ಪಟ್ನಾಯಕ್ ನಾಮಬಲದಲ್ಲಿ ಸ್ಥಾಪಿಸಲಾಗಿದ್ದ ಪ್ರಾದೇಶಿಕ ಪಕ್ಷವಾಗಿ ಬೆಳೆದ ಬಿಜೆಡಿ, ಬಿಜೆಪಿ ಕೂಟದಲ್ಲಿದ್ದರೂ ಸೆಕ್ಯುಲರ್ ಪಕ್ಷವಾಗಿತ್ತು. ಸಾಮಾಜಿಕ–ಆರ್ಥಿಕ ನೀತಿಗಳಲ್ಲಿ ನಿರ್ದಿಷ್ಟ ಸ್ಪಷ್ಟ ಒಲವುಗಳಿರಲಿಲ್ಲ. ಒಡಿಶಾದ ಕಂದಮಲ್ ನಲ್ಲಿ 2008ರಲ್ಲಿ ಬಿಜೆಪಿ ಮತ್ತು ಸಂಘಪರಿವಾರ ನಡೆಸಿದ ಕ್ರಿಶ್ಚಿಯನ್–ವಿರೋಧಿ ದಂಗೆಗಳ ಕಾರಣಕ್ಕೆ (ಇತರ ಸೀಟು ಹೊಂದಾಣಿಕೆ ಸಮಸ್ಯೆಗಳ ಜತೆ) ಪ್ರಮುಖವಾಗಿ ಅದರ ಜತೆ ಸಂಬಂಧ ಕಡಿದುಕೊಂಡಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಕೂಟದಿಂದ ಸಮಾನ ಅಂತರ ಕಾಯ್ದುಕೊಂಡು ಕೇಂದ್ರದಲ್ಲಿ ಯಾರು ಅಧಿಕಾರ ವಹಿಸಿಕೊಂಡರೂ, ಅವರ ಜತೆ 'ಚೆನ್ನಾಗಿದ್ದು' ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ಅದರ ನೀತಿಯಾಗಿತ್ತು

ಪ್ರಾದೇಶಿಕ ಪಕ್ಷಗಳ ಜತೆ ಬಿಜೆಪಿ ಸಖ್ಯ ಬೆಳೆಸಿ ಬೆನ್ನಿಗೆ ಚೂರಿ ಹಾಕಿದ ನಂತರವೂ, 2024ರ ಚುನಾವಣೆಯಲ್ಲಿ ಬಿಜೆಪಿ ಜತೆ ಹೊಂದಾಣಿಕೆಗೆ ಹೊರಟಿತ್ತು. ಬಿಜೆಪಿಯ ಕೋಮುವಾದಿ ಫ್ಯಾಸಿಸಂ ಮತ್ತು ಸಂವಿಧಾನ–ವಿರೋಧಿ ಸ್ವಭಾವ ಮತ್ತು ಅದು ದೇಶಕ್ಕೆ ಒಡ್ಡಿರುವ ಅಪಾಯವನ್ನು ಅರಿತುಕೊಳ್ಳದೆ, ಇಂಡಿಯಾ ಕೂಟದಿಂದ ದೂರವುಳಿಯಿತು ಮಾತ್ರವಲ್ಲದೆ, ಬಿಜೆಪಿಯ ವಿರುದ್ಧ ರಾಜಕೀಯ ಪ್ರಚಾರ ಮಾಡಲಿಲ್ಲ. ಕೆಲವು ಕಲ್ಯಾಣ ಯೋಜನೆಗಳು ಮಾಡಿದರೆ ಸಾಕು ಅಂದುಕೊಂಡಿತ್ತು. ಜನ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆಯೇ ಇಲ್ಲದ, ಹೊಸ ಭರವಸೆಗಳನ್ನು ಮೂಡಿಸದ 25 ವರ್ಷಗಳ ಆಡಳಿತದ ಕುರಿತು ಜನರಲ್ಲಿ ನಿರುತ್ಸಾಹ ಉಂಟಾಗಿತ್ತು. ಇವೆಲ್ಲದರ ಪ್ರಯೋಜನೆ ಪಡೆದ ಬಿಜೆಪಿಯು ಬಿಜೆಡಿ ವಿರುದ್ಧ ಭಾರೀ ಪ್ರಚಾರ ಕೈಗೊಂಡಿತು. ನವೀನ್ ಪಟ್ನಾಯಕ್ ಗೆ ಒಡಿಯಾ ಮಾತನಾಡಲೂ ಬರುವುದಿಲ್ಲ, ನಿವೃತ್ತರಾಗುವ ವಯಸ್ಸಾಗಿದೆ. ಅವರು ನೇಮಿಸಿರುವ 'ಉತ್ತರಾಧಿಕಾರಿ ವಿ.ಕೆ. ಪಾಂಡ್ಯನ್' ತಮಿಳುನಾಡಿನವರು. ಇದು 'ಒಡಿಯಾ ಅಸ್ಮಿತೆ'ಗೆ ಧಕ್ಕೆ ತರುತ್ತದೆ ಇತ್ಯಾದಿ ಭಾವನಾತ್ಮಕ ಆಕ್ರಾಮಕ ಪ್ರಚಾರ ಮಾಡಲಾಯಿತು. ಇದನ್ನು ಬಿಜೆಡಿ ಎದುರಿಸದೆ ಅಷ್ಟೇ ಆಕ್ರಾಮಕವಾಗಿ ಬಿಜೆಪಿ ವಿರುದ್ಧ ಜನರನ್ನು ಬಾಧಿಸುವ ವಿಷಯಗಳ ಬಗ್ಗೆ ಪ್ರಚಾರ ಮಾಡದೆ ಇರುವುದೇ ಅದರ ಪರಾಭವಕ್ಕೆ ಕಾರಣವಾಯಿತು.

ಸಿಕ್ಕಿಂ

ಈ ಪ್ರದೇಶದ ಮತ್ತೊಂದು ರಾಜ್ಯ ಸಿಕ್ಕಿಂ ನಲ್ಲಿ ಪ್ರಾದೇಶಿಕ ಪಕ್ಷವಾದ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ(ಎಸ್.ಕೆ.ಎಂ.), ಸಿಕ್ಕಿಂ ಡೆಮೊಕ್ರಾಟಿಕ್ ಫ್ರಂಟ್ (ಎಸ್.ಡಿ.ಎಫ್.) ಮತ್ತು ಸಿಟಿಜನ್ ಆಕ್ಶನ್ ಪಾರ್ಟಿ–ಸಿಕ್ಕಿಂ ನಡುವೆ ಮುಖ್ಯ ಪೈಪೋಟಿಯಿದ್ದು ಎಸ್.ಕೆ.ಎಂ. ಸೀಟು ಉಳಿಸಿಕೊಂಡಿದೆ. ಹಿಂದೆ ಮುಖ್ಯ ಪ್ರತಿಸ್ಪರ್ಧಿಯಾಗಿದ್ದ ಎಸ್.ಡಿ.ಎಫ್. ಮೂರನೇ ಸ್ಥಾನಕ್ಕೆ ಕುಸಿದಿದೆ. ಎನ್.ಡಿ.ಎ. ಮತ್ತು ಕಾಂಗ್ರೆಸ್ ಕೂಟ ಎರಡೂ ಶೂನ್ಯ ಸಂಪಾದನೆ ಮಾಡಿವೆ.

ದಕ್ಷಿಣದಲ್ಲಿ ಹಂತ ಹಂತವಾಗಿ ಬಿಜೆಪಿ ಬೆಳವಣಿಗೆ ಉತ್ತರದಲ್ಲಿ ನಷ್ಟ–ಒಡಿಶಾ ದಲ್ಲಿ ಅಭೂತಪೂರ್ವ

ಪ್ರಕಾಶ್ ಕಾರತ್

ಲೋಕಸಭೆ ಚುನಾವಣೆಯ ಒಟ್ಟಾರೆ ಫಲಿತಾಂಶ ಬಿಜೆಪಿಗೆ ಹಿನ್ನಡೆಯಾಗಿದೆ. 240 ಸ್ಥಾನಗಳನ್ನು ಪಡೆಯುವ ಮೂಲಕ ಅದು 2014 ಮತ್ತು 2019 ರ ಚುನಾವಣೆಗಳಲ್ಲಿ ಗಳಿಸಿದ ಹಾಗೆ, ಸಂಪೂರ್ಣ ಬಹುಮತವನ್ನು ಸಾಧಿಸಲು ಈ ಬಾರಿ ವಿಫಲವಾಗಿದೆ. ನರೇಂದ್ರ ಮೋದಿ ಅವರು ಈಗ ಲೋಕಸಭೆಯಲ್ಲಿ ಬಹುಮತಕ್ಕೆ ಸಂಖ್ಯಾಬಲವನ್ನು ಒದಗಿಸುವ ತೆಲುಗು ದೇಶಂ ಪಕ್ಷ ಮತ್ತು ಜನತಾ ದಳ (ಯುನೈಟೆಡ್) ನಂತಹ ಪಕ್ಷಗಳೊಂದಿಗೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಸಮ್ಮಿಶ್ರ ಸರ್ಕಾರದ ನೇತೃತ್ವ ವಹಿಸಿದ್ದಾರೆ.

ಇದು ಜನರ ಚುನಾವಣಾ ತೀರ್ಪು. ಪ್ರಜಾಪ್ರಭುತ್ವ ಕ್ಕೆ ಗೆಲುವು. ಬಿಜೆಪಿಯ ನಾಗಲೋಟ ಕ್ಕೆ ಲಗಾಮು. ಉತ್ತರ ಪ್ರದೇಶದಲ್ಲಿ ಬಿಜೆಪಿಯು ದೊಡ್ಡ ನಷ್ಟವನ್ನು ಅನುಭವಿಸಿದೆ ಮತ್ತು ಮಹಾರಾಷ್ಟ್ರ, ರಾಜಸ್ಥಾನ, ಹರಿಯಾಣ ಮತ್ತು ಪಶ್ಚಿಮ ಬಂಗಾಳದಲ್ಲಿ ನಷ್ಟವನ್ನು ಅನುಭವಿಸಿದೆ.

ಆದರೆ, ಫಲಿತಾಂಶವನ್ನು ಮೌಲ್ಯಮಾಪನ ಮಾಡುವಾಗ ಬಿಜೆಪಿ ಗಳಿಸಿದ ಲಾಭವನ್ನು ಕಡೆಗಣಿಸಬಾರದು. ಒಡಿಶಾ ದಲ್ಲಿ ಅದರ ಅಭೂತಪೂರ್ವ ಪ್ರದರ್ಶನದ ಹೊರತಾಗಿ, ಅಲ್ಲಿ ಅದು 21 ಲೋಕಸಭಾ ಸ್ಥಾನಗಳಲ್ಲಿ 20 ಸ್ಥಾನಗಳನ್ನು, ವಿಧಾನಸಭೆಯಲ್ಲಿ ಮೊದಲ ಬಾರಿಗೆ ಸಂಪೂರ್ಣ ಬಹುಮತವನ್ನು ಪಡೆದು ಗೆದ್ದಿದೆ. ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿಯು ಹಂತಹಂತವಾಗಿ ಮುನ್ನಡೆಯುವುದು ಕಳವಳವನ್ನು ಉಂಟುಮಾಡುತ್ತದೆ.

ಸ್ಥಾನಗಳ ವಿಷಯದಲ್ಲಿ, ಬಿಜೆಪಿಯು ಯಾವುದೇ ಪ್ರಗತಿಯನ್ನು ಮಾಡಿಲ್ಲ ಎಂದು ಅನಿಸಬಹುದು–ಅದು 2019 ರಲ್ಲಿ ಐದು ದಕ್ಷಿಣದ ರಾಜ್ಯಗಳಲ್ಲಿ 29 ಸ್ಥಾನಗಳನ್ನು ಗೆದ್ದಿತ್ತು ಮತ್ತು ಈಗ 2024 ರಲ್ಲಿ ಅದು ಅದೇ ಸಂಖ್ಯೆಯನ್ನು ಮಾತ್ರ ಉಳಿಸಿಕೊಂಡಿದೆ. ಆದರೆ ರಾಜ್ಯವಾರು ವಿವರವಾದ ವಿಶ್ಲೇಷಣೆ ಮತ್ತು ಪ್ರತಿ ರಾಜ್ಯದಲ್ಲಿ ಗಳಿಸಿದ ಮತ ಹಂಚಿಕೆಯು ವಿಭಿನ್ನ ಚಿತ್ರಣವನ್ನು ಒದಗಿಸುತ್ತದೆ.

ತೆಲಂಗಾಣ 2019 ರ ಚುನಾವಣೆಯಲ್ಲಿ ಬಿಜೆಪಿ 4 ಸ್ಥಾನಗಳನ್ನು ಗೆದ್ದಿತ್ತು. ಇದೀಗ ಶೇ.19.45 ರಷ್ಟು ಮತಗಳನ್ನು ಪಡೆದಿದೆ. 2024 ರ ಚುನಾವಣೆಯಲ್ಲಿ, ಅದು ತನ್ನ ಸಂಖ್ಯೆಯನ್ನು 8 ಕ್ಕೆ ಏರಿಸಿಕೊಂಡು, ದ್ವಿಗುಣಗೊಳಿಸಿದೆ ಮತ್ತು ಅದರ ಮತಗಳ ಪಾಲಿನಲ್ಲಿ ಗಣನೀಯವಾಗಿ 35.19 ಶೇಕಡಾಕ್ಕೆ ಏರಿಸಿಕೊಂಡಿದೆ. ಬಿ.ಆರ್.ಎಸ್. ಮತ ಹಂಚಿಕೆಯಲ್ಲಿ ತೀವ್ರ ಕುಸಿತ ಉಂಟಾಗಿದೆ. ಇದು ಪ್ರಾಥಮಿಕವಾಗಿ ಬಿಜೆಪಿಗೆ ಲಾಭ ತಂದುಕೊಟ್ಟಿದೆ.

ಕರ್ನಾಟಕದಲ್ಲಿ ಬಿಜೆಪಿ ತನ್ನ ಗಟ್ಟಿ ನೆಲೆಯನ್ನು ಕಳೆದುಕೊಂಡಿದೆ. 2019 ರ ಚುನಾವಣೆಯಲ್ಲಿ ಶೇಕಡಾ 51.38 ರಷ್ಟು ಮತ ಗಳಿಸಿ, 25 ಸ್ಥಾನಗಳನ್ನು ಗೆದ್ದಿತ್ತು. ಈಗ ಅದು 17 ಸ್ಥಾನಗಳನ್ನು ಪಡೆದಿದೆ ಮತ್ತು ಅದರ ಮತಗಳ ಪ್ರಮಾಣವು ಶೇಕಡಾ 46.09 ಕ್ಕೆ ಕುಸಿದಿದೆ. ಆದಾಗ್ಯೂ, ಶೇ.5.64 ರಷ್ಟು ಮತಗಳನ್ನು ಪಡೆದ ಜನತಾ ದಳ(ಎಸ್) ನೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ಎನ್‌ಡಿಎ ಒಟ್ಟು ಶೇ.51.73 ರಷ್ಟು ಗಳಿಸಿಕೊಂಡಿದೆ. ಈ ಮೈತ್ರಿಯಿಂದಾಗಿ, ಸೀಟುಗಳಲ್ಲಿ ಉಂಟಾಗ ಬಹುದಾದ ನಷ್ಟದ ಪ್ರಮಾಣವನ್ನು ಮಿತಿಗೊಳಿಸಲು ಸಹಾಯ ಮಾಡಿದೆ.

ಕೇರಳದಲ್ಲಿ, ತ್ರಿಶೂರ್ ಕ್ಷೇತ್ರವನ್ನು ಬಿಜೆಪಿ ಗೆದ್ದುಕೊಂಡಿದೆ. ಈ ರಾಜ್ಯದಲ್ಲಿ ಮೊದಲ ಬಾರಿಗೆ ಪಕ್ಷವು ಲೋಕಸಭೆ ಸ್ಥಾನವನ್ನು ಗೆದ್ದಿದೆ. ಪಕ್ಷದ ಮತಗಳ ಪ್ರಮಾಣವು 2019 ರಲ್ಲಿ ಶೇಕಡಾ 12.9 ರಿಂದ ಶೇಕಡಾ 16.67 ಕ್ಕೆ ಏರಿಸಿಕೊಂಡಿದೆ. ಎನ್‌ಡಿಎ ಶೇ.19.2 ರಷ್ಟು ಮತಗಳನ್ನು ಪಡೆದು ಕೊಂಡಿದೆ. ಇದು ಕೇರಳದಲ್ಲಿ ಅತಿ ಹೆಚ್ಚು ದಾಖಲೆಯಾಗಿದೆ.. ಈ ಫಲಿತಾಂಶದಿಂದ ರವಾನೆಯಾಗುವ ಎಚ್ಚರಿಕೆಯ ಸಂಕೇತವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕು.



ತಮಿಳುನಾಡಿನಲ್ಲಿ, ಚುನಾವಣಾ ಪ್ರಚಾರದ ಸಮಯದಲ್ಲಿ ಬಿಜೆಪಿ ದೊಡ್ಡ ಪ್ರಮಾಣದಲ್ಲಿ ತನ್ನ ಹಕ್ಕು ಚಲಾಯಿಸಿತ್ತು. ಆದಾಗ್ಯೂ ಮುಗ್ಗರಿಸಿತು. ಒಂದೇ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಇಂಡಿಯಾ ಮೈತ್ರಿಯ ಕೂಟದ ಒಗ್ಗಟ್ಟಿನ ಪ್ರದರ್ಶನ ಫಲ ನೀಡಿದೆ.

2019 ರಲ್ಲಿ ಬಿಜೆಪಿಯು ಎಐಎಡಿಎಂಕೆ' ಯೊಂದಿಗೆ ಮೈತ್ರಿ ಮಾಡಿಕೊಂಡಾಗ ಭಿನ್ನವಾಗಿತ್ತು, ಈ ಬಾರಿ ಬಿಜೆಪಿಯು ಪಿಎಂಕೆ' ಯಂತಹ ಕೆಲವು ಮಿತ್ರ ಪಕ್ಷಗಳೊಂದಿಗೆ ಮತ್ತು ಎಐಎಡಿಎಂಕೆ' ಯಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಚುನಾವಣೆಯಲ್ಲಿ ಹೋರಾಡಿದೆ. ಬಿಜೆಪಿಯ ಮತ ಹಂಚಿಕೆಯು 2019 ರಲ್ಲಿ ಶೇಕಡಾ 3.66 ರಿಂದ 5 ಸ್ಥಾನಗಳಲ್ಲಿ ಸ್ಪರ್ಧಿಸಿ ಈಗ ಶೇ.11.24 ಕ್ಕೆ ಏರಿಸಿಕೊಂಡಿದೆ. 23 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. 10 ಕ್ಷೇತ್ರಗಳಲ್ಲಿ ಬಿಜೆಪಿ ಎರಡನೇ ಸ್ಥಾನದಲ್ಲಿದೆ ಎಂಬುದು ಗಮನಿಸಬೇಕು. ಇದು ಕೆಲವು ಸ್ಥಾನಗಳಲ್ಲಿ ಎಐಎಡಿಎಂಕೆ ಮತಗಳನ್ನು ತನ್ನ ಬಗಲಿಗೆ ಹಾಕಿ ಕೊಂಡಿದೆ.

ಆಂಧ್ರಪ್ರದೇಶದಲ್ಲಿ ಬಿಜೆಪಿ ಅತ್ಯಂತ ದುರ್ಬಲವಾಗಿದ್ದು, ಟಿಡಿಪಿ ಜೊತೆಗಿನ ಮೈತ್ರಿಯಿಂದ ಬಿಜೆಪಿಗೆ ಲಾಭವಾಗಿದೆ. ಶೇ.11.29 ರಷ್ಟು ಮತಗಳನ್ನು ಪಡೆದು 3 ಸಂಸತ್ ಸ್ಥಾನಗಳನ್ನು ಪಡೆದುಕೊಂಡಿದೆ. 2019 ರಲ್ಲಿ ಅದು ಕೇವಲ 0.96 ಶೇಕಡಾ ಮತಗಳನ್ನು ಮಾತ್ರ ಪಡೆದಿತ್ತು. 2024 ರ ವಿಧಾನಸಭಾ ಚುನಾವಣೆಯಲ್ಲಿ, ಇದು ಶೇಕಡಾ 2.83 ರಷ್ಟು ಕಡಿಮೆ ಶೇಕಡಾವಾರು ಮತಗಳನ್ನು ಗಳಿಸಿತು, ಆದರೆ 8 ಸ್ಥಾನಗಳನ್ನು ಪಡೆದುಕೊಂಡಿತು. ಚಂದ್ರಬಾಬು ನಾಯ್ಡು ಸಚಿವ ಸಂಪುಟದಲ್ಲಿ ಬಿಜೆಪಿ ಸಚಿವರನ್ನು ಹೊಂದಲಿದೆ. ಬಿಜೆಪಿ ತನ್ನ ಬಲವನ್ನು ವಿಸ್ತರಿಸಲು ಆಶಿಸುತ್ತಿದೆ, ಟಿಡಿಪಿ' ಯ ಮೇಲೆ ಪಿಗ್ಗಿ ಸವಾರಿ ಮಾಡುತ್ತಿದೆ.

ದಕ್ಷಿಣದ ಐದು ರಾಜ್ಯಗಳಲ್ಲಿ ಬಿಜೆಪಿಯ ಸ್ಥಾನಗಳ, ಈ ಸಂಕ್ಷಿಪ್ತ ಒಟ್ಟಾರೆ ರೇಖಾಚಿತ್ರವು ಕರ್ನಾಟಕವನ್ನು ಹೊರತುಪಡಿಸಿ ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿಯ ನಿಧಾನಗತಿಯ ಬೆಳವಣಿಗೆಗಳು, ಕೆಲವು ಕಡೆ ಸ್ಥಗಿತಗೊಂಡಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಮಾತ್ರ ಅದು ಎರಡು ದಶಕಗಳ ಹಿಂದೆ ಬಲವಾದ ನೆಲೆಯನ್ನು ಸ್ಥಾಪಿಸಿಕೊಂಡಿದೆ. ಅದೀಗ ಸ್ವಲ್ಪ ಮಟ್ಟಿಗೆ ಸಡಿಲಗೊಂಡಿದೆ.

ಹೊಸ ನೆಲೆಯನ್ನು ಆಕ್ರಮಿಸಿಕೊಳ್ಳುವ ಮೂಲಕ ಖುಷಿ ಹೊಂದಿದ್ದರು. ಕಳೆದುಕೊಂಡಿರುವ ಸ್ಥಾನಗಳನ್ನು ಮರಳಿ ಪಡೆಯುವ ಬಿಜೆಪಿ–ಆರ್. ಎಸ್.ಎಸ್. ಸಂಯೋಜನೆಯ ಸಾಮರ್ಥ್ಯವನ್ನು ಕಡಿಮೆ ಅಂದಾಜು ಮಾಡಲಾಗದು.

ಮೋದಿ ನೇತೃತ್ವದ ಹೊಸ ಸಚಿವಾಲಯದಲ್ಲಿ, ಗೃಹ, ರಕ್ಷಣೆ, ಹಣಕಾಸು ಮತ್ತು ವಿದೇಶಾಂಗ ವ್ಯವಹಾರಗಳ ಜೊತೆಗೆ ಎಲ್ಲಾ ಪ್ರಮುಖ ಖಾತೆಗಳನ್ನು ಸಂಯೋಜಿತವಾಗಿ ಬಿಜೆಪಿ ತನ್ನ ತೆಕ್ಕೆಯಲ್ಲಿ ಉಳಿಸಿಕೊಂಡಿದೆ. ರಾಜ್ಯ ಯಂತ್ರ ಮತ್ತು ಅದರ ಸಾಂಸ್ಥಿಕ ಸಂಪನ್ಮೂಲಗಳ ಮೂಲಕ ಬಿಜೆಪಿ ಆರೆಸ್ಸೆಸ್ ಸಂಯೋಜನೆಯು ತನ್ನ ಪ್ರಭಾವವನ್ನು ವಿಸ್ತರಿಸಿ, ತಮ್ಮ ಶಕ್ತಿಯನ್ನು ಬಲಪಡಿಸಿಕೊಳ್ಳಲು ಕೆಲಸ ಮಾಡುತ್ತವೆ ಎಂಬುದನ್ನು ಗಮನದಲ್ಲಿಡಬೇಕು.

ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಹಿಂದುತ್ವ ಸಿದ್ಧಾಂತ ಮತ್ತು ಅದರ ಹೊಸ ಸ್ವರೂಪಗಳ ರಾಜಕೀಯ ಚಟುವಟಿಕೆಗಳನ್ನು ಎದುರಿಸಲು, ಅಖಿಲ ಭಾರತ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟಗಳಲ್ಲಿ, ರಾಜಕೀಯ ವಿಧಾನಗಳನ್ನು ಮತ್ತಷ್ಟು ವೃದ್ಧಿಸಿಕೊಳ್ಳಬೇಕು.

ಅನು: ನಾಗರಾಜ ನಂಜುಂಡಯ್ಯ

ಆಂಧ್ರಪ್ರದೇಶದಲ್ಲಿನ ಚುನಾವಣೆಗಳಲ್ಲಿ.......

ಪುಟ 5 ರಿಂದ

ಪ್ರತಿಭಟನೆ ನಡೆಸಿದರು. ಎನ್.ಟಿ.ಆರ್. ಹೆಲ್ತ್ ಯೂನಿವರ್ಸಿಟಿ ಹೆಸರು ಬದಲಾವಣೆಯಿಂದ ಜನರು ಸಂತುಷ್ಟರಾಗಿರಲಿಲ್ಲ. ಇವುಗಳ ಹೊರತಾಗಿ ಪ್ರತಿಭಟನೆಗಳು, ಆಂದೋಲನಗಳು ಮತ್ತು ಧರಣಿಗಳು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಸಹಜವಾದ ವಿಷಯ. ಯಾವುದೇ ಸರ್ಕಾರವಿರಲಿ, ರಾಜಕೀಯ ಪಕ್ಷಗಳು, ಜನರ ಸಂಘಟನೆಗಳು, ಉದ್ಯೋಗಸ್ಥ ಶಿಕ್ಷಕರ ಸಂಘಗಳು ಇಂತಹ ಪ್ರತಿಭಟನೆಗಳನ್ನು ಆಯೋಜಿಸುತ್ತವೆ. ಆದರೆ ಜಗನ್ ಮೋಹನ್ ರೆಡ್ಡಿ ಸರ್ಕಾರವು ಈ ಪ್ರತಿಭಟನೆಗಳನ್ನು ಕ್ರೂರವಾಗಿ ಹತ್ತಿಕ್ಕಲು ಪೊಲೀಸ್ ಬಲವನ್ನು ಬಳಸಿತು.


ನಿರುದ್ಯೋಗ

ಆಂಧ್ರಪ್ರದೇಶದ ವಿಭಜನೆಯ ನಂತರ (2014 ರಲ್ಲಿ) ರಾಜ್ಯವು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ನಿರುದ್ಯೋಗವು ಒಂದು. ರಾಜ್ಯದಲ್ಲಿ ಐಟಿ ರಂಗದಲ್ಲಿ ಮಾತ್ರವಲ್ಲ, ಇತರೆ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಲಿಲ್ಲ. ಕಳೆದ ಐದು ವರ್ಷಗಳಿಂದ ಜಗನ್ ಮೋಹನ್ ರೆಡ್ಡಿ ಸರ್ಕಾರ ಉದ್ಯೋಗ ಮತ್ತು ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಸಚಿವಾಲಯದ ಉದ್ಯೋಗಗಳು, ವೈದ್ಯಕೀಯ ಮತ್ತು ಆರೋಗ್ಯ ಉದ್ಯೋಗಗಳನ್ನು ಹೊರತುಪಡಿಸಿ ಉಳಿದ ಉದ್ಯೋಗಗಳು ಭರ್ತಿಯಾಗಿಲ್ಲ. ಪ್ರತಿ ವರ್ಷ 'ಜಾಬ್ ಕ್ಯಾಲೆಂಡರ್' ಬಿಡುಗಡೆ ಮಾಡುತ್ತೇವೆ ಎಂದು ಹೇಳಿ, ಒಮ್ಮೆ ಮಾತ್ರ 10 ಸಾವಿರ ಉದ್ಯೋಗದ ಜಾಬ್ ಕ್ಯಾಲೆಂಡರ್ ನೀಡಿದರು. ಕಳೆದ ಐದು ವರ್ಷಗಳಿಂದ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಒಂದು ಡಿಎಸ್ಸಿ ಕೂಡಾ ನೀಡಿಲ್ಲ. ರಾಜ್ಯದಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಬೋಧಕ ಹುದ್ದೆಗಳು ಖಾಲಿಯಿದ್ದರೆ, ನಿರುದ್ಯೋಗಿ ಅಭ್ಯರ್ಥಿಗಳ ಒತ್ತಡಕ್ಕೆ ಮಣಿದು ಕೊನೆಗೆ 6,100 ಬೋಧಕ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಇನ್ನೂ ಪರೀಕ್ಷೆ ನಡೆಯಲಿಲ್ಲ. ಮೆಗಾ ಡಿಎಸ್ಸಿ ನೀಡಬೇಕೆಂದು ಶಾಸಕರು, ನಿರುದ್ಯೋಗಿಗಳು, ಯುವಜನ ಸಂಘಟನೆಗಳು ಒತ್ತಡ ಹೇರಿದ್ದರೂ ಸರ್ಕಾರ ನಿರ್ಲಕ್ಷಿಸಿದೆ. ಗ್ರೂಪ್–2, ಗ್ರೂಪ್–1, ಗ್ರೂಪ್–3 ಮುಂತಾದ ಹುದ್ದೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದರೂ ಅವುಗಳ ಅಧಿಸೂಚನೆಯನ್ನು ನೀಡಿಲ್ಲ. ವಯಸ್ಸಿನ ಮಿತಿಯನ್ನು ಹೆಚ್ಚಿಸಿಲ್ಲ. ನಗದು ವರ್ಗಾವಣೆಯಿಂದ ಲಾಭ ಪಡೆದ ಕುಟುಂಬಗಳಲ್ಲಿನ ನಿರುದ್ಯೋಗಿಗಳೂ ಈ ಚುನಾವಣೆಯಲ್ಲಿ ಸರ್ಕಾರದ ವಿರುದ್ಧವೇ ಕೆಲಸ ಮಾಡಿದ್ದಾರೆ.

ಸಾರ್ವಜನಿಕ ವಿರೋಧ

ಮೂರು ರಾಜಧಾನಿಗಳ ಹೆಸರಿನಲ್ಲಿ ರಾಜ್ಯಕ್ಕೆ ಮೂಲ ಬಂಡವಾಳ ಇಲ್ಲದಂತೆ ಮಾಡಿ, ರಾಜ್ಯಕ್ಕೆ ಎಷ್ಟೇ ದ್ರೋಹ ಮಾಡಿದರೂ ಕೇಂದ್ರದಲ್ಲಿರುವ ಬಿಜೆಪಿ ಸರಕಾರದೊಂದಿಗೆ ಅಂಟಿಕೊಂಡಿರುವಂತಹ ಕಾರಣಗಳಿಗಾಗಿ, ಹಿಂದಿನ ಕಳೆದ ಐದು ವರ್ಷಗಳಿಂದ ವೈ.ಎಸ್. ಆರ್.ಪಿ. ಸರ್ಕಾರದ ಆಡಳಿತದ ವಿರುದ್ಧ ನಾನಾ ವರ್ಗಗಳ ಜನರಲ್ಲಿ ಅಸಮಾಧಾನ ಮೂಡಿದೆ. ಜನರನ್ನು ಸಂತೃಪ್ತಿಗೊಳಿಸಲು ಕೇವಲ 'ನೇರ ನಗದು' ಯೋಜನೆಗೆ ಬಟನ್ ಒತ್ತಿದರೆ ಸಾಲದು ಎಂಬುದನ್ನು ಈ ಚುನಾವಣೆಗಳು ಸಾಬೀತುಪಡಿಸಿವೆ. ಸಮಾಜದಲ್ಲಿ ರೈತರು, ಕಾರ್ಮಿಕರು, ಸಂಘಟಿತ ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ನಿರುದ್ಯೋಗಿಗಳು, ಮಧ್ಯಮ ವರ್ಗದವರು, ಯುವಕರು ಇತ್ಯಾದಿ ಎಲ್ಲರನ್ನೂ ಸಂತೃಪ್ತರನ್ನಾಗಿ ಮಾಡಬೇಕು. 'ಬಟನ್ ಒತ್ತುವುದು' (ಡಿಬಿಟಿ) ವಿಶ್ವಬ್ಯಾಂಕ್‌ನ ಆಜ್ಞೆಯ ಮೇರೆಗೆ ಜಾರಿಗೆ ತರುತ್ತಿರುವ ನವ ಉದಾರವಾದಿ ನೀತಿಗಳಲ್ಲಿ ಒಂದಾಗಿದೆ. ವಿಧಾನಸಭೆಯಲ್ಲಿ ವೈಸಿಪಿ ಕೇವಲ 11 ಸ್ಥಾನಗಳನ್ನು ಗೆದ್ದಿದೆ ಆದರೆ 39.37 ರಷ್ಟು ಮತಗಳನ್ನು ಗಳಿಸಿದೆ. ಇವು ಕಡಿಮೆಯೇನಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷದೊಂದಿಗೆ ವಿರೋಧ ಪಕ್ಷಕ್ಕೂ ಮಹತ್ವದ ಪಾತ್ರವಿದೆ. ಜವಾಬ್ದಾರಿಯುತ ಪ್ರತಿಪಕ್ಷವಾಗಿ ಮುಂದಿನ ಐದು ವರ್ಷಗಳ ಕಾಲ ವೈಸಿಪಿ ಪರಿಣಾಮಕಾರಿಯಾಗಿ ಕೆಲಸ ಮಾಡಲಿ ಎಂದು ಹಾರೈಸೋಣ.

ಕೃಪೆ: ಪ್ರಜಾಶಕ್ತಿ (ಅನು:ಸಿ.ಸಿದ್ದಯ್ಯ)



ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿಗೆ ಸ್ವಲ್ಪ ಮುನ್ನಡೆ

ತಮಿಳುನಾಡು, ಕೇರಳ, ಕರ್ನಾಟಕ, ತೆಲಂಗಾಣ, ಆಂಧ್ರ

ಪ್ರಧಾನವಾಗಿ ಉತ್ತರದ ಹಿಂದಿ ಪ್ರದೇಶಗಳ ಮತ್ತು ಪಶ್ಚಿಮ ಪ್ರದೇಶದ ಪಕ್ಷವೆಂದು ಹೆಸರಾಗಿದ್ದ ಬಿಜೆಪಿ/ಎನ್.ಡಿ.ಎ. ಆ ಪ್ರದೇಶಗಳಲ್ಲಿ ಪ್ರಾಬಲ್ಯ ಕಳೆದಕೊಂಡು, ದಕ್ಷಿಣ ಮತ್ತು ಪೂರ್ವದ ಪ್ರದೇಶಗಳಲ್ಲಿ ಗಮನಾರ್ಹವಾಗಿ ವಿಸ್ತರಿಸಿರುವುದು ಈ ಚುನಾವಣೆಯ ಪ್ರಮುಖ ಬೆಳವಣಿಗೆ. ಬಿಜೆಪಿ ಮತ್ತು ಅದರ ನಾಯಕತ್ವದ ಎನ್.ಡಿ.ಎ. ಕೂಟಕ್ಕೆ ದಕ್ಷಿಣದ ರಾಜ್ಯಗಳಲ್ಲಿ ಸೀಟು ಮತ್ತು ಮತಗಳಿಕೆ ಎರಡರಲ್ಲೂ ಸ್ವಲ್ಪ ಮುನ್ನಡೆಯಾಗಿದೆ. ವಿಶೇಷವೆಂದರೆ ಇಂಡಿಯಾ ಕೂಟ ಸಹ ಸೀಟು ಮತ್ತು ಮತಗಳಿಕೆ ಎರಡರಲ್ಲೂ ಮುನ್ನಡೆ ಕಂಡಿದೆ. ಆದರೆ ಇವೆರಡರ ಮುನ್ನಡೆ ಪ್ರಾದೇಶಿಕ ಪಕ್ಷಗಳಾದ ಬಿ.ಆರ್.ಎಸ್. ಮತ್ತು ವೈ.ಎಸ್.ಆರ್. ಕಾಂಗ್ರೆಸ್ ಪಕ್ಷಗಳ ಭಾರೀ ನಷ್ಟದಿಂದ ಬಂದಿದೆ. ಎನ್.ಡಿ.ಎ. (ತೆಲುಗು ದೇಶಂ-ಬಿಜೆಪಿ ಕೂಟ)ಗೆ ಆಂಧ್ರ ಪ್ರದೇಶದಲ್ಲಿ ಸ್ವೀಪ್ ಆದರೆ, ತೆಲಂಗಾಣದಲ್ಲಿ ಉತ್ತಮ ಮುನ್ನಡೆಯಾಗಿದೆ. ಕೇರಳ, ತಮಿಳುನಾಡುಗಳಲ್ಲಿ ಮತಪ್ರಮಾಣ ಹೆಚ್ಚಿಸಿಕೊಂಡು ಗಮನಾರ್ಹ ಮಟ್ಟ ಮುಟ್ಟಿದೆ. ಕೇರಳದಲ್ಲಿ ಮೊದಲ ಬಾರಿ ಖಾತೆ ತೆರೆದಿದೆ. ಕರ್ನಾಟಕದಲ್ಲಿ ಮಾತ್ರ ಸೀಟು, ಮತಪ್ರಮಾಣ ಎರಡರಲ್ಲೂ ಕಳೆದುಕೊಂಡಿದ್ದರೂ, ದೊಡ್ಡ ಕೂಟದ ಸ್ಥಾನವನ್ನು ಉಳಿಸಿಕೊಂಡಿದೆ. ಇಂಡಿಯಾ ಕೂಟ ತಮಿಳುನಾಡು, ಕೇರಳಗಳಲ್ಲಿ ತನ್ನ ಪ್ರಾಬಲ್ಯ ಉಳಿಸಿಕೊಂಡು, ತೆಲಂಗಾಣ, ಕರ್ನಾಟಕ ರಾಜ್ಯಗಳಲ್ಲಿ ಅದರ ವಿಧಾನಸಭಾ ವಿಜಯದ ಮುಂದುವರಿಕೆಯಾಗಿ ನಿರೀಕ್ಷಿತವಾದಷ್ಟು ಅಲ್ಲದಿದ್ದರೂ, ಉತ್ತಮ ಮುನ್ನಡೆ ಸಾಧಿಸಿದೆ. ಆಂಧ್ರದಲ್ಲಿ ಸ್ಥಗಿತಗೊಂಡಿದೆ.

ವಸಂತರಾಜ ಎನ್.ಕೆ.

ದಕ್ಷಿಣದ ರಾಜ್ಯಗಳಲ್ಲಿ ಒಟ್ಟು 131 ಸೀಟುಗಳು ಇದ್ದು, ಅದರಲ್ಲಿ ಎನ್.ಡಿ.ಎ. ಕೂಟ 2019ರಲ್ಲಿ ಗಳಿಸಿದ್ದಕ್ಕಿಂತ 16 ಹೆಚ್ಚು ಸೀಟುಗಳನ್ನು ಗಳಿಸಿ 50 ಸೀಟುಗಳಿಗೆ ಏರಿದೆ. ಸೀಟು ಹೆಚ್ಚಳಕ್ಕೆ ಮುಖ್ಯ ಕಾರಣ ತೆಲುಗು ದೇಶಂ ಜತೆ ಮೈತ್ರಿ. ಇಂಡಿಯಾ ಕೂಟ 76 ಸೀಟುಗಳನ್ನು ಗಳಿಸಿದ್ದು 13 ಹೆಚ್ಚು ಸೀಟುಗಳನ್ನು ಗಳಿಸಿದೆ. ಎನ್.ಡಿ.ಎ. ಕೂಟ ದಕ್ಷಿಣದ ಈ ರಾಜ್ಯಗಳಲ್ಲಿ ಶೇ.7.6 ಮತ ಹೆಚ್ಚಿಸಿಕೊಂಡು ಶೇ.36.7 ಮತ ಗಳಿಸಿದೆ. ಇಂಡಿಯಾ ಕೂಟ ಶೇ.7.1 ರಷ್ಟು ಮತಗಳಿಕೆ ಹೆಚ್ಚಿಸಿಕೊಂಡು ಶೇ.40.4 ಮತ ಗಳಿಸಿದೆ. ಇತರರು ಶೇ.14.7 ಮತ ಕಳೆದುಕೊಂಡು ಶೇ.22.8 ಮತ ಗಳಿಸಿದ್ದಾರೆ. ಬಿಜೆಪಿ ದಕ್ಷಿಣದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಮುನ್ನಡೆ ಸಾಧಿಸಿದ್ದರೂ, ಇಂಡಿಯಾ ಕೂಟ ಈಗಲೂ ಅತಿ ದೊಡ್ಡ ಕೂಟವಾಗಿ ಮುಂದುವರೆದಿದೆ. ಇಲ್ಲಿ ಇತರರಲ್ಲಿ ಬಿ.ಆರ್.ಎಸ್. ಮತ್ತು ವೈ.ಎಸ್.ಆರ್. ಕಾಂಗ್ರೆಸ್ ಪ್ರಧಾನವಾಗಿ ಬರುತ್ತವೆ.

ದಕ್ಷಿಣದ ರಾಜ್ಯಗಳ ಸೀಟು-ಮತಪ್ರಮಾಣ ಗಳಿಕೆ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ -ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ -ಇಳಿಕೆ %
ಎನ್.ಡಿ.ಎ.	50	+16	36.7	+7.6
ಇಂಡಿಯಾ	76	+13	40.4	+7.1
ಇತರೆ	5	-29	22.8	-14.7

ತಮಿಳುನಾಡು

ತಮಿಳುನಾಡು ಚುನಾವಣೆಗಳಲ್ಲಿ ಹಿಂದಿನಂತೆ ಡಿಎಂಕೆ ನಾಯಕತ್ವದ ಇಂಡಿಯಾ ಕೂಟ, ಒಂದು ಸೀಟನ್ನು ಕಿತ್ತುಕೊಂಡು 39ರಲ್ಲಿ 39 ಸೀಟುಗಳ 'ಕ್ಲೀನ್ ಸ್ವೀಪ್' ಮಾಡಿದೆ. ಆದರೆ ಅದರ ಮತಗಳಿಕೆಯ ಪ್ರಮಾಣದಲ್ಲಿ ಶೇ.6.2ರಷ್ಟು ಕಡಿಮೆಯಾಯಿತು ಎಂಬುದನ್ನು ಗಮನಿಸಬೇಕು. ಎನ್.ಡಿ.ಎ. ಮತ್ತು ಎಐಎಡಿಎಂಕೆ ಕೂಟ ಇವೆರಡೂ ಶೂನ್ಯ ಸಂಪಾದನೆ ಮಾಡಿವೆ. ಆದರೆ (ಅನುಕ್ರಮವಾಗಿ) ಶೇ.18.3 ಮತ್ತು ಶೇ.23 ಮತ ಗಳಿಸಿವೆ. ಚುನಾವಣಾ-ಪೂರ್ವ ಸರ್ವೇಗಳು ಮತ್ತು ಎಕ್ಸಿಟ್ ಪೋಲುಗಳು ಇವೆರಡೂ ಕೂಟಕ್ಕೆ 6 ಸೀಟುಗಳಿಕೆಯ ಭವಿಷ್ಯ ನುಡಿದಿದ್ದು ಸುಳ್ಳಾಗಿದೆ. ಎನ್.ಡಿ.ಎ. ಶೇ.3.3 ಮತಗಳಿಕೆ ಮತ್ತು ಇತರರು ಶೇ.2.9ರಷ್ಟು ಮತಗಳಿಕೆ ಏರಿಸಿಕೊಂಡರೆ, ಎಐಎಡಿಎಂಕೆ ಕೂಟ ಶೇ.0.2 ಮತ ಕಳೆದುಕೊಂಡಿದೆ.

ಇಂಡಿಯಾ ಕೂಟದ ಭಾಗವಾಗಿ ಡಿಎಂಕೆ 22, ಕಾಂಗ್ರೆಸ್ 9, ಸಿಪಿಐ 2, ಸಿಪಿಐ(ಎಂ) 2, ವಿಸಿಕೆ 2, ಐಯುಎಂಎಲ್ ಮತ್ತು ಎಂಡಿಎಂಕೆ ತಲಾ 1 ಸೀಟು ಸ್ಪರ್ಧಿಸಿ ಎಲ್ಲ ಸೀಟುಗಳನ್ನು ಭಾರೀ ಅಂತರದಿಂದ ಗೆದ್ದವು. ಕೇವಲ 3 ಕ್ಷೇತ್ರಗಳಲ್ಲಿ ಅಂತರ 50 ಸಾವಿರಕ್ಕಿಂತ ಕಡಿಮೆಯಿತ್ತು. ಎನ್.ಡಿ.ಎ. ಕೂಟದಲ್ಲಿ ಬಿಜೆಪಿ 23, ಪಿಎಂಕೆ 10, ಟಿಎಂಸಿ(ಎಂ) 3, ಎಎಂಎಂಕೆ 2, ಪಕ್ಷೇತರ 1 ಸೀಟುಗಳನ್ನು ಸ್ಪರ್ಧಿಸಿ ಎಲ್ಲ ಸೀಟುಗಳಲ್ಲಿ ಸೋತವು. ಬಿಜೆಪಿ 9, ಪಿಎಂಕೆ, ಎಎಂಎಂಕೆ, ಪಕ್ಷೇತರ ತಲಾ 1 ರಂತೆ ಎನ್.ಡಿ.ಎ. 12 ಸೀಟುಗಲ್ಲಿ ಎರಡನೆ ಸ್ಥಾನದಲ್ಲಿದ್ದವು. ಡಿಎಂಡಿಕೆ 3, ಎಐಎಡಿಎಂಕೆ 24 ಸೀಟುಗಳಲ್ಲಿ ಎರಡನೆ ಸ್ಥಾನದಲ್ಲಿದ್ದವು. ಈ ಮೂರು ಕೂಟಗಳಲ್ಲದೆ ಸ್ಪರ್ಧಿಸಿದ್ದ ಇತರ ಪಕ್ಷಗಳಲ್ಲಿ ಪ್ರಮುಖವಾಗಿ ಬಿ.ಎಸ್.ಪಿ. ಮತ್ತು ಎನ್.ಟಿ.ಕೆ. ಎಲ್ಲ 39 ಸೀಟುಗಳಲ್ಲಿ, ಎನ್.ಎಂ.ಕೆ. 12 ಸೀಟುಗಳಲ್ಲಿ ಸ್ಪರ್ಧೆಯಲ್ಲಿದ್ದವು. ಇವುಗಳಲ್ಲಿ ಎನ್.ಟಿ.ಕೆ. ಶೇ.8.2 ಮತ ಪಡೆಯಿತು. ಇತರ ಪಕ್ಷಗಳ ಮತಗಳಿಕೆ ಶೇ.2.9ರಷ್ಟು ಹೆಚ್ಚಾಯಿತು. ಆದರೆ ಎಐಎಡಿಎಂಕೆ ಕಳೆದ ಬಾರಿ ಎನ್.ಡಿ.ಎ. ಕೂಟದಲ್ಲಿ ಇದ್ದಿದ್ದರಿಂದ ಮತಗಳಿಕೆ ಏರಿಕೆ ಇಳಿಕೆಯನ್ನು ಅರ್ಥೈಸುವುದರಲ್ಲಿ ಸಮಸ್ಯೆಗಳಿವೆ.

ತಮಿಳುನಾಡು-ಸೀಟು-ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ -ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ -ಇಳಿಕೆ %
ಎನ್.ಡಿ.ಎ.	0	0	18.3	+3.3
ಇಂಡಿಯಾ	39	+1	47.0	-6.2
ಎಐಎಡಿಎಂಕೆ	0	-1	23.0	-0.2
ಇತರೆ	0	0	11.7	+2.9

2019ರ ಚುನಾವಣೆಗಳಲ್ಲಿ ಈ ಬಾರಿಯ ಎಐಎಡಿಎಂಕೆ ಕೂಟ ಎನ್.ಡಿ.ಎ. ಕೂಟದ ಭಾಗವಾಗಿತ್ತು. ಆದರೆ ಎಐಎಡಿಎಂಕೆ ಯಲ್ಲಿದ್ದ ಒ.ಪಿ.ಎಸ್. ಇ.ಪಿ.ಎಸ್. ಬಣಗಳ ಸಂಘರ್ಷದಲ್ಲಿ ಮೂಗು ತೂರಿಸಿ (ಒ.ಪಿ.ಎಸ್. ಪರ ವಹಿಸಿ) ಪಕ್ಷವನ್ನು ಇಬ್ಭಾಗ ಮಾಡಿ, ತನ್ನ ಬಾಲಂಗೋಚಿ ಮಾಡಿ ಮುಗಿಸುವ ಪ್ರಯತ್ನ ಮತ್ತು ಬಿಜೆಪಿ ಹೊಸ ನಾಯಕ ಅಣ್ಣಾಮಲೈ ಎಐಡಿಎಂಕೆ ಸೇರಿದಂತೆ ದ್ರಾವಿಡ ಚಳುವಳಿ ಮತ್ತು ಪಕ್ಷಗಳ ನಾಯಕರನ್ನು ಕೆಟ್ಟದಾಗಿ ಮೂದಲಿಸಿದ್ದು ಎಐಡಿಎಂಕೆ ಕೂಟ ಎನ್.ಡಿ.ಎ. ಕೂಟದಿಂದ ಹೊರಬರುವಂತೆ ಮಾಡಿತು. ಇದರ ಫಲವಾಗಿ ತಮಿಳುನಾಡಿನಲ್ಲಿ ತ್ರಿಕೋಣ ಸ್ಪರ್ಧೆ ಏರ್ಪಟ್ಟಿತು. ಇದು ಇಂಡಿಯಾ ಕೂಟಕ್ಕೆ ಪ್ರಯೋಜನಕಾರಿಯೇ ಆಯಿತು. 12 ಕ್ಷೇತ್ರಗಳಲ್ಲಿ ಎಐಎಡಿಎಂಕೆ ಮತ್ತು ಎನ್.ಡಿ.ಎ. ಕೂಟಗಳ ಮತಗಳನ್ನು ಸೇರಿಸಿದರೆ ಅಂಕಗಣಿತದ ದೃಷ್ಟಿಯಿಂದ ಇಂಡಿಯಾ ಕೂಟದ ಮತಗಳಿಗಿಂತ ಹೆಚ್ಚಿತ್ತು. ಅಂದರೆ ಎನ್.ಡಿ.ಎ. ಮತ್ತು ಎಐಎಡಿಎಂಕೆ ಕೂಟಗಳು ಒಂದಾಗಿದ್ದಿದ್ದರೆ ಬರಿಯ ಅಂಕಗಣಿತದ ದೃಷ್ಟಿಯಿಂದ ಇಂಡಿಯಾ ಕೂಟದ ಸ್ವೀಪ್ ಕಷ್ಟವಿತ್ತು. ಆದರೆ ಅವರು ಸೇರಿದ್ದರೆ ಎಐಎಡಿಎಂಕೆ ಕೂಟಕ್ಕೆ, ಗಮನಾರ್ಹ ಪ್ರಮಾಣದ ಸೆಕ್ಯುಲರ್ ಮತ್ತು ಬಿಜೆಪಿ ಕೋಮುವಾಧ-ವಿರೋಧಿ ಮತಗಳ ನಷ್ಟದ ಸಾಧ್ಯತೆಯೂ ಇತ್ತು ಎಂಬುದನ್ನು ಪರಿಗಣಿಸಬೇಕು.

ಬಿಜೆಪಿ ಕರುಣಾನಿಧಿ, ಜಯಲಲಿತಾರಂತಹ ಹಿರಿಯ ನಾಯಕರ ನಿಧನಾ ನಂತರ ದ್ರಾವಿಡ ಪಕ್ಷಗಳ ಕಾಲ ಮುಗಿಯಿತು, ಅವು ಅಪ್ರಸ್ತುತವಾಗಿವೆ, ದ್ರಾವಿಡ ಪಕ್ಷಗಳು ಭ್ರಷ್ಟ, ಪರಿವಾರವಾದಿ ಪಕ್ಷಗಳು, ಅವು ಸನಾತನ ಹಿಂದೂ ಧರ್ಮದ ವಿರುದ್ಧ, ಅದನ್ನು ಒಡೆಯಲು ಪ್ರಯತ್ನಿಸುತ್ತಿವೆ, ಬಿಜೆಪಿಯೇ ಇವೆಲ್ಲವನ್ನು ತಡೆಯಲು ಉತ್ತಮ ಬದಲಿ ಪಕ್ಷ ಎಂದೆಲ್ಲ ಅಬ್ಬರದ ಪ್ರಚಾರ ಮಾಡಿತು. ಪ್ರಧಾನಿ ಹಲವು ಬಾರಿ ಭೇಟಿ ಕೊಟ್ಟು ಹಲವಾರು ಸಭೆಗಳನ್ನು ಮಾಡಿದರು. ರಾಜ್ಯದಲ್ಲಿ ಖಾತೆ ತೆರೆಯಲು ಬಿಜೆಪಿ ಶತಪ್ರಯತ್ನ ನಡೆಸಿತು. ಆದರೆ ವಿಫಲವಾಯಿತು

ಇಂಡಿಯಾ ಕೂಟ ಬಿಜೆಪಿ ಕೇಂದ್ರ ಸರಕಾರದ ವೈಫಲ್ಯ, ಜನರ ಆರ್ಥಿಕ ಸಂಕಟಗಳು, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿ, ರಾಜ್ಯದ ಆರ್ಥಿಕ ಸ್ವಾಯತ್ತತೆ, ಆರ್ಥಿಕ ಒಕ್ಕೂಟವಾದದ ಮೇಲೆ ದಾಳಿ, ಕೋಮುವಾದಿ ಫ್ಯಾಸಿಸಂ ಅಪಾಯದ ಕುರಿತು ಬಿರುಸಿನ ಪ್ರಚಾರ ನಡೆಸಿತು. ಇಂಡಿಯಾ ಕೂಟದಲ್ಲಿ ಎಡಪಕ್ಷಗಳ ಪಾಲುಗೊಳ್ಳುವಿಕೆ ಡಿಎಂಕೆ, ಕಾಂಗ್ರೆಸ್ ನಾಯಕರ ಜತೆ ಎಡ ಪಕ್ಷಗಳ ನಾಯಕರ ಪಾಲುಗೊಳ್ಳುವಿಕೆ ಚುನಾವಣಾ ಪ್ರಚಾರಕ್ಕೆ ತೀವ್ರ ಮೊನಚು ಕೊಟ್ಟಿತು. ಬಹುಶಃ ದೇಶದಲ್ಲೇ ಇಂಡಿಯಾ ಕೂಟವು ಪರಿಣಾಮಕಾರಿ ಪ್ರಚಾರ, ಬಿರುಸಿನ ಪೈಪೋಟಿ, ಪೂರ್ಣ ಐಕ್ಯತೆ ಪ್ರದರ್ಶಿಸಿದ ರಾಜ್ಯವಿದು.

ಕೇರಳ

ಕೇರಳದಲ್ಲಿ ಕಳೆದ ಬಾರಿಯಂತೆ ಹೆಚ್ಚು ಕಡಿಮೆ (1 ಸೀಟು ಕಳೆದುಕೊಂಡಿದೆ) ಯು.ಡಿ.ಎಫ್. 'ಕ್ಲೀನ್ ಸ್ವೀಪ್' ಮಾಡಿದೆ. ಅದರ ಮತಗಳಿಕೆ ಶೇ.45.1 ಇದ್ದು, ಮತಪ್ರಮಾಣದಲ್ಲಿ ಸ್ವಲ್ಪ (ಶೇ.3 ರಷ್ಟು) ಕಡಿತವಾಗಿದೆ. ಕಳೆದ ಬಾರಿಯಂತೆ ಎಲ್.ಡಿ.ಎಫ್. 1 ಸೀಟು ಪಡೆದಿದೆ. ಅದರ ಮತಗಳಿಕೆ ಶೇ. 33.4 ಇದ್ದು, ಸ್ವಲ್ಪ ಪ್ರಮಾಣದಲ್ಲಿ (ಶೇ.2.4ರಷ್ಟು) ಕಡಿತವಾಗಿದೆ. ಬಿಜೆಪಿ/ಎನ್.ಡಿ.ಎ. ಮೊದಲ ಬಾರಿಗೆ ಖಾತೆ ತೆರೆದಿದೆ. ಶೇ.4.4 ರಷ್ಟು ಮತ ಹೆಚ್ಚಿಸಿಕೊಂಡು ಗಮನಾರ್ಹ ಶೇ. 19.2 ಮತಗಳಿಸಿದೆ.

ಕೇರಳ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ–ಇಳಿಕೆ %
ಎಲ್.ಡಿ.ಎಫ್	1	0	33.4	-2.4
ಯು.ಡಿ.ಎಫ್	18	-1	45.1	-3.0
ಎನ್.ಡಿ.ಎ	1	1	19.2	+4.4
ಇತರೆ	0	0	2.3	+1.0

ಯು.ಡಿ.ಎಫ್. ನಿಂದ ಕಾಂಗ್ರೆಸ್ 16 ಸೀಟು ಸ್ಪರ್ಧಿಸಿ 14 ಗೆದ್ದಿದೆ. ಮುಸ್ಲಿಂ ಲೀಗ್ 2 ಸೀಟು ಸ್ಪರ್ಧಿಸಿ ಎರಡನ್ನೂ ಗೆದ್ದಿದೆ. ಆರ್.ಎಸ್.ಪಿ. ಮತ್ತು ಕೇರಳ ಕಾಂಗ್ರೆಸ್ (ಮಣಿ) ತಲಾ 1 ಸೀಟು ಸ್ಪರ್ಧಿಸಿ ಎರಡನ್ನೂ ಗೆದ್ದಿವೆ. ಎಲ್.ಡಿ.ಎಫ್. ನಿಂದ ಸಿಪಿಐ(ಎಂ) 15 ಸೀಟು ಸ್ಪರ್ಧಿಸಿ 1 ಸೀಟು ಗೆದ್ದಿದೆ. ಸಿಪಿಐ 4 ಮತ್ತು ಬೆಂಬಲಿತ ಪಕ್ಷೇತರರು 2 ಸೀಟು ಸ್ಪರ್ಧಿಸಿ ಯಾವ ಸೀಟೂ ಗೆಲ್ಲಲಿಲ್ಲ. ಬಿಜೆಪಿ 16 ಸೀಟು ಸ್ಪರ್ಧಿಸಿ 1 ಸೀಟು ಗೆದ್ದಿದೆ. ಭಾರತ ಧರ್ಮ ಜನ ಸೇನಾ 4 ಸೀಟು ಸ್ಪರ್ಧಿಸಿ ಯಾವುದನ್ನು ಗೆದ್ದಿಲ್ಲ. ಬಿಜೆಪಿ 1 ಸೀಟಿನಲ್ಲಿ (ತಿರುವನಂತಪುರ) ಎರಡನೇ ಸ್ಥಾನ ಪಡೆದಿದೆ. ಉಳಿದ 18 ಸೀಟುಗಳಲ್ಲಿ ಎಲ್.ಡಿ.ಎಫ್. 2ನೇ ಸ್ಥಾನದಲ್ಲಿದೆ.

ಕೇರಳದ ಜನ ಯಾವತ್ತೂ ವಿಧಾನಸಭೆ ಮತ್ತು ಲೋಕಸಭೆಯ ಚುನಾವಣೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಮತದಾನ ಮಾಡುತ್ತಾರೆ. ಕೇರಳದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮತ ನಿರ್ಣಾಯಕ. ವಿಧಾನಸಭಾ ಚುನಾವಣೆಯಲ್ಲಿ ಒಮ್ಮೆ ಎಲ್.ಡಿ.ಎಫ್. ಒಮ್ಮೆ ಯು.ಡಿ.ಎಫ್. ಆಯ್ಕೆಯಾಗುತ್ತಾರೆ. ಇವರ ನಡುವೆ ಯಾವತ್ತೂ ನೇರ ಸ್ಪರ್ಧೆಯಿರುತ್ತದೆ. ಈ ಸ್ಪರ್ಧೆಯಲ್ಲಿ ಎಲ್.ಡಿ.ಎಫ್. ಸ್ವಲ್ಪ ಮುಂದೆನೇ ಇರುತ್ತದೆ. ಬಿಜೆಪಿ ನಾಯಕತ್ವದ ಎನ್.ಡಿ.ಎ.ಯ ಮುಸ್ಲಿಂ–ವಿರೋಧಿ ಕೋಮು ಧ್ರುವೀಕರಣದ ರಾಜಕಾರಣ ನಿಧಾನವಾಗಿಯಾದರೂ ಬೇರೂರುತ್ತಿದ್ದು, ಅದು ಚುನಾವಣೆಯಿಂದ ಚುನಾವಣೆಗೆ ಬಲಗೊಳ್ಳುತ್ತಿದೆ. ಇವು ಕೇರಳದ ವಾಸ್ತವ ಸಂಗತಿಗಳು.

ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಅಲ್ಪಸಂಖ್ಯಾತ–ವಿರೋಧಿ ಕೋಮುವಾದಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬಾರದು ಎಂಬ ಕೇರಳದ ಸೆಕ್ಯುಲರ್ ಮತ್ತು ಅಲ್ಪಸಂಖ್ಯಾತರ ದೃಢನಿರ್ಧಾರದ ಪ್ರಯೋಜನ ಕಾಂಗ್ರೆಸ್/ಯು.ಡಿ.ಎಫ್. ಗೆ ಆಗಿತ್ತು. ಕಳೆದ ಬಾರಿ ರಾಹುಲ್ ಗಾಂಧಿ ಕೇರಳದಿಂದ ಸ್ಪರ್ಧೆ ಮಾಡಿದ್ದು ಅದಕ್ಕೆ ಪೂರಕವಾಗಿತ್ತು. ಇದರ ಜತೆಗೆ ಬಿಜೆಪಿಯ ಮುಸ್ಲಿಂ–ದ್ವೇಷದ ಸತತ ಪ್ರಯತ್ನದಿಂದ ಕೋಮುವಾದಿ ಧ್ರುವೀಕರಣದ ಪ್ರಕ್ರಿಯೆ ಸಹ ಸಾಗಿತ್ತು. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಪಕ್ಷಗಳ ಕೋಮುವಾದಿ ಹಾಗೂ ಕಮ್ಯುನಿಸ್ಟ್–ದ್ವೇಷಗಳ ನೀತಿ ಮತ್ತು ಪ್ರಚಾರ ಇದಕ್ಕೆ ನೀರೆರೆದಿದೆ. ಇದರ ಜತೆಗೆ ಬಿಜೆಪಿ ಚರ್ಚಿನ ಒಂದು ವಿಭಾಗವನ್ನು ಬಳಸಿಕೊಂಡು ಕೆಲವು ಕ್ರಿಶ್ಚಿಯನ್ ಜನವಿಭಾಗಗಳಲ್ಲಿ ಮುಸ್ಲಿಂ–ದ್ವೇಷವನ್ನು ಹರಡಿದೆ. ಸ್ವತಃ ಪ್ರಧಾನಿ ಅವರೇ ಒಬ್ಬ ಬಿಷಪ್ ರನ್ನು ಭೇಟಿ ಮಾಡಿ ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದರು. ಇದನ್ನು ಬಳಸಿಕೊಂಡು ಮುಸ್ಲಿಂ ಕೋಮುವಾದಿ ಶಕ್ತಿಗಳು ತಮ್ಮ ಅಸ್ತಿತ್ವಕ್ಕೆ ಅಗತ್ಯವಾದ ಕೋಮುಧ್ರುವೀಕರಣ ಗಟ್ಟಿಗೊಳಿಸಲು ಪ್ರಯತ್ನಿಸಿದವು.

ಕಳೆದ ವಿಧಾನಸಬಾ ಚುನಾವಣೆಯಲ್ಲಿ ಒಂದು ಬಾರಿ ಯುಡಿಎಫ್ ಇನ್ನೊಂದು ಬಾರಿ ಎಲ್.ಡಿ.ಎಫ್. ಎಂಬ ಹಿಂದಿನ ಸಂಪ್ರದಾಯವನ್ನು ಮುರಿದಿದ್ದ ಎಲ್.ಡಿ.ಎಫ್., ಲೋಕಸಭಾ ಚುನಾವಣೆಯಲ್ಲಿ ಯು.ಡಿ.ಎಫ್. ಗೆ ಆದ್ಯತೆಯ ಸಂಪ್ರದಾಯವನ್ನೂ ಮುರಿಯಲು ಪಣತೊಟ್ಟಿತ್ತು. ಕೇಂದ್ರದಲ್ಲಿ ಬಿಜೆಪಿ ಕೋಮುವಾದಿ ಸರಕಾರವನ್ನು ತಡೆಯಲು ಇಂಡಿಯಾ ಕೂಟದ ಭಾಗವಾಗಿರುವ ಎಡಪಕ್ಷಗಳು ಸಹ ಬದ್ಧವಾಗಿವೆ. ಆದರೆ ಕೇರಳದ ಹಿತಾಸಕ್ತಿ ಕಾಪಾಡುವಲ್ಲಿ ಮತ್ತು ಒಕ್ಕೂಟವಾದದ ಮೇಲೆ ದಾಳಿಯನ್ನು ಎದುರಿಸುವಲ್ಲಿ ಯು.ಡಿ.ಎಫ್. ಲೋಕಸಬಾ ಸದಸ್ಯರ ವೈಫಲ್ಯವನ್ನು ಬಯಲಿಗೆಳೆಯಿತು. ಇದಕ್ಕೆ ಕೇರಳಕ್ಕೆ ಅದರ ಪಾಲಿನ ತೆರಿಗೆ, ಅನುದಾನ ಕೊಡದಿರುವ ಬಗ್ಗೆ ದೆಹಲಿಯಲ್ಲಿ ಸಂಘಟಿಸಲಾದ ಪ್ರತಿಭಟನೆಯಲ್ಲಿ ಯು.ಡಿ.ಎಫ್. ಸಂಸದರು ಭಾಗವಹಿಸದಿರುವ ಉದಾಹರಣೆಯನ್ನು ಕೊಡಲಾಯಿತು. ಮುಖ್ಯಮಂತ್ರಿ ಪಿಣರಾಯಿಯವರನ್ನು ಇ.ಡಿ. ಇನ್ನೂ ಏಕೆ ಬಂಧಿಸುತ್ತಿಲ್ಲ ಎಂಬ ರಾಹುಲ್ ಗಾಂಧಿ ಹೇಳಿಕೆಯ ಹಿನ್ನೆಲೆಯಲ್ಲಿ, ಕೇಂದ್ರೀಯ ಏಜೆನ್ಸಿಗಳ ಮೂಲಕ ಪ್ರಜಾಪ್ರಭುತ್ವ ದಮನದ ವಿರುದ್ಧ ಕಾಂಗ್ರೆಸ್ ನ ಪ್ರತಿರೋಧದ ಪ್ರಾಮಾಣಿಕತೆಯನ್ನು ಸಹ ಎಲ್.ಡಿ.ಎಫ್. ಪ್ರಶ್ನಿಸಿತು.

ಸಿಎಎ ಮತ್ತು ಕಲಮು 370ರ ಕುರಿತು ಜಾಣಮೌನವನ್ನು ಟೀಕಿಸುತ್ತಾ, ಒಂದು ಕಡೆ ಮೃದು–ಹಿಂದುತ್ವ ಇನ್ನೊಂದು ಕಡೆ ಮುಸ್ಲಿಂ–ಕ್ರಿಶ್ಚಿಯನ್ ಕೋಮುಶಕ್ತಿಗಳ ಓಲೈಕೆಯ ಕಾಂಗ್ರೆಸ್ ನ ದುರ್ಬಲ ಸೆಕ್ಯುಲರ್ ಧೋರಣೆಗಳನ್ನು ತನ್ನ ಪ್ರಚಾರದ ಮೂಲಕ ಎಲ್.ಡಿ.ಎಫ್. ಬಯಲಿಗೆಳೆಯಿತು. ಆದರೆ ಎಲ್.ಡಿ.ಎಫ್.ನ ಈ ಧೋರಣೆಯಿಂದ ಪ್ರಭಾವಿತರಾಗುವ ಬದಲು, ಅದರ ಮತದಾರರ ಒಂದು ವಿಭಾಗ ಸೇರಿದಂತೆ ಸೆಕ್ಯುಲರ್ ಮತದಾರರ ಒಂದು ವಿಭಾಗ ಕೋಮು ಧ್ರುವೀಕರಣಕ್ಕೆ ಒಳಗಾದಂತೆ ಕಾಣುತ್ತದೆ. ಯು.ಡಿ.ಎಫ್.ನ ಅದರಲ್ಲೂ ಮುಸ್ಲಿಂ ಲೀಗಿನ ಚುನಾವಣಾ ಪ್ರಚಾರ ಕೋಮುಧ್ರವೀಕರಣದ್ದು ಆಗಿತ್ತು. ಕೋಮುಧ್ರುವೀಕರಣದ ಭರಾಟೆಯಲ್ಲಿ ರಾಜ್ಯಗಳ ಅಧಿಕಾರ, ಪ್ರಜಾಪ್ರಭುತ್ವದ ಹಕ್ಕುಗಳ ದಮನ ಗೌಣವಾಯಿತು. ಇದಲ್ಲದೆ ಕಾಂಗ್ರೆಸ್ ಒಳಗಿನ ಬಣ ಸಂಘರ್ಷ ಇದ್ದಲ್ಲಿ ಕೆಲವು ಕಡೆ ಒಳಒಪ್ಪಂದ ಮಾಡಿಕೊಂಡು ಒಂದು



ಬಣ ಬಿಜೆಪಿ/ಎನ್.ಡಿ.ಎ.ಗೆ ತಮ್ಮ ಮತ ವರ್ಗಾಯಿಸಿದೆಯೆಂದು ಹೇಳಲಾಗಿದೆ. ಬಿಜೆಪಿ ಗೆದ್ದ ತ್ರಿಶೂರ್ ನಲ್ಲಿ ಸಹ ಈ ರೀತಿಯ ಮತ ವರ್ಗಾವಣೆಯಾಗಿದೆ ಎಂದು ಕಾಂಗ್ರೆಸ್ ನಾಯಕರ ಪರಸ್ಪರ ದೂಷಣೆಯಲ್ಲಿ ಹೊರಬಂದಿದೆ. ಕಾಂಗ್ರೆಸ್ ನ ಕೆಲವು ನಾಯಕರು (ಎ.ಕೆ.ಆಂಟನಿ ಮಗ, ಕರುಣಾಕರನ್ ಮಗಳು) ಚುನಾವಣೆಯ ಮೊದಲು ಬಿಜೆಪಿ ಸೇರಿದ್ದರೆ, ಇನ್ನು ಕೆಲವರು ಫಲಿತಾಂಶದ ನಂತರದ ಆಯ್ಕೆ ಇಟ್ಟುಕೊಂಡಿದ್ದು ಬಿಜೆಪಿಯ ಮತಪ್ರಮಾಣ ಹೆಚ್ಚಿಸಲು ಕಾರಣರಾಗಿದ್ದಾರೆ ಎನ್ನಲಾಗಿದೆ.

ಕೇಂದ್ರದಲ್ಲಿ ಬಿಜೆಪಿ ಕೋಮುವಾದಿ ಸರಕಾರವನ್ನು ತಡೆಯಲು ಕಾಂಗ್ರೆಸ್ ಬಲಪಡಿಸಬೇಕು ಎಂಬ ಸರಳ ತರ್ಕ, ಕೋಮು ಧ್ರುವೀಕರಣ ಮತ್ತು ಎಲ್.ಡಿ.ಎಫ್. ಸರಕಾರದ 3 ವರ್ಷಗಳ ಆಡಳಿತದ ವಿರುದ್ಧ ಸ್ವಲ್ಪ ಅತೃಪ್ತಿ, ಕೇರಳದ ಫಲಿತಾಂಶಕ್ಕೆ ಕಾರಣವಾಗಿರಬಹುದು.

ಕರ್ನಾಟಕ

ಕರ್ನಾಟಕದಲ್ಲಿ ಲೋಕಸಭೆಯಲ್ಲಿ ಎನ್.ಡಿ.ಎ. ಪ್ರಾಬಲ್ಯ 2019ಕ್ಕೆ ಹೋಲಿಸಿದರೆ, ಸೀಟು (–7) ಮತ್ತು ಮತಪ್ರಮಾಣ (–ಶೇ.9.4) ಎರಡರಲ್ಲೂ ಮುಂದಿದೆ. ಬಿಜೆಪಿ 25 ಸೀಟು ಸ್ಪರ್ಧಿಸಿ 17 ಸೀಟು ಮತ್ತು ಶೇ.46.1 ಮತ ಗಳಿಸಿದರೆ, ಜೆ.ಡಿ.ಎಸ್. 3 ಸೀಟು ಸ್ಪರ್ಧಿಸಿ 2 ಸೀಟು, ಶೇ.5.6 ಮತಗಳಿಸಿದೆ. ಕಾಂಗ್ರೆಸ್ ಎಲ್ಲ 28 ಸೀಟುಗಳಲ್ಲಿ ಸ್ಪರ್ಧಿಸಿ 8 ಸೀಟು ಮತ್ತು ಶೇ.45.4 ಮತ ಗಳಿಸಿ ಶೇ.13.5 ಮತ ಏರಿಕೆಯೊಂದಿಗೆ ತನ್ನ ಸ್ಥಾನವನ್ನು ಉತ್ತಮಪಡಿಸಿದೆ. ಮತಗಳಿಕೆಯಲ್ಲಿ ಭಾರೀ ಹೆಚ್ಚಳ ಕಾಂಗ್ರೆಸ್ ನ ಮಹತ್ವದ ಸಾಧನೆಯೇ. ಆದರೆ ವಿಧಾನಸಭೆಯ ಸಾಧನೆಗೆ ಹೋಲಿಸಿದರೆ ಕಾಂಗ್ರೆಸ್ ನಿಂದ ಇನ್ನಷ್ಟು ಉತ್ತಮ ಸಾಧನೆ (15–18 ಸೀಟು) ನಿರೀಕ್ಷಿಸಲಾಗಿತ್ತು. ಅದು ಸಾಧ್ಯವಾಗಿಲ್ಲ. ಆದರೆ ಮತಗಳಿಕೆಯಲ್ಲಿ 2023ರ ವಿಧಾನಸಭೆ ಚುನಾವಣೆಗಿಂತಲೂ ಸ್ವಲ್ಪ ಹೆಚ್ಚಳವಾಗಿದೆ. ಆದರೆ ಬಿಜೆಪಿ 2023ರ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ (ಶೇ.42.9) ಮತಗಳಿಕೆಯಲ್ಲೂ ಗಮನಾರ್ಹ ಏರಿಕೆ ಸಾಧಿಸಿದೆ. ಪ್ರಮುಖವಾಗಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟವು ಮತಗಳನ್ನು ಎನ್.ಡಿ.ಎ. ಅಭ್ಯರ್ಥಿಗೆ ಕ್ರೋಢೀಕರಿಸಿದೆ. ವಿಧಾನಸಭೆಯಲ್ಲಿ ತ್ರಿಕೋನ ಸ್ಪರ್ಧೆ ಕಾಂಗ್ರೆಸ್ ಗೆ ಸಹಕಾರಿಯಾಗಿತ್ತು. ಈಗ ನೇರ ಸ್ಪರ್ಧೆಯಿಂದ ನಷ್ಟ ಅನುಭವಿಸಿದೆ. ಕಾಂಗ್ರೆಸ್ ಕಲ್ಯಾಣ ಕರ್ನಾಟಕದ 6 ಸೀಟುಗಳನ್ನು ಸ್ವೀಪ್ ಮಾಡಿದರೆ, ಬಿಜೆಪಿ ಉತ್ತರ (ಮುಂಬಯಿ) ಮತ್ತು ಕರಾವಳಿ ಕರ್ನಾಟಕವನ್ನು (1 ಸೀಟು ಹೊರತು ಪಡಿಸಿದರೆ) ಸ್ವೀಪ್ ಮಾಡಿದೆ. ದಕ್ಷಿಣ ಕರ್ನಾಟಕದಲ್ಲಿ ಬಿಜೆಪಿ–ಜೆಡಿಎಸ್ ಕೂಟ ಹೆಚ್ಚು ಕಡಿಮೆ ಸ್ವೀಪ್ ಮಾಡಿದೆ. ಕಾಂಗ್ರೆಸ್ 2 ಸೀಟಿಗೆ ತೃಪ್ತಿ ಪಡಬೇಕಾಗಿದೆ.

ಕರ್ನಾಟಕ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ*	19	-7	51.7	-9.4
ಇಂಡಿಯಾ	9	8	45.4	+13.5
ಇತರೆ	0	-1	2.9	-4.1

(* ಜೆಡಿಎಸ್ ಈ ಬಾರಿ ಬಿಜೆಪಿಯ ಜತೆ ಕೂಟದಲ್ಲಿತ್ತು. 2019ರಲ್ಲಿ ಕಾಂಗ್ರೆಸ್ ಮೈತ್ರಿಕೂಟದಲ್ಲಿತ್ತು. ಆದರೂ ಜೆಡಿಎಸ್ ಸೀಟು ಮತ್ತು ಮತ ಪ್ರಮಾಣಗಳನ್ನು ಎನ್.ಡಿ.ಎ. ಕೂಟಕ್ಕೆ ಸೇರಿಸಲಾಗಿದೆ. ಹಾಗಾಗಿ ಕಳೆದ ಬಾರಿಗಿಂತ ಸೀಟು, ಮತಪ್ರಮಾಣದಲ್ಲಿ ಏರಿಕೆ/ಇಳಿಕೆ ಅರ್ಥೈಸುವುದರಲ್ಲಿ ಜಾಗ್ರತೆ ವಹಿಸಬೇಕು. ಇಲ್ಲಿ ಇತರ ಎಂದರೆ ಪ್ರಮುಖವಾಗಿ ಮಂಡ್ಯದ ಸುಮಲತಾ ಮತ್ತು ಇತರ ಪಕ್ಷಗಳು. ಅವರು ಪಕ್ಷೇತರರಾಗಿ ಆರಿಸಿಬಂದು ಆನಂತರ ಬಿಜೆಪಿ ಸೇರಿದ್ದರು)

ಕಾಂಗ್ರೆಸ್ ತನ್ನ ಗ್ಯಾರಂಟಿಗಳ ಜಾರಿಯು ಭಾರೀ ವಿಜಯ ತಂದುಕೊಡಬಹುದು ಎಂಬ ಭ್ರಮೆಯಲ್ಲಿತ್ತು. ಅದು ಸಾಧಿಸಿದ ಮುನ್ನಡೆ ಪ್ರಧಾನವಾಗಿ ಗ್ಯಾರಂಟಿಗಳಿಂದಲೇ ಆಗಿತ್ತು. ಜನರನ್ನು ಬಾಧಿಸುವ ಬೆಲೆಏರಿಕೆ, ನಿರುದ್ಯೋಗ ಇತ್ಯಾದಿ ನಿಜಸಮಸ್ಯೆಗಳು; ರಾಜ್ಯಗಳ ದಮನ ತಾರತಮ್ಯಕ್ಕೆ ಕಾರಣವಾಗುವ ಅತಿ ಕೇಂದ್ರೀಕರಣದ ವಿರುದ್ಧ; ಬಿಜೆಪಿ–ಮೋದಿ ನಿರಂಕುಶವಾದಿ ಆಡಳಿತದ ವಿರುದ್ಧ–ಹಿಂದೆಂದಿಗಿಂತಲೂ ದೊಡ್ಡ ಪ್ರಮಾಣದಲ್ಲಿ ಸಾಕಷ್ಟು ಪ್ರಚಾರವನ್ನು ಕಾಂಗ್ರೆಸ್ ನಡೆಸಿತು. ಆದರೆ – ಅಭ್ಯರ್ಥಿಗಳ ಆಯ್ಕೆಯಲ್ಲಿ ಹಲವು ಎಡವಟ್ಟುಗಳು; ಬಣ ಸಂಘರ್ಷಗಳು, ತೀವ್ರ ಸಂಘಟನಾ ಅನೈಕ್ಯತೆ ಅಶಿಸ್ತು; ತನ್ನ ಸಾಧನೆಗಳನ್ನು ಜನರಿಗೆ ಪರಿಣಾಮಕಾರಿಯಾಗಿ ಹೇಳುವ ಮತ್ತು ಬೆಂಬಲವನ್ನು ಮತಗಳಾಗಿ ಪರಿವರ್ತಿಸುವ ಕಾರ್ಯಕರ್ತರ ಪಡೆಯ ಅಭಾವ; ಕೋಮುವಾದದ ವಿರುದ್ಧ ದೃಢ ಸೈದ್ಧಾಂತಿಕ ನಿಲುವಿನ ಮತ್ತು ಹೋರಾಟದ ಅಭಾವ; ಬಿಜೆಪಿಯ ಕೋಮುವಾದಿ–ಫ್ಯಾಸಿಸಂ ಸೋಲಿಸಲು ಇತರ ಪ್ರಜಾಸತ್ತಾತ್ಮಕ ಪಕ್ಷ/ಶಕ್ತಿಗಳ ಹಾಗೂ ನಾಗರಿಕ ಸಮಾಜದ ಛಲ, ಉತ್ಸಾಹ, ಬೆಂಬಲಗಳನ್ನು ಕ್ರೋಢೀಕರಿಸುವುದರಲ್ಲಿ ವೈಫಲ್ಯ ಇವೆಲ್ಲ ಕಾಂಗ್ರೆಸ್ ಸಾಧನೆಯನ್ನು ಕುಂಠಿತಗೊಳಿಸಿವೆ. ತೀವ್ರ ಸಂಘಟನಾ ಅನೈಕ್ಯತೆ ಅಶಿಸ್ತುವೊಂದೇ 2–3 ಸೀಟುಗಳ ನಷ್ಟ ತಂದಿರಬಹುದು ಎನ್ನಲಾಗಿದೆ.

ಜೆಡಿಎಸ್ ಜತೆ ಮೈತ್ರಿಕೂಟ, ಕೋಮು ಧ್ರುವೀಕರಣ, ಜಾತಿ ಸಮೀಕರಣ, ರಾಜ್ಯ ಸರಕಾರಗಳ ವೈಫಲ್ಯಗಳ ಟೀಕೆ, ತನ್ನ ಸಾಧನೆಗಳನ್ನು ಜನರಿಗೆ ಪರಿಣಾಮಕಾರಿಯಾಗಿ ಹೇಳುವ ಮತ್ತು ಬೆಂಬಲವನ್ನು ಮತಗಳಾಗಿ ಪರಿವರ್ತಿಸುವ ಕಾರ್ಯಕರ್ತರ ಪಡೆ ಬಿಜೆಪಿಯ ಕೈ ಹಿಡಿದಿದೆ. ಕೋಮು ಧ್ರುವೀಕರಣಕ್ಕೆ ನೇಹಾ ಹಿರೇಮಠ ಕೊಲೆ ಮತ್ತಿತರ ಹಲವು ಘಟನೆಗಳ ಬಳಕೆ, ಅಪಾರ ಸಂಪನ್ಮೂಲ, ಲಿಂಗಾಯತ ಮತ್ತು ಒಕ್ಕಲಿಗ ಇವೆರಡು ಎರಡು ಪ್ರಬಲ ಸಮುದಾಯಗಳು ತಮ್ಮ ಸಂಘರ್ಷ ಪಕ್ಕಕ್ಕಿಟ್ಟು ಅಹಿಂದ ಕೂಟವನ್ನು ಹಿಮ್ಮೆಟ್ಟಿಸಲು ಒಂದಾಗಿ ಎನ್.ಡಿ.ಎ. ಕೂಟವನ್ನು ಪ್ರಧಾನವಾಗಿ ಬೆಂಬಲಿಸಿದ್ದು, ಬಿಜೆಪಿ ಒಟ್ಟಾರೆ ಮೇಲುಗೈಗೆ ಕಾರಣವಾಯಿತು.

ತೆಲಂಗಾಣ

ತೆಲಂಗಾಣದಲ್ಲಿ ಎನ್.ಡಿ.ಎ. ಅಂದರೆ ಬಿಜೆಪಿಯೇ. ಯಾವುದೇ ಕೂಟವಿಲ್ಲದೆ ಬಿಜೆಪಿ ಸ್ವತಂತ್ರವಾಗಿ ಉತ್ತಮ ಮುನ್ನಡೆ ಸಾಧಿಸಿ, 4 ಸೀಟು ಹೆಚ್ಚಿಸಿಕೊಂಡು 8 ಸೀಟು ಗಳಿಸಿದೆ. ಮತಪ್ರಮಾಣದಲ್ಲೂ ಹಿಂದಿಗಿಂತ (2019 ಲೋಕಸಭಾ) ಶೇ.15.3 ಹೆಚ್ಚಳ ಸಾಧಿಸಿ, ಶೇ.35.0 ಮತ ಪಡೆದಿದೆ. ಬಿ.ಆರ್.ಎಸ್. ಅಥವಾ ತೆಲುಗು ದೇಶಂ ಪಕ್ಷಗಳ ಸಹಾಯವಿಲ್ಲದೆ ತೆಲಂಗಾಣ/ಆಂಧ್ರಗಳಲ್ಲಿ ಸ್ವತಂತ್ರ ಅಸ್ತಿತ್ವವಿಲ್ಲದ ಬಿಜೆಪಿಯ ದೃಷ್ಟಿಯಿಂದ ಇದು ದೊಡ್ಡ ಮುನ್ನಡೆಯೇ. ಇತ್ತೀಚಿನ (2023) ವಿಧಾನಸಭೆ ಮತಗಳಿಕೆಯನ್ನು

ಪುಟ 10 ಕ್ಕೆ

ದಕ್ಷಿಣದ ರಾಜ್ಯಗಳಲ್ಲಿ ಬಿಜೆಪಿಗೆ ಸ್ವಲ್ಪ ಮುನ್ನಡೆ..... ಪುಟ 9 ರಿಂದ

(ಶೇ.14) ನೋಡಿದರೆ ಇನ್ನೂ ಗಮನಾರ್ಹವೇ. ಇಲ್ಲಿ ಕಾಂಗ್ರೆಸ್ ಸಹ ಇಂಡಿಯಾ ಕೂಟದ ಇತರ ಪಕ್ಷಗಳಿಗೆ ಯಾವುದೇ ಸೀಟು ಬಿಟ್ಟು ಕೊಡದೆ ಎಲ್ಲ 17 ಸೀಟುಗಳಲ್ಲಿ ಸ್ಪರ್ಧಿಸಿತ್ತು. 5 ಸೀಟುಗಳನ್ನು ಹೆಚ್ಚಿಸಿಕೊಂಡು 8 ಸೀಟು ಗಳಿಸಿದೆ. ಕಳೆದ ಬಾರಿಗಿಂತ (2019 ಲೋಕಸಭಾ) ಶೇ.10.6 ಮತಗಳಿಕೆ ಹೆಚ್ಚಿಸಿಕೊಂಡಿತ್ತು. ಆದರೆ 2023ರ ವಿಧಾನಸಭೆ ಮತಗಳಿಕೆಗೆ (ಶೇ.39.4) ಹೋಲಿಸಿದರೆ ಶೇ.0.7 ಮಾತ್ರ ಹೆಚ್ಚಳ ಸಾಧಿಸಿದೆ. ಅತಿ ದೊಡ್ಡ ಪಕ್ಷವಾಗಿಯೂ, ಬಿಜೆಪಿಗಿಂತ ಶೇ.5 ಹೆಚ್ಚು ಮತ ಗಳಿಸಿದ್ದರೂ ಅದರಷ್ಟೇ ಸೀಟು ಗಳಿಸಿದೆ.

ತೆಲಂಗಾಣ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ.	8	+4	35.0	+15.3
ಇಂಡಿಯಾ	8	+5	40.1	+10.6
ಬಿ.ಆರ್.ಎಸ್	0	-9	16.7	-24.7
ಎಐಎಂಐಎಂ	1	0	3.0	+0.2
ಇತರೆ	0	0	4.8	-1.3

ಹಿಂದಿನ ಆಳುವ ಪಕ್ಷವಾದ ತೆಲಂಗಾಣ/ಭಾರತ ರಾಷ್ಟ್ರ ಸಮಿತಿ (ಟಿ.ಆರ್.ಎಸ್. ಅಥವಾ ಈಗ ಬಿ.ಆರ್.ಎಸ್.) ಈ ಚುನಾವಣೆಯಲ್ಲಿ ಹೆಚ್ಚು ಕಡಿಮೆ ಕರಗಿ ಹೋದದ್ದು ಅನಿರೀಕ್ಷಿತ ಸಂಗತಿ. ಬಿ.ಆರ್.ಎಸ್. ಹಿಂದಿನ (2019) ಬಾರಿಗೆ ಹೋಲಿಸಿದರೆ ಶೇ.24.7 ಮತಪ್ರಮಾಣದಲ್ಲಿ ಕುಸಿತ ಕಂಡು, ಮತಗಳಿಕೆಯಲ್ಲಿ 3ನೇ ಸ್ಥಾನಕ್ಕೆ ಹೋಗಿದೆ ಮತ್ತು ಎಲ್ಲ 9 ಸೀಟುಗಳನ್ನು ಕಳೆದುಕೊಂಡಿದೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಪಡೆದಿದ್ದ ಶೇ.37.4 ಮತಪ್ರಮಾಣದಿಂದ ಸಹ ಶೇ.21 ಕಳೆದುಕೊಂಡದ್ದು ಬಿಜೆಪಿಯ ಉತ್ತಮ ಸಾಧನೆಗೆ ಹಾದಿ ಮಾಡಿಕೊಟ್ಟಿದೆ. ಇದು ರಾಜಕೀಯ ವಲಯದಲ್ಲಿ ಎಷ್ಟು ಅಚ್ಚರಿ ಮೂಡಿಸಿತ್ತೆಂದರೆ, ಬಿಜೆಪಿ ಆಮಿಷ/ಬೆದರಿಕೆ ಬಳಸಿ ಬಿ.ಆರ್.ಎಸ್. ಜತೆ ಒಳ–ಒಪ್ಪಂದ ಮಾಡಿಕೊಂಡಿದೆ ಎಂಬ ಪುಕಾರುಗಳು ಸಹ ಕೇಳಿ ಬಂದಿವೆ.

ಬಿ.ಆರ್.ಎಸ್. ಗಂಭೀರವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಲಿಲ್ಲ. ಆ ಪಕ್ಷದ ನಾಯಕ ಮತ್ತು ಕಾರ್ಯಕರ್ತರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಸೋಲು ಹತಾಶೆ ಮೂಡಿಸಿರುವ ಕಾರಣದಿಂದಲೂ ಇದು ಆಗಿರಬಹುದು. ಆದರೂ ಕೆ.ಸಿ.ಆರ್. ಹಿಂದೆ ಎನ್.ಡಿ.ಎ. ಮತ್ತು ಯು.ಪಿ.ಎ. ಎರಡೂ ಕೂಟದ ಭಾಗವಾಗಿದ್ದು, ಚೌಕಾಶಿ/ಸಂಘರ್ಷ ಎರಡನ್ನೂ ಮಾಡಿದ್ದು, 2022 ರಲ್ಲಿ ರಾಷ್ಟ್ರೀಯ ಪಕ್ಷವಾಗುವ ಮಹತ್ವಾಕಾಂಕ್ಷೆಯಿಂದ ಬಿ.ಆರ್. ಎಸ್. ಎಂದು ಹೆಸರು ಬದಲಾಯಿಸಿದ್ದು, ಕಾಂಗ್ರೆಸ್–ಬಿಜೆಪೇತರ ಪ್ರಾದೇಶಿಕ ಪಕ್ಷಗಳ ಫೆಡೆರಲ್ ಫ್ರಂಟ್ ಕಟ್ಟಲು ಪ್ರಯತ್ನಿಸಿದ್ದು, ಇಂತಹ ವರ್ಣರಂಜಿತ ಚರಿತ್ರೆಯ ಪಕ್ಷ ಈ ಚುನಾವಣೆಗಳಲ್ಲಿ ಗಂಭೀರವಾಗಿ ತೊಡಗಿಸಿಕೊಳ್ಳಲಿಲ್ಲ ಎಂಬುದು ಆಶ್ಚರ್ಯದ ವಿಷಯವೇ. ಹಾಗಾಗಿಯೇ ಇಂತಹ ಪುಕಾರುಗಳು ಹಬ್ಬಿವೆ. ಸಾಕಷ್ಟು ವ್ಯಾಪಕ ಕಲ್ಯಾಣ ಯೋಜನೆಗಳನ್ನು ಇದು ಜಾರಿ ಮಾಡಿದ್ದರೂ ಅದರಲ್ಲಿ ಅಷ್ಟೇ ವ್ಯಾಪಕ ಭ್ರಷ್ಟಾಚಾರ, ಅದರ ಆಡಳಿತದ ವಿರುದ್ಧ ಅತೃಪ್ತಿ, ಜನರಲ್ಲಿ ಎಬ್ಬಿಸಿದ ಅತಿಯಾದ ನಿರೀಕ್ಷೆಗಳು ಹುಸಿಯಾಗಿದ್ದು ಮತ್ತು ಬಿಜೆಪಿ ಸರಕಾರದ ನೀತಿ ಧೋರಣೆಗಳ (ಒಟ್ಟಾರೆ ರಾಷ್ಟ್ರೀಯ ರಾಜಕಾರಣದ) ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳದ್ದು, ಇವು ಬಿ.ಆರ್. ಎಸ್. ನ ತಿರಸ್ಕಾರಕ್ಕೆ ಕಾರಣವಾಗಿರಬಹುದು.

ಎಐಎಂಐಎಂ ಅದರ ಭದ್ರಕೋಟೆಯಾದ ಹೈದರಾಬಾದಿನಲ್ಲಿ ತನ್ನ ಸೀಟು ಉಳಿಸಿಕೊಂಡಿದೆ. ಕಳೆದ ಬಾರಿ ಬಿ.ಆರ್.ಎಸ್. ಜತೆ ಸೀಟು ಹೊಂದಾಣಿಕೆಯಲ್ಲಿದ್ದ ಪಕ್ಷ ಈ ಬಾರಿ ಸ್ವತಂತ್ರವಾಗಿ ಸ್ಪರ್ಧಿಸಿತ್ತು.

ಕಾಂಗ್ರೆಸ್ ವಿಧಾನಸಭಾ ಚುನಾವಣಾ ಸಾಧನೆಗಳ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಇದಕ್ಕಿಂತ ಉತ್ತಮ ಸಾಧನೆ ಮಾಡಬೇಕಿತ್ತು. ಕಾಂಗ್ರೆಸ್ ಆಳುವ ಪಕ್ಷವಾದ ಕೂಡಲೇ ತನ್ನ ರಾಜಕಾರಣವನ್ನು ಬಿಜೆಪಿಯ ವಿರುದ್ಧ ಆಡಳಿತ–ವಿರೋಧಿ ಅಲೆಯಿರುವ ಸನ್ನಿವೇಶದಲ್ಲಿ ಇತರ ರಾಜ್ಯಗಳಂತೆ–ಜನರ ಕಾಳಜಿಯ ವಿಷಯಗಳ ಕುರಿತು, ಒಕ್ಕೂಟವಾದ, ಪ್ರಜಾಪ್ರಭುತ್ವ, ಜಾತ್ಯತೀತತೆಯ ಮೇಲೆ ಬಿಜೆಪಿಯ ದಾಳಿಗಳ ವಿರುದ್ಧ, ಬಿಜೆಪಿಗೆ ಇನ್ನೊಂದು ಅವಕಾಶ ಕೊಟ್ಟರೆ ಫ್ಯಾಸಿಸ್ಟ್ ಅಪಾಯದ ಕುರಿತು – ಬಿರುಸಿನ ಪ್ರಚಾರ ನಡೆಸುವಲ್ಲಿ ರಾಜ್ಯ ಕಾಂಗ್ರೆಸ್ ಸೋತಿದೆ. ಕರ್ನಾಟಕದಂತೆಯೇ, ಕಾರ್ಯಕರ್ತರ ಅಭಾವ, ಬಿಜೆಪಿಯ ಕೋಮುವಾದಿ–ಫ್ಯಾಸಿಸಂ ಸೋಲಿಸಲು ಇತರ ಪ್ರಜಾಸತ್ತಾತ್ಮಕ ಪಕ್ಷ/ಶಕ್ತಿಗಳ ಹಾಗೂ ನಾಗರಿಕ ಸಮಾಜದ ಛಲ, ಉತ್ಸಾಹ, ಬೆಂಬಲಗಳನ್ನು ಕ್ರೋಡೀಕರಿಸುವುದರಲ್ಲಿ ವೈಫಲ್ಯವೇ ಅದು ಹೆಚ್ಚಿನ ಸಾಧನೆಯಲ್ಲಿ ಸೋತಿದ್ದಕ್ಕೆ ಮುಖ್ಯ ಕಾರಣವಾಗಿರುವಂತೆ ಕಾಣುತ್ತಿದೆ. ಆಳುವ ಪಕ್ಷವಾಗಿದ್ದಾಗ ರಾಜಕೀಯ ಪಕ್ಷದಂತೆ ಕೆಲಸ ಮಾಡುವುದನ್ನು ಮರೆತು ಬಿಡುವುದು ಕಾಂಗ್ರೆಸ್ ನ ಸಾಮಾನ್ಯ ಸಮಸ್ಯೆ.

ಆಂಧ್ರ ಪ್ರದೇಶ

ಆಂಧ್ರ ಪ್ರದೇಶದಲ್ಲೂ ತೆಲಂಗಾಣದಂತೆ ಹಿಂದಿನ ಆಳುವ ಪಕ್ಷ (ಇಲ್ಲಿ ವೈ.ಎಸ್.ಆರ್. ಕಾಂಗ್ರೆಸ್) ಧೂಳೀಪಟವಾಗಿ, ಎನ್.ಡಿ.ಎ. ಭಾರೀ ಮುನ್ನಡೆ ಸಾಧಿಸಿದೆ. ಇಂಡಿಯಾ ಕೂಟ ಶೂನ್ಯ ಸಂಪಾದನೆ ಮಾಡಿದೆ. ವೈ.ಎಸ್.ಆರ್. ಕಾಂಗ್ರೆಸ್ ಜತೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಹ ಪರಾಭವ ಹೊಂದಿ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡಿದೆ. ಲೋಕಸಭಾ ಚುನಾವಣೆಯಲ್ಲಿ 18 ಸೀಟುಗಳನ್ನು ಕಳೆದುಕೊಂಡು ಕೇವಲ 4 ಸೀಟು ಪಡೆದಿದೆ. ಶೇ.39.5 ಮತ ಪಡೆದರೂ ಶೇ.9.6 ರಷ್ಟು ಮತಪ್ರಮಾಣ ಕಳೆದುಕೊಂಡಿದೆ. ಕಳೆದ ಬಾರಿ ಕೇವಲ 3 ಸೀಟು ಪಡೆದಿದ್ದ ಎನ್.ಡಿ.ಎ. ಈ ಬಾರಿ 21 ಸೀಟು ಗೆದ್ದಿದೆ.

ಈ ಬಾರಿ ಎನ್.ಡಿ.ಎ. ಕೂಟದ ಭಾಗವಾಗಿದ್ದ ತೆಲುಗು ದೇಶಂ 17 ಸೀಟುಗಳಲ್ಲಿ ಸ್ಪರ್ಧಿಸಿ 16 ಗೆದ್ದಿದೆ. (ಕಳೆದ ಬಾರಿ ಯಾವುದೇ ಮೈತ್ರಿಕೂಟವಿಲ್ಲದೆ 3 ಸೀಟುಗಳನ್ನು ಮಾತ್ರ ಗೆದ್ದಿತ್ತು.) ಬಿಜೆಪಿ 6 ಸೀಟುಗಳಲ್ಲಿ 3 ಸೀಟುಗಳನ್ನು ಗೆದ್ದಿದೆ. ಕಳೆದ ಬಾರಿ ಎಲ್ಲ ಸೀಟುಗಳಲ್ಲಿ ಸ್ಪರ್ಧಿಸಿ ಶೂನ್ಯ ಸಂಪಾದನೆ ಮಾಡಿತ್ತು.) ಜನಸೇನಾ ಪಕ್ಷ 2 ಸೀಟುಗಳಲ್ಲಿ ಸ್ಪರ್ಧಿಸಿ ಎರಡನ್ನೂ ಗೆದ್ದಿದೆ. ಆಂಧ್ರದ ಎನ್.ಡಿ.ಎ. ಕೂಟದಲ್ಲಿ ಬಿಜೆಪಿ ತನ್ನದೇ ನೆಲೆಯಿಲ್ಲದೆ ಜೂನಿಯರ್ ಪಾರ್ಟನರ್ ಆಗಿದೆ. ತೆಲುಗು ದೇಶಂ ನಾಯಕತ್ವದ ಕೂಟದಲ್ಲಿ ಅದರ ಸಾಮೂಹಿಕ ನೆಲೆಯ ಪ್ರಯೋಜನ ಪಡೆದಿದೆ. ಕೂಟದ ಭಾಗವಾಗಿ ಶೇ.1 ರಿಂದ ಶೇ.11.3 ಕ್ಕೆ ಮತಗಳಿಕೆ ಹೆಚ್ಚಿಸಿಕೊಂಡಿದೆ. ತೆಲುಗು ದೇಶಂ (ಬಹುಶಃ 25 ರ ಬದಲು 16 ಸೀಟು ಸ್ಪರ್ಧಿಸಿದ್ದರಿಂದ) ಶೇ.2.4 ಮತಪ್ರಮಾಣ ಕಳೆದುಕೊಂಡು ಶೇ.37.8 ಮತಗಳಿಸಿದೆ. ಜನಸೇನಾ ಸಹ ಕಡಿಮೆ ಸೀಟು ಸ್ಪರ್ಧಿಸಿದ್ದರಿಂದ ಶೇ.1.6 ಮತಪ್ರಮಾಣ ಕಡಿಮೆಯಾಗಿ ಶೇ.4.30 ಮತ ಗಳಿಸಿದೆ. ಇಂಡಿಯಾ ಕೂಟದಿಂದ ಕಾಂಗ್ರೆಸ್ 23 ಸೀಟು, ಸಿಪಿಐ, ಸಿಪಿಐ(ಎಂ) ತಲಾ 1 ಸೀಟು ಸ್ಪರ್ಧಿಸಿ ಶೇ.3 ಮತ ಗಳಿಸಿದೆ. 25 ರಲ್ಲಿ ಕೇವಲ 5 ಸೀಟುಗಳಲ್ಲಿ ಅಂತರ 1 ಲಕ್ಷಕ್ಕಿಂತ ಕಡಿಮೆಯಿದ್ದು ಅವುಗಳಲ್ಲಿ 4 ಸೀಟುಗಳು ವೈ.ಎಸ್.ಆರ್. ಕಾಂಗ್ರೆಸ್ ಗೆದ್ದ ಸೀಟುಗಳು.

ಆಂಧ್ರ ಪ್ರದೇಶ–ಸೀಟು–ಮತಪ್ರಮಾಣ

ಪಕ್ಷ/ ಕೂಟ	ಗಳಿಸಿದ ಸೀಟುಗಳು	ಸೀಟುಗಳ +ಏರಿಕೆ –ಇಳಿಕೆ	ಮತ ಪ್ರಮಾಣ %	ಮತ ಪ್ರಮಾಣ +ಏರಿಕೆ –ಇಳಿಕೆ %
ಎನ್.ಡಿ.ಎ.	21	18	53.5	+7.1
ಇಂಡಿಯಾ	0	0	3.2	+1.8
ವೈ.ಎಸ್.ಆರ್ ಕಾಂಗ್ರೆಸ್	4	-18	39.5	-9.6
ಇತರೆ	0	0	3.9	+0.8

ಆಂಧ್ರ ಪ್ರದೇಶದಲ್ಲಿ ಎನ್.ಡಿ.ಎ.ಯ ಭಾರಿ ಮುನ್ನಡೆ ಮೋದಿ ಅಥವಾ ಬಿಜೆಪಿಯ ಕೇಂದ್ರದ ಆಡಳಿತದ ಅನುಮೋದನೆ ಖಂಡಿತ ಅಲ್ಲ. ತೆಲುಗು ದೇಶಂ ನೀತಿ/ಧೋರಣೆಗಳ ಸಕಾರಾತ್ಮಕ ಬೆಂಬಲವೂ ಅಲ್ಲ. ಇದು ಪ್ರಮುಖವಾಗಿ ವೈ.ಎಸ್.ಆರ್. ಕಾಂಗ್ರೆಸ್ ಆಡಳಿತ–ವಿರೋಧ ಅಲೆ ಅಥವಾ ಅದರ ವಿರುದ್ಧ ನಕಾರಾತ್ಮಕ ಪ್ರತಿಭಟನಾ ಮತ. ಹಿಂದಿನ ತೆಲುಗು ದೇಶಂ ಆಡಳಿತದ ಜನ–ವಿರೋಧಿ ಕಾರ್ಪೊರೆಟ್–ಪರ ನೀತಿಗಳಿಂದ ಆಕ್ರೋಶಗೊಂಡಿದ್ದ ಜನತೆ, 2019ರಲ್ಲಿ ಜಗನ್ಮೋಹನ ರೆಡ್ಡಿ ಅವರ ಚುನಾವಣಾ–ಪೂರ್ವ ಪಾದಯಾತ್ರೆ ಹಾಗೂ ಮುಖ್ಯಮಂತ್ರಿಯಾಗಿ ಜನರ ಮೆಚ್ಚುಗೆ ಗಳಿಸಿದ್ದ ಅವರ ತಂದೆ ವೈ.ಎಸ್.ರಾಜಶೇಖರ ರೆಡ್ಡಿ ಅವರ ಮಗ ಎಂಬ ಅನುಕಂಪದಿಂದ ಭಾರೀ ಬಹುಮತ ಕೊಟ್ಟಿದ್ದರು.

ಆದರೆ ಮುಖ್ಯಮಂತ್ರಿಯಾದ ನಂತರ ಜನರಿಂದ ಮಾತ್ರವಲ್ಲ, ಅವರದ್ದೇ ಪಕ್ಷದ ಮತ್ತು ಇತರ ಪಕ್ಷಗಳ ನಾಯಕರು, ಶಾಸಕರು, ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು ಹೀಗೆ ಯಾರಿಗೂ ನಿಲುಕದ ‘ಕಬ್ಬಿಣದ ಪರದೆ’ಯ ಹಿಂದಿನ ವ್ಯಕ್ತಿಯಾಗಿ ಬಿಟ್ಟಿದ್ದರು. ಅವರ ನಿರಂಕುಶ, ಅಹಂಕಾರದ ಧೋರಣೆ, ಕೆಲವೇ ಬಂಟರ ಮೇಲೆ ಅವಲಂಬನೆ ಅವರಿಗೆ ಮುಳುವಾಯಿತು. ಬರಿಯ ‘ನೇರ ನಗದು ವರ್ಗಾವಣೆ’ಯ ಯೋಜನೆಗಳಿಂದ ಜನರನ್ನು ತೃಪ್ತಿ ಪಡಿಸಬಹುದು. ಮೂಲ ಸೌಕರ್ಯದ ಯೋಜನೆಗಳಿಗೆ ಸಂಪನ್ಮೂಲ ಒದಗಿಸುವಲ್ಲಿ; ಕೈಗಾರಿಕೀಕರಣ ಮತ್ತು ಖಾಲಿ ಇರುವ ಸರಕಾರಿ ಉದ್ಯೋಗಗಳ ಭರ್ತಿ ಮೂಲಕ ನಿರುದ್ಯೋಗ ಪರಿಹಾರ ಇತ್ಯಾದಿಗಳ ಬಗ್ಗೆ ನಿರ್ಲಕ್ಷ, ದುಡಿಯುವ ಜನರ ವಿವಿಧ ಭಾಗಗಳ ಪ್ರಜಾಸತ್ತಾತ್ಮಕ ಹೋರಾಟಗಳ ದಮನ, ತೆಲುಗು ದೇಶಂ ಇತ್ಯಾದಿ ವಿರೋಧ ಪಕ್ಷಗಳ ದಮನಕ್ಕೆ ಪ್ರಯತ್, ಮೂರು ರಾಜಧಾನಿಗಳ ತುಗ್ಲಕ್ ಯೋಜನೆ, ರಾಜ್ಯಕ್ಕೆ ಎಷ್ಟು ದ್ರೋಹ ಮಾಡಿದರೂ, ಕೋಮುವಾದಿ–ಫ್ಯಾಸಿಸ್ಟ್ ನತ್ತ ಜಾರುತ್ತಿರುವ ಬಿಜೆಪಿ ಕೇಂದ್ರ ಸರಕಾರಕ್ಕೆ ಯಾವುದೇ ಪ್ರತಿರೋಧ ತೋರದೆ ಅಂಟಿಕೊಳ್ಳುವ ಧೋರಣೆ, ಇವೆಲ್ಲ ಜಗನ್ಮೋಹನ ರೆಡ್ಡಿ, ಅವರ ಪಕ್ಷ ಮತ್ತು ಸರಕಾರದ ವಿರುದ್ಧ ಆಕ್ರೋಶ ಮಡುಗಟ್ಟಿದ್ದು ಚುನಾವಣೆಯಲ್ಲಿ ಸ್ಫೋಟಗೊಂಡಿದೆ ಎನ್ನಬಹುದು. ಒಟ್ಟಿಗೆ ನಡೆದ ವಿಧಾನ ಸಭಾ ಮತ್ತು ಲೋಕಸಭಾ ಚುನಾವಣೆಗಳಲ್ಲಿ ರಾಜ್ಯ ಸರಕಾರದ ವೈಫಲ್ಯ ಮತ್ತು ಆಡಳಿತ ವಿರೋಧಿ ಆಕ್ರೋಶವೇ ಪ್ರಧಾನವಾಗಿದೆ. ಕೇಂದ್ರ ಸರಕಾರದ ಸಾಧನೆ–ವೈಫಲ್ಯ, ರಾಷ್ಟ್ರೀಯ ವಿಷಯಗಳು ಗೌಣವಾದಂತಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ವೈಫಲ್ಯ ಮತ್ತು ಎರಡರ ಬಗೆಗೂ ತೀವ್ರ ಆಕ್ರೋಶ ಇರುವಾಗ ಅದನ್ನು ಬಿರುಸಿನ ಪ್ರಚಾರದ ಮೂಲಕ ಬಳಸಿಕೊಳ್ಳಲು ಇಂಡಿಯಾ ಕೂಟ ಸಹ ವಿಫಲವಾಗಿದೆ.

ಅಂತರ್ ಜಾತಿ ಮದುವೆಯಾಗಿದ್ದ ಜೋಡಿಗೆ ರಕ್ಷಣೆ ನೀಡಿದ್ದಕ್ಕಾಗಿ ತಿರುನಲ್ವೇಲಿ ಸಿಪಿಎಂ ಕಚೇರಿ ಮೇಲೆ ದಾಳಿ! 13 ಮಂದಿ ಬಂಧನ!





ಚೆನ್ನೈ ಜೂ.14. ಅಂತರ್ ಜಾತಿ ಮದುವೆಯಾಗಿದ್ದ ಜೋಡಿಯನ್ನು ಹುಡುಕುತ್ತಿದ್ದ ತಂಡವು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಿರುನಲ್ವೇಲಿ ಜಿಲ್ಲಾ ಸಮಿತಿಯ ಕಚೇರಿ ಮೇಲೆ ದಾಳಿ ಮಾಡಿದೆ. ಜೂನ್ 14 ರಂದು ನಡೆದ ಈ ದಾಳಿಯಲ್ಲಿ ಕಛೇರಿಯಲ್ಲಿದ್ದ ಟೇಬಲ್, ಕುರ್ಚಿ, ಗಾಜು, ಬಾಗಿಲು ಸೇರಿದಂತೆ ಹಲವು ವಸ್ತುಗಳನ್ನು ಒಡೆದು ಕಛೇರಿಯನ್ನು ದೋಚಿದ್ದಾರೆ. ಇದನ್ನು ತಡೆದ ಪಕ್ಷದ ಸಂಗಾತಿಗಳ ಮೇಲೂ ಹಲ್ಲೆ ನಡೆದಿದೆ. ಪೊಲೀಸರ ಸಮ್ಮುಖದಲ್ಲೇ ಗುಂಪು ಅರಾಜಕತೆ ಮೆರೆದಿದೆ. ಇದರ ಬೆನ್ನಲ್ಲೇ ರಾಜ್ಯ ಯುವ ಸಂಘಟನೆ ಕಾರ್ಯದರ್ಶಿ ➚

ಟೆಕ್ ಸಂಸ್ಥೆಗಳಿಗೆ ಕಾರ್ಮಿಕ ಕಾನೂನುಗಳಿಂದ ವಿನಾಯಿತಿ ವಿಸ್ತರಿಸುವ ಸರ್ಕಾರದ ನಿರ್ಧಾರ:

ಪ್ರತಿಭಟನೆಗೆ ಸಿದ್ದತೆ ನಡೆಸುತ್ತಿರುವ ಕರ್ನಾಟಕ ಐಟಿ ನೌಕರರ ಸಂಘಟನೆ



ಕರ್ನಾಟಕ ಸರ್ಕಾರವು ಜೂನ್ 10 ರ ಸುತ್ತೋಲೆಯಲ್ಲಿ, ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯಿದೆಯಿಂದ, ಐಟಿ, ಐಟಿಇಎಸ್ (IT/ITeS), ಸ್ಟಾರ್ಟ್‌ಆಪ್ ಗಳು, ಅನಿಮೇಷನ್, ಗೇಮಿಂಗ್, ಕಂಪ್ಯೂಟರ್ ಗ್ರಾಫಿಕ್ಸ್, ಟೆಲಿಕಾಂ ಮತ್ತು ಬಿಪಿಒ ಉದ್ಯಮಗಳಿಗೆ ವಿನಾಯಿತಿಯನ್ನು ಇನ್ನೂ ಐದು ವರ್ಷಗಳವರೆಗೆ ಅಂದರೆ, 2029ರ ವರೆಗೆ ವಿಸ್ತರಿಸಿದೆ. ರಾಜ್ಯ ಸರ್ಕಾರದ ನಿರ್ಧಾರವನ್ನು ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ಬಲವಾಗಿ ವಿರೋಧಿಸಿದೆ. ಐಟಿ ಉದ್ಯೋಗಿಗಳ ಬೃಹತ್ ಪ್ರತಿಭಟನೆಗೆ ಸಂಘ ವ್ಯಾಪಕ ಸಿದ್ದತೆ ನಡೆಸುತ್ತಿದೆ.

2024ರ ಮಾರ್ಚ್ 16 ರಂದು, ಕರ್ನಾಟಕ ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನದ (IT/ITeS) ಉದ್ಯಮಗಳಲ್ಲಿ ನೀಡಿರುವ ಕೈಗಾರಿಕಾ ಉದ್ಯೋಗ (ಜಾರಿಯಲ್ಲಿರುವ ಆದೇಶ) ಕಾನೂನಿನ ವಿನಾಯತಿಯನ್ನು ತಕ್ಷಣವೇ ರದ್ದುಗೊಳಿಸುವಂತೆ ಒತ್ತಾಯಿಸಿ, ಬೆಂಗಳೂರಿನಲ್ಲಿನ ಕಾರ್ಮಿಕ ಭವನದಲ್ಲಿರುವ ಕಾರ್ಮಿಕ ಆಯುಕ್ತರ ಕಛೇರಿ ಎದುರು, ಮಾಹಿತಿ ತಂತ್ರಜ್ಞಾನ ಕಂಪನಿಗಳ ನೂರಾರು ಉದ್ಯೋಗಿಗಳು ಪ್ರತಿಭಟನೆ ನಡೆಸಿದ್ದರು. ವಿನಾಯಿತಿಯನ್ನು ಪಡೆಯುವಾಗ ವಿಧಿಸಲಾದ ನಾಲ್ಕು ಷರತ್ತುಗಳನ್ನು ಉದ್ಯೋಗದಾತರು ಪಾಲಿಸದ ಕಾರಣ ಇನ್ನು ಮುಂದೆ ವಿನಾಯಿತಿಯನ್ನು ನವೀಕರಿಸದಂತೆ ಸರ್ಕಾರವನ್ನು ಪ್ರತಿಭಟನಾಕಾರರು ಒತ್ತಾಯಿಸಿದ್ದರು.

ಪ್ರತಿಭಟನೆಯ ನಂತರ ಕಾರ್ಮಿಕ ಸಂಘಟನೆಯ ಅಧ್ಯಕ್ಷರು ವಿ.ಜೆ.ಕೆ. ನಾಯರ್, KITU ಪ್ರದಾನ ಕಾರ್ಯದರ್ಶಿ ಸೂರಜ್ ನಿದಿಯಂಗ ಮತ್ತು ಸಂಘದ ಇತರೆ ಮುಖಂಡರು ಕಾರ್ಮಿಕ ಅಯುಕ್ತರನ್ನು ಭೇಟಿಮಾಡಿ ಮನವಿ ಸಲ್ಲಿಸಿದ್ದರು. ಮನವಿಯನ್ನು ಪರಿಗಣಿಸುವುದಾಗಿ ಕಾರ್ಮಿಕ ಆಯುಕ್ತರು ಭರವಸೆ ನೀಡಿದ್ದರು. ಸರ್ಕಾರ IT/ITeS ವಲಯಕ್ಕೆ ವಿನಾಯಿತಿ ನೀಡುವುದಿಲ್ಲ ಎಂದು ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ ನೀಡಿದ್ದರು. ಆದರೆ, 20 ಲಕ್ಷ ಐಟಿ ಉದ್ಯೋಗಿಗಳ ಕಳವಳವನ್ನು ಕಡೆಗಣಿಸಿರುವ ರಾಜ್ಯ ಸರ್ಕಾರವು ಏಕಪಕ್ಷೀಯವಾಗಿ ವಿನಾಯಿತಿಯನ್ನು ಇನ್ನೂ ಐದು ವರ್ಷಗಳವರೆಗೆ ವಿಸ್ತರಿಸಿ ಜೂನ್ 10ರಂದು ಸುತ್ತೋಲೆ ಹೊರಡಿಸಿದೆ. ಇದು ಐಟಿ ಉದ್ಯೋಗಿಗಳ ಆಕ್ರೋಶಕ್ಕೆ ಕಾರಣವಾಗಿದೆ.

"ಹಿಂದಿನ ವಿನಾಯಿತಿ ಸಂದರ್ಭದಲ್ಲಿ ಕಂಪನಿಗಳು ವಿಧಿಸಿದ ಷರತ್ತುಗಳನ್ನು ಅನುಸರಿಸಲು ವಿಫಲವಾದ ಬಗ್ಗೆ ಕೆಐಟಿಯು ಕಳವಳ ವ್ಯಕ್ತಪಡಿಸಿದ ಹೊರತಾಗಿಯೂ ವಿನಾಯಿತಿಯನ್ನು ಮುಂದುವರಿಸುವ ನಿರ್ಧಾರಕ್ಕೆ ಸರ್ಕಾರ ಬಂದಿದೆ" ಎಂದು ಕೆಐಟಿಯು ಪ್ರಧಾನ ಕಾರ್ಯದರ್ಶಿ ಸೂರಜ್ ನಿದಿಯಂಗ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯಲ್ಲಿ ನೀಡಿರುವ ವಿನಾಯತಿಯ ವಿರುದ್ದ ಕರ್ನಾಟಕ ರಾಜ್ಯ ಐಟಿ ಎಂಪ್ಲಾಯೀಸ್ ಯೂನಿಯನ್ (ರಿ) (KITU) ಈಗಾಗಲೇ ಕರ್ನಾಟಕ ಉಚ್ಚ ನ್ಯಾಯಾಲದಲ್ಲಿ ರಿಟ್ ಅರ್ಜಿ ಸಲ್ಲಿಸಿದೆ.

2014ರಿಂದ ವಿನಾಯಿತಿ

ಸರ್ಕಾರದ ಅಂದಾಜಿನ ಪ್ರಕಾರ, ಪ್ರಸ್ತುತ ಕರ್ನಾಟಕದಲ್ಲಿ 8,785 IT/BT ಸಂಸ್ಥೆಗಳಲ್ಲಿ ಸುಮಾರು 18 ಲಕ್ಷ ವೃತ್ತಿಪರರು ಉದ್ಯೋಗದಲ್ಲಿದ್ದಾರೆ. ಕರ್ನಾಟಕವು IT, ITeS, ವ್ಯಾಪಾರ ಪ್ರಕ್ರಿಯೆ ಹೊರಗುತ್ತಿಗೆ ಮತ್ತು ಜ್ಞಾನ ಪ್ರಕ್ರಿಯೆ ಹೊರಗುತ್ತಿಗೆ ಸಂಸ್ಥೆಗಳಿಗೆ ಕಾರ್ಮಿಕ ನಿಯಮಗಳಿಂದ ನಾಲ್ಕಕ್ಕೂ ಹೆಚ್ಚು ಸಂದರ್ಭಗಳಲ್ಲಿ IE(SO) ಕಾಯಿದೆಯ ಅನ್ವಯದಿಂದ ವಿನಾಯಿತಿಯನ್ನು ಪಡೆದುಕೊಂಡಿತ್ತು. ಜನವರಿ 25, 2014 ರಂದು, ರಾಜ್ಯ ಸರ್ಕಾರವು 1946 ರ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ಕಾಯ್ದೆಯಿಂದ ಕಂಪನಿಗಳಿಗೆ ವಿನಾಯಿತಿ ನೀಡುವ ಅಧಿಸೂಚನೆಯನ್ನು ಹೊರಡಿಸಿತು. ಈ ವಿನಾಯಿತಿಯನ್ನು ಮೇ 25, 2019 ರಂದು ಹೆಚ್ಚುವರಿ ಐದು ವರ್ಷಗಳವರೆಗೆ ವಿಸ್ತರಿಸಲಾಯಿತು. ಈ ಅವಧಿ ಮೇ 25, 2024 ರಂದು ಮುಗಿದಿತ್ತು. ಈಗ ಮತ್ತೆ 5 ವರ್ಷಗಳಿಗೆ ವಿಸ್ತರಿಸಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಸಂಸ್ಥೆಗಳಿಂದ ಷರತ್ತುಗಳ ಉಲ್ಲಂಘನೆ

"ವಿನಾಯಿತಿ ನೀಡುವ ಷರತ್ತುಗಳ ಪ್ರಕಾರ, ಪ್ರತಿಯೊಂದು ಸಂಸ್ಥೆಯು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ 2013 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳ ಪ್ರಕಾರ 'ಆಂತರಿಕ ಸಮಿತಿ'ಯನ್ನು ರಚಿಸಬೇಕಾಗಿದೆ. ಉದ್ಯೋಗಿಗಳು ಮತ್ತು ಉದ್ಯೋಗದಾತರ ಸಮಾನ ಪ್ರಾತಿನಿಧ್ಯದೊಂದಿಗೆ ಕುಂದುಕೊರತೆ ಪರಿಹಾರ ಸಮಿತಿಯನ್ನು ಸ್ಥಾಪಿಸುವ ಅಗತ್ಯವಿದೆ. ನೌಕರರ ವಿರುದ್ಧ ಯಾವುದೇ ಶಿಸ್ತು ಕ್ರಮ, ವಿಸರ್ಜನೆ, ಮುಕ್ತಾಯ, ಪದಚ್ಯುತಿ, ವಜಾ ಇತ್ಯಾದಿಗಳ ಬಗ್ಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಬೇಕು ಮತ್ತು ಸರ್ಕಾರವು ಕೋರಿದಾಗ ಉದ್ಯೋಗಿ ಸೇವಾ ಪರಿಸ್ಥಿತಿಗಳ ಕುರಿತು ವಿವರಗಳನ್ನು ಒದಗಿಸಲು ಸಿದ್ಧರಾಗಿರಬೇಕು" ಎಂದು ನಿದಿಯಂಗ ಹೇಳುತ್ತಾರೆ.

"ಆದಾಗ್ಯೂ, ಈ ಎಲ್ಲಾ ಷರತ್ತುಗಳನ್ನು ಸಂಸ್ಥೆಗಳು ಸ್ಪಷ್ಟವಾಗಿ ಉಲ್ಲಂಘಿಸಿವೆ, ಮತ್ತು ಸಾವಿರಾರು ಉದ್ಯೋಗಿಗಳನ್ನು ನೋಟಿಸ್ ಅಥವಾ ವಿಚಾರಣೆಯಿಲ್ಲದೆ ಬಿಡುಗಡೆ ಮಾಡಲಾಗುತ್ತದೆ, ಕೆಲಸದಿಂದ ವಜಾಗೊಳಿಸಲಾಗುತ್ತದೆ ಮತ್ತು ಕೈಗಾರಿಕಾ ವಿವಾದಗಳ ಕಾಯಿದೆಯಡಿ ಸರ್ಕಾರದಿಂದ ಸೂಕ್ತ ಅನುಮತಿ ಪಡೆಯಲು ಕಾನೂನು ಅವಶ್ಯಕತೆಗಳನ್ನು ಅನುಸರಿಸದೆ ಸಗಟು ವಜಾಗೊಳಿಸಲಾಗುತ್ತದೆ." ಎಂದು ನಿದಿಯಂಗ ಆರೋಪಿಸುತ್ತಾರೆ.

"ಕೆಐಟಿಯು ಅಂತಹ ಸಂದರ್ಭಗಳಲ್ಲಿ ಹಲವಾರು ವಿವಾದಗಳನ್ನು ಎತ್ತಿದೆ ಮತ್ತು ಯಾವುದೇ ಸಂದರ್ಭಗಳಲ್ಲಿ, ವಿನಾಯಿತಿ ಆದೇಶದ III ನೇ ಷರತ್ತಿನಲ್ಲಿ ಉಲ್ಲೇಖಿಸಿದಂತೆ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ತಿಳಿಸುವ ಅಗತ್ಯವನ್ನು ಉದ್ಯೋಗದಾತರು ಅನುಸರಿಸುವುದಿಲ್ಲ ಎಂದು ಕಂಡುಹಿಡಿದಿದೆ. ಈ ಆಧಾರದ ಮೇಲೆ, KITU IT/ITeS/ಜ್ಞಾನ–ಆಧಾರಿತ ಉದ್ಯಮಗಳನ್ನು ನಿಯಂತ್ರಿಸುವ ಸೇವಾ ಷರತ್ತುಗಳ ನಿಯಮಾವಳಿಗಳನ್ನು ಪ್ರಕ್ರಿಯೆಯಲ್ಲಿ ಉದ್ಯೋಗದಾತರು ಮತ್ತು ಉದ್ಯೋಗಿಗಳ ಭಾಗವಹಿಸುವಿಕೆಯೊಂದಿಗೆ ನಿಖರವಾಗಿ ವ್ಯಾಖ್ಯಾನಿಸಲಾಗಿದೆ ಎಂದು ಪ್ರತಿಪಾದಿಸುತ್ತದೆ. ವಿನಾಯಿತಿಯನ್ನು ಕೊನೆಗೊಳಿಸುವುದರ ಮೂಲಕ ಮತ್ತು IE (SO) ಕಾಯಿದೆಯ ನಿಬಂಧನೆಗಳನ್ನು ಅನ್ವಯಿಸುವ ಮೂಲಕ ಮತ್ತು IT/ITeS/ಜ್ಞಾನ ಉದ್ಯಮದ ಅಗತ್ಯತೆಗಳಿಗೆ ಸೂಕ್ತವಾಗಿ ಅಳವಡಿಸಿಕೊಳ್ಳುವ ಮೂಲಕ ಮಾತ್ರ ಇದನ್ನು ಸಾಧಿಸಬಹುದು" ಎಂದು ನಿದಿಯಂಗ ಹೇಳಿದ್ದಾರೆ.

ಪ್ರತಿಭಟನೆಗೆ ನಿರ್ಧಾರ

ಕರ್ನಾಟಕ ರಾಜ್ಯ ಐಟಿ/ ಐಟಿಇಎಸ್ ನೌಕರರ ಸಂಘವು ವಿನಾಯಿತಿಯನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್ ನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಈ ಅರ್ಜಿಯು ಪ್ರಸ್ತುತ ತೀರ್ಪಿನ ಹಂತದಲ್ಲಿದೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ. ಇದರ ನಡುವೆಯೂ, ಸರ್ಕಾರದ ಈ ಏಕಪಕ್ಷೀಯ ನಿರ್ಧಾರದ ವಿರುದ್ಧ ಹೋರಾಟ ನಡೆಸಲಾಗುತ್ತದೆ ಎಂದಿರುವ ಕೆಐಟಿಯು ಸಂಘಟನೆಯು, ಈ ಉದ್ಯಮಗಳ ನೌಕರರ ನಡುವೆ ವ್ಯಾಪಕ ಪ್ರಚಾರ ನಡೆಸುತ್ತಿದೆ. IT/ITES/ ಸ್ಟಾರ್ಟ್ ಅಪ್ ಗಳು / ಅನಿಮೇಷನ್/ ಗೇಮಿಂಗ್/ ಕಂಪ್ಯೂಟರ್ ಗ್ರಾಫಿಕ್ಸ್/ ಟೆಲಿಕಾಂ/ ಬಿಪಿಒ/ ಇತರ ಜ್ಞಾನ ಆಧಾರಿತ ಉದ್ಯಮಗಳಲ್ಲಿನ ಎಲ್ಲರೂ ಮುಂದೆ ನಡೆಯುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿದೆ.

ಬಂಡಲರಾಜ ಅವರು ನಿರ್ದಿಷ್ಟ ಜಾತಿಗೆ ಸೇರಿದ 5 ಮಹಿಳೆಯರು ಸೇರಿದಂತೆ 13 ಮಂದಿಯನ್ನು ಪೊಲೀಸರು ಬಂಧಿಸಿದ್ದು, ತನಿಖೆ ನಡೆಸುತ್ತಿದ್ದಾರೆ.

ಏತನ್ಮಧ್ಯೆ, ತಿರುನಲ್ವೇಲಿ ಜಿಲ್ಲಾ ಸಮಿತಿ ಕಚೇರಿ ಮೇಲೆ ನಡೆದ ದಾಳಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಮತ್ತು ಪ್ರೀತಿಸಿ ಮದುವೆಯಾದ ಜೋಡಿಗೆ ರಕ್ಷಣೆ ಕೊಡಬೇಕೆಂದು ತಮಿಳುನಾಡು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ನಿಟ್ಟಿನಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಬಾಲಕೃಷ್ಣನ್ ಖಂಡನಾ ಹೇಳಿಕೆ ನೀಡಿದ್ದಾರೆ.

6 ವರ್ಷಗಳ ಕಾಲ ಪ್ರೀತಿ ಮತ್ತು ಮದುವೆ

ತಿರುನಲ್ವೇಲಿ ಜಿಲ್ಲೆಯ ಪಲ್ಯಾಂಗ್ ಕೋಟ್ಟೈ, ನಂಬಿಕ್ಕೈ ನಗರಕ್ಕೆ ಸೇರಿದ ಮದನ್ ಕುಮಾರ್ (ವಯಸ್ಸು 28) ಮತ್ತು ಪಳಯಂಕೋಟ್ಟೈನ ಪೆರುಮಾಳ್ಪುರತ್ ನಿವಾಸಿ ಉದಯ ದಾಕ್ಷಾಯಿಣಿ (ವಯಸ್ಸು 23) ಕಳೆದ 6 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ವಿಭಿನ್ನ ಸಮುದಾಯದವರಾಗಿದ್ದ ಅವರುರ ಜೂನ್ 13, 2024 ರಂದು ಇಬ್ಬರೂ ವಿವಾಹವಾದರು. ಮರುದಿನ ಜೂನ್ 14ರಂದು ಅವರು ಮೇಲ್ ಪಾಳ್ಯಂ ರಿಜಿಸ್ಟ್ರಾರ್ ಕಚೇರಿಯಲ್ಲಿ ವಿವಾಹವನ್ನು ನೋಂದಾಯಿಸಲು ಸಮಯ ಗೊತ್ತುಪಡಿಸಿದ್ದರು.

25 ಜನರ ಗುಂಪು ದಾಳಿ ಮತ್ತು ಅರಾಜಕತೆ

ಅಂತರ್ಜಾತಿ ವಿವಾಹವನ್ನು ಒಪ್ಪದ ಯುವತಿಯ ಮನೆಯವರು ವಿವಾಹ ನೊಂದಣಿಗೆ ಅಡ್ಡಿಪಡಿಸಿದರು. ನವ ದಂಪತಿಗಳು ರಕ್ಷಣೆ ಕೋರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರನ್ನು ಸಂಪರ್ಕಿಸಲು ಪಕ್ಷದ ಜಿಲ್ಲಾ ಕಛೇರಿಗೆ ಬಂದರು. ಕಮ್ಯುನಿಸ್ಟ್ ಪಕ್ಷದ ಮುಖಂಡರು ಪೊಲೀಸರ ಸಹಕಾರದೊಂದಿಗೆ ವಿವಾಹ ನೋಂದಣಿಗೆ ಪ್ರಯತ್ನಿಸಿದಾಗ, ಬಂದಲ್ ರಾಜ, ಜಯಕುಮಾರ್ ಸೇರಿದಂತೆ 25 ಜನರ ತಂಡ ವಿನೋಬಾ ನಗರದ ತಿರುನಲ್ವೇಲಿಯಲ್ಲಿರುವ ಪಕ್ಷದ ಜಿಲ್ಲಾ ಸಮಿತಿ ಕಚೇರಿಗೆ ನುಗ್ಗಿ ಪೊಲೀಸರ ಎದುರೇ ಟೇಬಲ್, ಕುರ್ಚಿ, ಕಿಟಕಿ, ಬಾಗಿಲು ಇತ್ಯಾದಿ ವಸ್ತುಗಳನ್ನು ಮುರಿದು ಹಾಕಿದ್ದಾರೆ.

ಪ್ರೀತಿಸಿದ ಜೋಡಿಗಳಿಗೆ ಸೂಕ್ತ ರಕ್ಷಣೆ ನೀಡಬೇಕು

ಹಲ್ಲೆ ತಡೆಯಲು ಮುಂದಾದ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಸಂಗಾತಿಗಾಳಾದ ಪಳನಿ, ಅರುಳ್ ರಾಜ್, ಮುರುಗನ್ ಅವರ ಮೇಲೂ ಹಲ್ಲೆ ನಡೆದಿದೆ. ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಪೊಲೀಸರು ಸ್ಥಳದಲ್ಲೇ ಕೆಲವರನ್ನು ಬಂಧಿಸಿದರು. ನಂತರ ಕೆಲವರನ್ನು ಬಂಧಿಸುವ ಮೂಲಕ ಧಾಳಿಯಲ್ಲಿ ಭಾಗಿಯಾಗಿದ್ದ 13 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಪಕ್ಷದ ಕಚೇರಿ ಮೇಲೆ ದಾಳಿ ನಡೆಸಿದ ಗುಂಪನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ಘಟನೆಯಲ್ಲಿ ಭಾಗಿಯಾಗಿರುವ ತಂಡದ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಪ್ರೀತಿಸಿ ಮದುವೆಯಾದ ಜೋಡಿಗಳಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಪಕ್ಷದ ರಾಜ್ಯ ಸಮಿತಿ ತಮಿಳುನಾಡು ಸರ್ಕಾರವನ್ನು ಒತ್ತಾಯಿಸಿದೆ.

ತಿರುನಲ್ವೇಲಿ ಜಿಲ್ಲೆಯಲ್ಲಿ ಮುಂದುವರೆದ ಜಾತಿ ಹತ್ಯಾಕಾಂಡ

ತಿರುನಲ್ವೇಲಿ ಜಿಲ್ಲೆಯಲ್ಲಿ ನಡೆಯುತ್ತಿರುವ ಜಾತಿ ಹತ್ಯಾಕಾಂಡ ಅತ್ಯಂತ ಆಘಾತಕಾರಿಯಾಗಿದೆ. ಇದರ ಮುಂದುವರಿಕೆಯಾಗಿ, ಪ್ರೀತಿಯಲ್ಲಿರುವ ಜೋಡಿಗಳಿಗೆ ಭದ್ರತೆ ಒದಗಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿ ಮೇಲೆ ಗುಂಪು ದಾಳಿ ನಡೆಸಿ ಕಛೇರಿಯಲ್ಲಿದ್ದ ಸಂಗಾತಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ತಮಿಳುನಾಡು ಪೊಲೀಸರು ಘಟನೆಯನ್ನು ನಿರ್ಲಕ್ಷಿಸದೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಪ್ರೀತಿಸಿ ಮದುವೆಯಾಗುವ ಜೋಡಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಒತ್ತಾಯಿಸಿದೆ.

ಸಂಸತ್ತಿನ ಒಳಗೆ ಮತ್ತು ಹೊರಗೆ ಹಿಂದುತ್ವ ನಿರಂಕುಶಾಧಿಕಾರದ ವಿರುದ್ಧ ಹೋರಾಟ–ಸಿಪಿಐ(ಎಂ) ಕರೆ

ಭಾರತದ ಜನತೆ ತಮ್ಮ ಸಂವಿಧಾನದ ರಕ್ಷಣೆ ಮತ್ತು ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯವನ್ನು ಪ್ರತಿಪಾದಿಸುತ್ತಾ, ಹಿಂದಿನ 2014 ಮತ್ತು 2019ರ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ್ದ ಬಹುಮತ ಸಿಗದಂತೆ ಮಾಡಿದ್ದಾರೆ. ಈ ಚುನಾವಣೆಗಳು ವಿರೋಧ ಪಕ್ಷಗಳ ಮೇಲೆ ವ್ಯಾಪಕ ದಾಳಿಗಳು, ಕೇಂದ್ರೀಯ ಸಂಸ್ಥೆಗಳ ದುರುಪಯೋಗ ಮತ್ತು ಹಣಬಲದ ಬೃಹತ್ ಬಳಕೆಯ ನಡುವೆ ನಡೆದವು ಮತ್ತು ಚುನಾವಣಾ ಆಯೋಗ ಸಮಾನ ಅವಕಾಶವಿರುವಂತೆ ಮಾಡಿದ್ದರೆ ಬಿಜೆಪಿ ಮತ್ತು ಎನ್‌ಡಿಎಗೆ ಫಲಿತಾಂಶ ಇನ್ನಷ್ಟು ಪ್ರತಿಕೂಲವಾಗುತ್ತಿತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಬಿಜೆಪಿಗೆ ಸಂಪೂರ್ಣ ಬಹುಮತ ಸಿಗದಿದ್ದರೂ, ಮೋದಿಯವರ ಪ್ರಾಬಲ್ಯವನ್ನು ಮರುಸ್ಥಾಪಿಸುವ ಪ್ರಯತ್ನಗಳು ಬಲಗೊಳ್ಳುತ್ತಲೇ ಇರುತ್ತವೆ, ಇಂಡಿಯಾ ಮೈತ್ರಿಕೂಟದ ಪಕ್ಷಗಳು ಜಾಗರೂಕರಾಗಿರಬೇಕು. ಫ್ಯಾಸಿಸ್ಟ್ ಮಾದರಿ ವಿಧಾನಗಳನ್ನು ಬಳಸಿಕೊಳ್ಳುವ ಹಿಂದುತ್ವದ ನಿರಂಕುಶಾಧಿಕಾರದ ವಿರುದ್ಧ ಹೋರಾಟವನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಪಡಿಸಬೇಕಾಗಿದೆ. ಇದನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ಮಾಡಬೇಕು ಎಂದು ಅದು ಹೇಳಿದೆ.

ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಇರಿಸುವ ನಮ್ಮ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ತಂದ ನೀಟ್ ಪರೀಕ್ಷೆಯ ನಿರ್ವಹಣೆಯಲ್ಲಿ ಬಯಲಿಗೆ ಬಂದ ವಿವಿಧ ಅಕ್ರಮಗಳು ಮತ್ತು ದೂರುಗಳು, ಈ ಪರೀಕ್ಷೆಗಳನ್ನು ನಡೆಸುವಲ್ಲಿ ಎನ್‌ಟಿಎ ಯ ಗಂಭೀರ ಕೊರತೆಗಳನ್ನು ತೋರಿಸಿಕೊಟ್ಟಿದೆ. ಇದನ್ನು ಕುರಿತಂತೆ ಸೂಕ್ತ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ಜೂನ್ 9 ರಂದು ಸಭೆ ಸೇರಿದ ಪೊಲಿಟ್‌ಬ್ಯುರೊ ಸಭೆಯ ನಂತರ ನೀಡಿರುವ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

18ನೇ ಲೋಕಸಭೆಗೆ ಚುನಾವಣೆ

18ನೇ ಲೋಕಸಭೆಗೆ ನಡೆದ ಚುನಾವಣೆಯ ಫಲಿತಾಂಶ ಬಿಜೆಪಿಗೆ ಒಂದು ಗಮನಾರ್ಹ ಹಿನ್ನಡೆಯಾಗಿದೆ. ಭಾರತದ ಜನತೆ ತಮ್ಮ ಸಂವಿಧಾನದ ರಕ್ಷಣೆ ಮತ್ತು ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯವನ್ನು ಪ್ರತಿಪಾದಿಸುತ್ತಾ, ಹಿಂದಿನ 2014 ಮತ್ತು 2019 ರ ಎರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿದ್ದ ಬಹುಮತ ಸಿಗದಂತೆ ಮಾಡಿದ್ದಾರೆ. 400 ಕ್ಕಿಂತಲೂ ಹೆಚ್ಚಿನ ಅಂಕೆಯನ್ನು ತಲುಪುತ್ತೇವೆ ಎಂದು ಪ್ರಚಾರ ಮಾಡಿದ್ದ ಬಿಜೆಪಿಯ ಸಂಖ್ಯೆ ಈಗ 240 ಸ್ಥಾನಗಳಾಗಿದ್ದು, 17ನೇ ಲೋಕಸಭೆಯಲ್ಲಿ ಅದು ಹೊಂದಿದ್ದ 303 ಸ್ಥಾನಗಳಿಗಿಂತ 63 ಕಡಿಮೆಯಾಗಿದೆ. ಇದು ಶೇ.20 ಕ್ಕಿಂತಲೂ ಹೆಚ್ಚಿನ ಕಡಿತವಾಗಿದೆ. ಬಿಜೆಪಿಗೆ ಈಗ ಸ್ವಂತ ಬಹುಮತಕ್ಕೆ 32 ಸ್ಥಾನಗಳ ಕೊರತೆಯಿದೆ. ಆದಾಗ್ಯೂ, ಅದರ ಮಿತ್ರಪಕ್ಷಗಳು ಇನ್ನೂ 52 ಸ್ಥಾನಗಳನ್ನು ಗೆಲ್ಲುವುದರೊಂದಿಗೆ, ಎನ್‌ಡಿಎ 292 ಸ್ಥಾನಗಳನ್ನು ಹೊಂದಿದೆ, ಇದು ಅಗತ್ಯವಿರುವ ಬಹುಮತಕ್ಕಿಂತ 20 ಹೆಚ್ಚು.

ಇಂಡಿಯಾ ಮೈತ್ರಿಕೂಟದ ಪಕ್ಷಗಳು ಒಟ್ಟಾಗಿ 234 ಸ್ಥಾನಗಳನ್ನು ಗೆದ್ದಿವೆ, ಬಹುಮತಕ್ಕೆ 38 ಸ್ಥಾನಗಳ ಕೊರತೆಯಿದೆ. ಎನ್‌ಡಿಎಯ ಎಲ್ಲಾ ಕ್ಷೇತ್ರಗಳು ಒಟ್ಟಾಗಿ 43.31 ಶೇಕಡಾ ಮತಗಳನ್ನು ಪಡೆದಿವೆ ಎಂದು ಚುನಾವಣಾ ಆಯೋಗದ ಮಾಹಿತಿ ತೋರಿಸುತ್ತದೆ. ಇಂಡಿಯಾ ಮೈತ್ರಿಕೂಟದ ಘಟಕಗಳು ಶೇಕಡಾ 41.69 ರಷ್ಟು ಪಡೆದಿವೆ. ಎರಡು ಸಂಯೋಜನೆಗಳ ನಡುವಿನ ಮತ ಹಂಚಿಕೆಯ ವ್ಯತ್ಯಾಸ ಶೇ.2 ಕ್ಕಿಂತ ಕಡಿಮೆಯಿದೆ.

ಈ ಚುನಾವಣೆಗಳು ವಿರೋಧ ಪಕ್ಷಗಳ ಮೇಲೆ ವ್ಯಾಪಕ ದಾಳಿಗಳು, ಕೇಂದ್ರೀಯ ಸಂಸ್ಥೆಗಳ ದುರುಪಯೋಗ ಮತ್ತು ಹಣಬಲದ ಬೃಹತ್ ಬಳಕೆಯ ನಡುವೆ ನಡೆದವು. ಚುನಾವಣೆಗಳು ಆರಂಭವಾಗುವ ಮೊದಲು ಇಬ್ಬರು ಮುಖ್ಯಮಂತ್ರಿಗಳನ್ನು ಜೈಲಿಗೆ ಹಾಕಲಾಯಿತು ಮತ್ತು ಕಾಂಗ್ರೆಸ್ ಮತ್ತು ಸಿಪಿಐ(ಎಂ) (ಕೇರಳದ ಒಂದು ಜಿಲ್ಲೆಯಲ್ಲಿ) ನಂತಹ ರಾಜಕೀಯ ಪಕ್ಷಗಳ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಯಿತು. ಎನ್‌ಸಿಪಿ ಮತ್ತು ಶಿವಸೇನೆಯಂತಹ ವಿರೋಧ ಪಕ್ಷಗಳನ್ನು ಹಣಬಲದ ಬಳಕೆ ಮತ್ತು ಕೇಂದ್ರ ಏಜೆನ್ಸಿಗಳ ಬೆದರಿಕೆಗಳಿಗೆ ಗುರಿಯಾಗಿಸಿ ವಿಭಜನೆಗೊಳಿಸಲಾಯಿತು. ಪ್ರತಿಪಕ್ಷಗಳನ್ನು ವಿಭಜಿಸಲು ಬಿಜೆಪಿ ಎಲ್ಲಾ ರೀತಿಯ ರಾಜಕೀಯ ತಂತ್ರಗಳನ್ನು ಆಶ್ರಯಿಸಿದೆ ಮತ್ತು ಜೆಡಿ(ಯು) ಅನ್ನು ಮತ್ತೆ ಎನ್‌ಡಿಎ ತೆಕ್ಕೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಚುನಾವಣಾ ಆಯೋಗ ಸಮಾನ ಅವಕಾಶವಿರುವಂತೆ ಮಾಡಿದ್ದರೆ ಬಿಜೆಪಿ ಮತ್ತು ಎನ್‌ಡಿಎಗೆ ಫಲಿತಾಂಶ ಇನ್ನಷ್ಟು ಪ್ರತಿಕೂಲವಾಗುತ್ತಿತ್ತು. ಬಿಜೆಪಿಯ ಕಾರ್ಯಸೂಚಿಯನ್ನು ಮುಂದೊತ್ತುವಲ್ಲಿ ಚುನಾವಣಾ ಆಯೋಗವೂ ಶಾಮೀಲಾಯಿತು. ಮೋದಿ ಮತ್ತು ಹಲವು ಬಿಜೆಪಿ ನಾಯಕರ ಪ್ರಚೋದನಕಾರಿ ಕೋಮುವಾದಿ ಅಬ್ಬರಗಳನ್ನು ನಿಗ್ರಹಿಸುವಲ್ಲಿ ಅದರ ಹೀನಾಯ ವಿಫಲತೆ, ಮಾದರಿ ನೀತಿ ಸಂಹಿತೆಯನ್ನು ನಿರುಪಯುಕ್ತಗೊಳಿಸಿದೆ. ಮತದಾನದ ದತ್ತಾಂಶವನ್ನು ಬಹಿರಂಗಪಡಿಸಲು ಅದರ ಆರಂಭಿಕ ಹಿಂಜರಿಕೆಯು ಕೈಚಳಕ ನಡೆಸಲಾಗಿದೆ ಎಂಬ ಅನುಮಾನಗಳನ್ನು ಹುಟ್ಟುಹಾಕಿತು. ಇದು ಈ ಸಾಂವಿಧಾನಿಕ ಸಂಸ್ಥೆಯ ಪ್ರತಿಷ್ಠೆಯನ್ನು ತೀವ್ರವಾಗಿ ದುರ್ಬಲಗೊಳಿಸಿದೆ.

ತನ್ನ ದೃಷ್ಟಿಕೋನವನ್ನು ಮಾತ್ರ ಪ್ರಚಾರ ಮಾಡುವಂತೆ ದೊಡ್ಡ ವಿಭಾಗಗಳ ಮೇಲೆ ಬಿಜೆಪಿ ಸಂಪೂರ್ಣ ಹಿಡಿತ ಸಾಧಿಸಿದೆ. ಇದು ಅತ್ಯಂತ ಉತ್ಪ್ರೇಕ್ಷಿತ ಎಕ್ಸಿಟ್ ಪೋಲ್‌ಗಳಲ್ಲಿ ಪ್ರತಿಫಲಿಸಿದೆ. ಶಾಮೀಲಾಗಿರುವ ಕಾರ್ಪೊರೇಟ್ ಮಾಧ್ಯಮದೊಂದಿಗೆ, ಬಿಜೆಪಿ ತನ್ನ ಕಥನ ಮತ್ತು ತಪ್ಪು ಮಾಹಿತಿಯನ್ನು ಸಾಮಾಜಿಕ ಮಾಧ್ಯಮದ ಮೂಲಕ ಹರಡಲು ಅಪಾರ ಪ್ರಮಾಣದ ಸಂಪನ್ಮೂಲಗಳನ್ನು ಖರ್ಚು ಮಾಡಿತು. ಅದು ತನ್ನ ಬೃಹತ್ ಹಣಬಲವನ್ನು ಬಳಸಿಕೊಂಡು ಮತದಾನದ ಸ್ವರೂಪಗಳ ಮೇಲೆ ಪ್ರಭಾವ ಬೀರಿತು ಮತ್ತು ಅನೇಕ ಸ್ಥಳಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಮತದಾರರಿಗೆ ಹಂಚಿತು.

ಇಂಡಿಯಾ ಮೈತ್ರಿಕೂಟದ ಪಕ್ಷಗಳು ನಮ್ಮ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ನಾಗರಿಕ ಸ್ವಾತಂತ್ರ್ಯಗಳಿಗೆ ಬೆದರಿಕೆಗಳನ್ನು ಎತ್ತಿ ತೋರಿಸುವುದಲ್ಲದೆ ನಿರುದ್ಯೋಗ, ಬೆಲೆ ಏರಿಕೆ, ಕೃಷಿ ಸಂಕಷ್ಟ ಇತ್ಯಾದಿಗಳಂತಹ ಜನರ ಜೀವನೋಪಾಯದ ಪ್ರಶ್ನೆಗಳ ಮೇಲೆ ಗಮನ ಸೆಳೆದವು. ನಮ್ಮ ಎಲ್ಲಾ ವರ್ಗಗಳ ಜನರು ತಮ್ಮ ಜೀವನೋಪಾಯದ ಸಮಸ್ಯೆಗಳ ಮೇಲೆ ನಡೆಸಿದ ಬೃಹತ್ ಹೋರಾಟಗಳು, ವಿಶೇಷವಾಗಿ ರೈತ ಹೋರಾಟಗಳು ಫಲಿತಾಂಶಗಳಿಗೆ ಗಣನೀಯ ಕೊಡುಗೆ ನೀಡಿವೆ. ಮಹಾರಾಷ್ಟ್ರ, ಪಂಜಾಬ್, ರಾಜಸ್ಥಾನ, ಹರಿಯಾಣ ಮತ್ತು ಉತ್ತರಪ್ರದೇಶ ಈ ಐದು ರಾಜ್ಯಗಳ ಕೃಷಿ ವಲಯಗಳಲ್ಲಿ ಬಿಜೆಪಿ ತನ್ನ ಹಾಲಿ 38 ಸ್ಥಾನಗಳನ್ನು ಕಳೆದುಕೊಂಡಿದೆ. ಗ್ರಾಮೀಣ ಭಾರತವು ಮೋದಿ ದಶಕದುದ್ದಕ್ಕೂ ಗ್ರಾಮೀಣ ನೈಜ ವೇತನಗಳು ಸ್ಥಗಿತಗೊಂಡಿರುವುದರಲ್ಲಿ ಕಂಡು ಬಂದಂತೆ ಮೋದಿ ಸರ್ಕಾರ ತಮ್ಮ ಜೀವನೋಪಾಯವನ್ನು ನಾಶಪಡಿಸುವುದರ ವಿರುದ್ಧ ಪ್ರತಿಕ್ರಿಯಿಸಿತು,. 159 ಗ್ರಾಮೀಣ ಕ್ಷೇತ್ರಗಳಲ್ಲಿ ಜನರು ಬದಲಾವಣೆಗಾಗಿ ಮತ ಚಲಾಯಿಸಿದ್ದಾರೆ ಎಂದು ಅಂದಾಜಿಸಲಾಗಿದೆ.

ಸ್ವಂತ ಬಲದಿಂದ ಬಿಜೆಪಿಗೆ ಸಂಪೂರ್ಣ ಬಹುಮತ ಸಿಗದಿದ್ದರೂ, ಮೋದಿಯವರ ಪ್ರಾಬಲ್ಯವನ್ನು ಮರುಸ್ಥಾಪಿಸುವ ಪ್ರಯತ್ನಗಳು ಬಲಗೊಳ್ಳುತ್ತಲೇ ಇರುತ್ತವೆ. ಹಿಂದುತ್ವದ ಸರ್ವಾಧಿಕಾರಿ ಧೋರಣೆಗಳು ಮತ್ತು ಹಿಂದುತ್ವ–ಕಾರ್ಪೊರೇಟ್ ನಂಟು ಬಲಪಡಿಸಲು ಮತ್ತು ಜಾತ್ಯತೀತ ಪ್ರಜಾಪ್ರಭುತ್ವ, ಜನರ ಜೀವನೋಪಾಯ, ಆರ್ಥಿಕ ಸಾರ್ವಭೌಮತ್ವ, ಸಾಮಾಜಿಕ ನ್ಯಾಯ ಮತ್ತು ಒಕ್ಕೂಟತತ್ವವನ್ನು ರಕ್ಷಿಸುವ ಎಲ್ಲಾ ಪ್ರಯತ್ನಗಳನ್ನು ದೃಢವಾಗಿ ವಿರೋಧಿಸಲು ಮತ್ತು ಸೋಲಿಸಲು ಇಂಡಿಯಾ ಮೈತ್ರಿಕೂಟದ ಪಕ್ಷಗಳು ಜಾಗರೂಕರಾಗಿರಬೇಕು. ಫ್ಯಾಸಿಸ್ಟ್ ಮಾದರಿ ವಿಧಾನಗಳನ್ನು ಬಳಸಿಕೊಳ್ಳುವ ಹಿಂದುತ್ವದ ನಿರಂಕುಶಾಧಿಕಾರದ ವಿರುದ್ಧ ಹೋರಾಟವನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಪಡಿಸಬೇಕಾಗಿದೆ. ಇದನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ಮಾಡಬೇಕು.

ಎಡ ಶಕ್ತಿಗಳ ಬಲ

ಎಡಪಕ್ಷಗಳು 8 ಸಂಸದರೊಂದಿಗೆ ಲೋಕಸಭೆಯಲ್ಲಿ ತಮ್ಮ ಅಸ್ತಿತ್ವವನ್ನು ಸ್ವಲ್ಪಮಟ್ಟಿಗೆ ಸುಧಾರಿಸಿಕೊಂಡಿವೆ [ಸಿಪಿಐ(ಎಂ) 4, ಸಿಪಿಐ 2, ಸಿಪಿಐ (ಎಂಎಲ್) 2].

ವಿಶೇಷವಾಗಿ ಕೇರಳದಲ್ಲಿ ಸಿಪಿಐ(ಎಂ) ಫಲಿತಾಂಶದ ಬಗ್ಗೆ ಪೊಲಿಟ್ ಬ್ಯೂರೋ ನಿರಾಶೆ ವ್ಯಕ್ತಪಡಿಸಿದೆ. ಪಕ್ಷದ ಘಟಕಗಳು ಆಯಾ ರಾಜ್ಯ ನಡೆಸಿದ ವಿಮರ್ಶೆಗಳ ಆಧಾರದ ಮೇಲೆ ಪಕ್ಷವು ಆಳವಾದ ಆತ್ಮಾವಲೋಕನವನ್ನು ಕೈಗೊಳ್ಳುತ್ತದೆ.

ನೀಟ್(ಎನ್‌ಇಇಟಿ) ಪರೀಕ್ಷೆ

ನೀಟ್ ಪರೀಕ್ಷೆಯ ನಿರ್ವಹಣೆಯಲ್ಲಿ ವಿವಿಧ ಅಕ್ರಮಗಳು ಮತ್ತು ದೂರುಗಳು ಹೊರಬಿದ್ದಿವೆ. ಈ ಪರೀಕ್ಷೆಗಳನ್ನು ನಡೆಸುವಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ–ಎನ್‌ಟಿಎ)ಯ ಗಂಭೀರ ಕೊರತೆಗಳನ್ನು ಇದು ತೋರಿಸಿಕೊಟ್ಟಿದೆ. ಶಿಕ್ಷಣದ ಇಂತಹ ಕೇಂದ್ರೀಕರಣವು ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಇರಿಸುವ ನಮ್ಮ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ರಾಜ್ಯ ಸರ್ಕಾರಗಳನ್ನು ಸಂಪೂರ್ಣವಾಗಿ ಬದಿಗೊತ್ತುವುದನ್ನು ಒಪ್ಪಲು ಸಾಧ್ಯವಿಲ್ಲ.

ಇತ್ತೀಚಿನ ನೀಟ್ ಪರೀಕ್ಷೆಗೆ ಸಂಬಂಧಿಸಿದ ವಿಷಯಗಳಲ್ಲಿ ಸೂಕ್ತ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ಬಿಜೆಪಿಗೆ ಹಿನ್ನಡೆಯುಂಟು ಮಾಡಿರುವ ಜನರ ತೀರ್ಪು

ಲೋಕಸಭಾ ಚುನಾವಣಾ ಫಲಿತಾಂಶಗಳ ಬಗ್ಗೆ ಸಿಪಿಐ(ಎಂ) ಅಭಿನಂದನೆ

18ನೇ ಲೋಕಸಭಾ ಚುನಾವಣೆ ಫಲಿತಾಂಶ ಬಿಜೆಪಿಗೆ ಒಂದು ಹಿನ್ನಡೆಯಾಗಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ 2014 ಮತ್ತು 2019ರಲ್ಲಿ ಲೋಕಸಭೆಯಲ್ಲಿ ಪಡೆದಿದ್ದ ಬಹುಮತವನ್ನು ಅದು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ 400 ಸೀಟುಗಳನ್ನು ಗೆಲ್ಲುವುದಾಗಿ ಬೀಗುತ್ತಿದ್ದ ನರೇಂದ್ರ ಮೋದಿಯ ಸುತ್ತ ಕಟ್ಟಿಕೊಂಡಿದ್ದ ಅಜೇಯತೆಯ ಚಿತ್ರಣವನ್ನು ಕುಟುಕಿರುವ ಹೊಡೆತ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಚುನಾವಣೆಗಳು ವಿರೋಧ ಪಕ್ಷಗಳ ಮೇಲೆ ಸತತ ದಾಳಿಗಳು, ಕೇಂದ್ರೀಯ ಸಂಸ್ಥೆಗಳ ದುರುಪಯೋಗ ಮತ್ತು ಹಣಬಲದ ಭಾರೀ ಬಳಕೆಯ ಹಿನ್ನೆಲೆಯಲ್ಲಿ ನಡೆದಿವೆ. ಈ ನಿರಂಕುಶ ದಾಳಿಗಳನ್ನು ಎದುರಿಸಿ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ಜನರು ಕಾಪಾಡಿದ್ದಾರೆ ಎನ್ನುತ್ತ ಪೊಲಿಟ್ ಬ್ಯೂರೋ ಜನರನ್ನು ಅಭಿನಂದಿಸಿದೆ.

ಇಂಡಿಯ ಮೈತ್ರಿಕೂಟ ನಿರುದ್ಯೋಗ, ಬೆಲೆ ಏರಿಕೆ, ಕೃಷಿ ಸಂಕಟ ಮತ್ತು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲಿನ ದಾಳಿಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಉತ್ತಮ ಪ್ರದರ್ಶನ ನೀಡಿದೆ. ಮೋದಿ ಮತ್ತು ಬಿಜೆಪಿ ನಡೆಸಿದ ಕೋಮುವಾದಿ ಚುನಾವಣಾ ಪ್ರಚಾರವನ್ನು ಸಾಕಷ್ಟು ಪ್ರಮಾಣದಲ್ಲಿ ಎದುರಿಸಲು ಅದು ಸಮರ್ಥವಾಗಿದೆ.

ಚುನಾವಣಾ ಆಯೋಗವು ಸಮಾನ ಅವಕಾಶವನ್ನು ಖಾತ್ರಿಪಡಿಸಿದ್ದರೆ ಫಲಿತಾಂಶಗಳು ಬಿಜೆಪಿ ಮತ್ತು ಎನ್‌ಡಿಎಗೆ ಇನ್ನೂ ಹೆಚ್ಚು ಪ್ರತಿಕೂಲಕರವಾಗುತ್ತಿದ್ದವು. ನರೇಂದ್ರಮೋದಿಯವರ ಪ್ರಚೋದನಕಾರಿ ಕೋಮುವಾದಿ ಭಾಷಣಗಳನ್ನು ನಿಗ್ರಹಿಸುವಲ್ಲಿ ಮತ್ತು ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸುವಲ್ಲಿ ಅದರ ಹೀನಾಯ ವಿಫಲತೆ ಆಯೋಗದ ಖ್ಯಾತಿಗೆ ಕಳಂಕವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಮತ್ತು ಎಡಪಕ್ಷಗಳು ತಮ್ಮ ಒಟ್ಟು ಸಂಖ್ಯೆಯಲ್ಲಿ ಅಲ್ಪ ಸುಧಾರಣೆ ದಾಖಲಿಸಿವೆ. ಸಂಪೂರ್ಣ ಚುನಾವಣಾ ಫಲಿತಾಂಶಗಳು ಲಭ್ಯವಾದ ನಂತರ ಈ ಬಗ್ಗೆ ಹೆಚ್ಚು ವಿವರವಾದ ವಿಶ್ಲೇಷಣೆಯನ್ನು ಕೈಗೊಳ್ಳಲಾಗುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಜನರು ಪ್ರಜಾಪ್ರಭುತ್ವ, ಸಂವಿಧಾನ ಮತ್ತು ತಮ್ಮ ಜೀವನೋಪಾಯದ ಮೇಲಿನ ಎಲ್ಲಾ ದಾಳಿಗಳನ್ನು ಎದುರಿಸಿ ಹೋರಾಡಲಿದ್ದಾರೆ ಎಂಬುದರ ಸಂಕೇತ ಈ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಚುನಾವಣೆ ಮುಗಿಯುತ್ತಿದ್ದಂತೆ ಜನರ ಮೇಲೆ ಹೊರೆಗಳು

ಮದರ್ ಡೈರಿ ಮತ್ತು ಅಮುಲ್ ಹಾಲಿನ ಎಲ್ಲಾ ರೂಪಾಂತರಗಳ ಬೆಲೆಗಳನ್ನು ಪ್ರತಿ ಲೀಟರ್‌ಗೆ 2 ರೂ.ನಷ್ಟು ಹೆಚ್ಚಿಸಿದೆ

ಜನರ ಮೇಲೆ ಮತ್ತಷ್ಟು ಹೊರೆ ಹೊರಿಸಲು ಸರ್ಕಾರ ಚುನಾವಣೆ ಮುಗಿಯುವವರೆಗೂ ಕಾಯುತ್ತಿತ್ತು ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇದಕ್ಕೆ ಮೊದಲು ಮತದಾನ ಮುಗಿದ ತಕ್ಷಣ, ರಸ್ತೆ ಟೋಲ್ ಶುಲ್ಕವನ್ನು ಶೇ.5 ರಷ್ಟು ಹೆಚ್ಚಿಸಲಾಯಿತು. ಇದು ಜನರ ಪ್ರಯಾಣದ ವೆಚ್ಚವನ್ನು ಹೆಚ್ಚಿಸುವುದಲ್ಲದೆ ಎಲ್ಲಾ ಸರಕುಗಳ ಬೆಲೆಗಳನ್ನು, ವಿಶೇಷವಾಗಿ ರಸ್ತೆ ಮೂಲಕ ಸಾಗಿಸುವ ಆಹಾರ ಪದಾರ್ಥಗಳ ಬೆಲೆಗಳನ್ನು ಹೆಚ್ಚಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಪ್ರಸ್ತುತ ಭಾರತದಲ್ಲಿ ನಾವು ಹೊಂದಿರುವ ತೀವ್ರವಾದ ನಿರುದ್ಯೋಗವು ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಇದರ ಉಪಶಮನಕ್ಕೆ ತಕ್ಷಣದ ಕ್ರಮವಾಗಿ ಸರ್ಕಾರದ ವೆಚ್ಚದಲ್ಲಿ ಏರಿಕೆ ಮತ್ತು ಅದರಿಂದಾಗಿ ಇತರ ಕ್ರಮಗಳೊಂದಿಗೆ ಒಟ್ಟು ಬೇಡಿಕೆಯ ಏರಿಕೆಯ ಅಗತ್ಯವಿದೆ. ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಲ್ಲಿ ಪ್ರಭುತ್ವದ ಖರ್ಚು ಮಾಡುವ ಸಾಮರ್ಥ್ಯದ ಮೇಲೆ ವಾಸ್ತವಿಕ ಮಿತಿಗಳೇನೂ ಇಲ್ಲ ಎಂಬುದು ಅರ್ಥಶಾಸ್ತ್ರದಲ್ಲಿ ಈಗಾಗಲೇ ದಾಖಲಾಗಿದೆ. ಸರಕಾರ ಉದ್ಯೋಗವನ್ನು ಹೆಚ್ಚಿಸಲು ಬಯಸಿದರೆ ತನ್ನ ವೆಚ್ಚವನ್ನು ವಿಸ್ತರಿಸುವ ಧೈರ್ಯವನ್ನು ಹೊಂದಿರಬೇಕು ಮತ್ತು ದೇಶೀಯ ಮತ್ತು ವಿದೇಶಿ ಬಂಡವಾಳಶಾಹಿಗಳು ಅದಕ್ಕೆ ಒಡ್ಡುವ ಅಡ್ಡಿ–ಆತಂಕಗಳನ್ನು ಎದುರಿಸಲು ಸಿದ್ಧವಾಗಿರಬೇಕು, ಅಂತರರಾಷ್ಟ್ರೀಯ ಮತ್ತು ದೇಶೀಯ ದೊಡ್ಡ ಬಂಡವಾಳದ ಚಪಲಗಳಿಗೆ ಗುಲಾಮರಾಗುವುದನ್ನು ಕೊಡವಿಕೊಳ್ಳಬೇಕು. ಅದು ಪುನಃ ತನ್ನನ್ನು ಸ್ವಾಧೀನಪಡಿಸಿಕೊಳ್ಳಬೇಕು ಮತ್ತು ಜನರ ಸೇವೆ ಮಾಡುವ ತನ್ನ ಸಂಕಲ್ಪವನ್ನು ಮತ್ತೆ ಪಡೆದು ಕಾರ್ಯಗತಗೊಳಿಸಬೇಕು.

–ಪ್ರೊ.ಪ್ರಭಾತ್ ಪಟ್ನಾಯಕ್



ನಿರುದ್ಯೋಗ ನಿವಾರಣೆಗೆ ಏನು ಮಾಡಬೇಕು?

ಬೇಡಿಕೆ–ನಿರ್ಬಂಧಿತ ವ್ಯವಸ್ಥೆಗಳು ಮತ್ತು ಸಂಪನ್ಮೂಲ–ನಿರ್ಬಂಧಿತವ್ಯವಸ್ಥೆಗಳನಡುವೆ ಅರ್ಥಶಾಸ್ತ್ರದಲ್ಲಿ ವ್ಯತ್ಯಾಸವನ್ನು ಮಾಡಲಾಗುತ್ತದೆ. ಸರಳವಾಗಿರಲಿ ಎಂದು ಸಂಪನ್ಮೂಲ–ನಿರ್ಬಂಧಿತ ವ್ಯವಸ್ಥೆಗಳನ್ನು ನಾವು ಪೂರೈಕೆ–ನಿರ್ಬಂಧಿತ ವ್ಯವಸ್ಥೆಗಳು ಎಂದು ಕರೆಯೋಣ. ಮೊದಲನೆಯದರಲ್ಲಿ, ಒಟ್ಟಾರೆ ಬೇಡಿಕೆಯಲ್ಲಿನ ಏರಿಕೆಯು, ಯಾವುದೇ ಕೊರತೆಯಿಂದಾದ ಹಣದುಬ್ಬರವನ್ನು ಉಂಟುಮಾಡುತ್ತದೆ ಎಂದು ಕಂಡುಬಂದರೆ ಉತ್ಪಾದನೆಯಲ್ಲಿ ಹೆಚ್ಚಳ ಸಂಭವಿಸಬಹುದು. ಎರಡನೆಯದರಲ್ಲಿ, ಉತ್ಪಾದನಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸುವುದರಿಂದ ಅಥವಾ ಕೆಲವು ನಿರ್ಣಾಯಕ ಲಾಗುವಾಡುಗಳ ಅಥವಾ ಆಹಾರಧಾನ್ಯಗಳ ಅಥವಾ ಕಾರ್ಮಿಕ ಬಲದ ಕೊರತೆಯಿಂದ ಪೂರೈಕೆಗೆ ನಿರ್ಬಂಧ ಉಂಟಾಗಬಹುದು, ಇದರಿಂದಾಗಿ ಒಟ್ಟು ಬೇಡಿಕೆಯ ಹೆಚ್ಚಳವು ಉತ್ಪಾದನೆಯನ್ನು ಹೆಚ್ಚಿಸುವ ಬದಲು ಕೊರತೆ–ಪ್ರೇರಿತ ಹಣದುಬ್ಬರವನ್ನು ಉಂಟುಮಾಡುತ್ತದೆ. ಬಂಡವಾಳಶಾಹಿ ಸಾಮಾನ್ಯವಾಗಿ, ಅಂದರೆ ಯುದ್ಧದ ಸಮಯಗಳನ್ನು ಹೊರತುಪಡಿಸಿ, ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಾಗಿದೆ. ಆದರೆ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಅಸ್ತಿತ್ವದಲ್ಲಿದ್ದ ಸಮಾಜವಾದವು ಪೂರೈಕೆ–ನಿರ್ಬಂಧಿತವಾಗಿತ್ತು. ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಲ್ಲಿ, ಒಟ್ಟಾರೆ ಬೇಡಿಕೆಯಲ್ಲಿ ಹೆಚ್ಚಳವಾದರೆ ಉದ್ಯೋಗವೂ ಹೆಚ್ಚಾಗುತ್ತದೆ.

ಪ್ರಸ್ತುತ ಭಾರತದಲ್ಲಿ ಈ ವ್ಯತ್ಯಾಸವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗಿದೆ. ಏಕೆಂದರೆ, ಇಲ್ಲೀಗ ನಿರುದ್ಯೋಗವು ಗಂಭೀರವಾದ ಸಾಮಾಜಿಕ ಸಮಸ್ಯೆಯಾಗಿದ್ದು, ಅದರ ತೀವ್ರತೆಯಿಂದಾಗಿ ಅದರ ನಿವಾರಣೆಗೆ ಸಂಪೂರ್ಣ ಆದ್ಯತೆಯ ಅಗತ್ಯವಾಗಿದೆ. ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿಯ ಹಿನ್ನಡೆಯ ಹಿಂದೆ ಇದು ಒಂದು ಪ್ರಮುಖ ಅಂಶವಾಗಿತ್ತು.

ಸ್ಥಿರ ಬಂಡವಾಳದ ದಾಸ್ತಾನಿನ ಕೊರತೆಯು ಯಾವುದೇ ಪಾತ್ರವನ್ನು ವಹಿಸದ, ಸರ್ಕಾರಿ ಸೇವೆಗಳು ಸೇರಿದಂತೆ ಸೇವಾ ವಲಯದಲ್ಲಿ ಸಾಕಷ್ಟು ಉದ್ದೇಶಪೂರ್ವಕ ಉದ್ಯೋಗ ಕಡಿತವಾಗಿರುವುದರಿಂದ, ಪ್ರಸ್ತುತ ನಿರುದ್ಯೋಗದ ಮಟ್ಟಕ್ಕೆ ಯಾವುದೇ ಸಾಮರ್ಥ್ಯದ ನಿರ್ಬಂಧ ಕಾರಣ ಎಂದು ಹೇಳುವಂತಿಲ್ಲ. ಅದೇ ರೀತಿಯಲ್ಲಿ ಪ್ರಸ್ತುತ ನಿರುದ್ಯೋಗದ ಮಟ್ಟವು ಯಾವುದೇ ನಿರ್ಣಾಯಕ ಲಾಗುವಾಡಿನ ಕೊರತೆಯಿಂದ ಆದದ್ದಲ್ಲ. ಆಹಾರಧಾನ್ಯಗಳ ಕೊರತೆ ಕೂಡ ಆಗಿಲ್ಲ. ಏಕೆಂದರೆ, ಬಡವರಿಗೆ ವರ್ಗಾವಣೆಯನ್ನು "ಉಚಿತ ಉಡುಗೊರೆ" ಎಂದು ತಳ್ಳಿಹಾಕುವ ಮೋದಿ ಸರ್ಕಾರವು ಸಹ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ತಿಂಗಳಿಗೆ ಪ್ರತಿ ವ್ಯಕ್ತಿಗೆ 5 ಕೆಜಿ ಆಹಾರಧಾನ್ಯಗಳನ್ನು ನೀಡುವ ಮೂಲಕ ಕೆಲವು ಚುನಾವಣಾ ಉದ್ದೇಶಗಳಿಗಾಗಿ ಅಸ್ತಿತ್ವದಲ್ಲಿರುವ ದಾಸ್ತಾನುಗಳನ್ನು ಬಳಸುತ್ತಿದೆ. ನಿಜ, ಈ ಕ್ಷಣದಲ್ಲಿ ಖಾಲಿಯಾದ ದಾಸ್ತಾನುಗಳನ್ನು ಮರುಪೂರಣಗೊಳಿಸಲು ಭಾರತವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯನ್ನು ಖರೀದಿಸಲು ಹೊರಟಿದೆ. ಆದರೆ ಇದು ತಪ್ಪು ನಿರ್ವಹಣೆಯಿಂದಲೇ ಹೊರತು ದೇಶದಲ್ಲಿ ಧಾನ್ಯದ ಯಾವುದೇ ಮೂಲಭೂತ ಕಾರಣದಿಂದಾದ ಕೊರತೆಯಿಂದಲ್ಲ.

ಆದ್ದರಿಂದ ಪ್ರಸ್ತುತ ಭಾರತದಲ್ಲಿ ನಾವು ಹೊಂದಿರುವ ತೀವ್ರವಾದ ನಿರುದ್ಯೋಗವು ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. ಇದರ ಉಪಶಮನಕ್ಕೆ ತಕ್ಷಣದ ಕ್ರಮವಾಗಿ ಸರ್ಕಾರದ ವೆಚ್ಚದಲ್ಲಿ ಏರಿಕೆ ಮತ್ತು ಅದರಿಂದಾಗಿ ಇತರ ಕ್ರಮಗಳೊಂದಿಗೆ ಒಟ್ಟು ಬೇಡಿಕೆಯ ಏರಿಕೆಯ ಅಗತ್ಯವಿದೆ.

ಉದ್ಯೋಗ ಕಡಿತದ ವಿಪರ್ಯಾಸ

ಹೆಚ್ಚಿನ ಸಂಖ್ಯೆಯ ಸರ್ಕಾರಿ ಉದ್ಯೋಗಗಳು ಭರ್ತಿಯಾಗದೆ ಉಳಿದಿವೆ. ಶಿಕ್ಷಣ ವಲಯದಲ್ಲಿ ವಿಪರೀತ ಪ್ರಮಾಣದಲ್ಲಿ ಅಗತ್ಯ ಸಿಬ್ಬಂದಿಯ ಕೊರತೆ ಬೋಧನೆಯ ಗುಣಮಟ್ಟದ ಮೇಲೆ ಭಾರಿ ದುಷ್ಪರಿಣಾಮ ಉಂಟು ಮಾಡುತ್ತಿದೆ. "ಅಗ್ನಿವೀರ್" ಯೋಜನೆಯಂತಹ ಎಲ್ಲಾ ರೀತಿಯ ಯೋಜನೆಗಳನ್ನು ಪರಿಚಯಿಸಿದ ಕಾರಣ ಸಶಸ್ತ್ರ ಪಡೆಗಳಲ್ಲಿ ಸಹ ಎಂದಿನ ನೇಮಕಾತಿ ಪ್ರಮಾಣ ಕಾಣುತ್ತಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸರ್ಕಾರವು ಉದ್ಯೋಗವನ್ನು ಒದಗಿಸುವಲ್ಲಿ ಮುಂದಾಳುತ್ವ ವಹಿಸುವ ಬದಲು, ಉದ್ಯೋಗವನ್ನು ಕಡಿತಗೊಳಿಸುತ್ತಿರುವ ವಿಪರ್ಯಾಸ ಕಾಣುತ್ತಿದೆ. ಇದಕ್ಕೆ ಕಾರಣ ಅದು ತಾನು ಹಣಕಾಸಿನ ನಿರ್ಬಂಧ ಅನುಭವಿಸುತ್ತಿದ್ದೇನೆ ಎಂದು ಭಾವಿಸುತ್ತಿರುವುದು. ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸೋಣ.

ಮೇಲೆ ತಿಳಿಸಿರುವಂತೆ, ಮೂಲಭೂತ ವ್ಯತ್ಯಾಸ ಬೇಡಿಕೆ ಮತ್ತು ಪೂರೈಕೆ–ನಿರ್ಬಂಧಿತ ವ್ಯವಸ್ಥೆಗಳ ನಡುವೆ. ಈಗಾಗಲೇ ಚರ್ಚಿಸಿರುವಂತೆ, ಸರಬರಾಜು ನಿರ್ಬಂಧಗಳು ಇಲ್ಲ ಎಂದು ನಾವು ನೋಡಿದ್ದೇವೆ, ಅವನ್ನು ಹೊರತು ಪಡಿಸಿ ಒಂದು ಸಾರ್ವಭೌಮ ಪ್ರಭುತ್ವದ ಮೇಲೆ ಹಣಕಾಸಿನ ನಿರ್ಬಂಧವೇನೂ ಇಲ್ಲ. ಅಂತಹ ಯಾವುದೇ ಹಣಕಾಸಿನ ನಿರ್ಬಂಧ ಅಂತರರಾಷ್ಟ್ರೀಯ ಬಂಡವಾಳ ಮತ್ತು ಅದರ ಸ್ಥಳೀಯ ಪ್ರತಿರೂಪವಾದ ದೇಶೀಯ ಕಾರ್ಪೊರೇಟ್–ಹಣಕಾಸಿನ ಕೂಟ ಪ್ರಭುತ್ವದ ಮೇಲೆ ಹೇರಿದ್ದಾಗಿರುತ್ತದೆ. ಇದು ಪ್ರಭುತ್ವ ತನ್ನ ಸ್ವಾಯತ್ತತೆಯನ್ನು ಕಳೆದುಕೊಂಡದ್ದನ್ನು ಬಿಂಬಿಸುತ್ತದೆಯೇ ಹೊರತು ಪ್ರಭುತ್ವದ ಮೇಲೆ ಯಾವುದೇ ವಾಸ್ತವಿಕ ನಿರ್ಬಂಧಗಳಿವೆ ಎಂಬುದನ್ನಲ್ಲ.

ನಿಜ ಹೇಳಬೇಕೆಂದರೆ, ಒಂದು ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಲ್ಲಿ ಪ್ರಭುತ್ವದ ಖರ್ಚು ಮಾಡುವ ಸಾಮರ್ಥ್ಯದ ಮೇಲೆ ವಾಸ್ತವಿಕ ಮಿತಿಗಳೇನೂ ಇಲ್ಲ ಎಂಬುದು ಅರ್ಥಶಾಸ್ತ್ರದಲ್ಲಿ ಈಗಾಗಲೇ ದಾಖಲಾಗಿದೆ. ಇದು 90 ವರ್ಷಗಳ ಹಿಂದೆ ಕಲೇಕಿ–ಕೀನ್ಸ್ ರವರ ಸೈದ್ಧಾಂತಿಕ ಕ್ರಾಂತಿಯು ಪ್ರಾರಂಭವಾದಾಗಲಿಂದಲೇ ಇದೆ. ಆದರೂ ಇಂದಿಗೂ ಅದನ್ನು ಪುನಶ್ಚೇತನಗೊಳಿಸಿ, ವಾಸ್ತವವಾಗಿ ಪ್ರಭುತ್ವದ ಮೇಲೆ ದೊಡ್ಡ ಬಂವಾಳಶಾಹಿ ಹೇರುವ ಮಿತಿಗಳನ್ನು ಪ್ರಭುತ್ವದ ಮೇಲಿರುವ ಮಿತಿಗಳು ಎಂಬ 9 ದಶಕಗಳ ಹಿಂದೆಯೇ ತಳ್ಳಿಹಾಕಲ್ಪಟ್ಟ ಸುಳ್ಳು ಸಿದ್ಧಾಂತಕ್ಕೆ ಮತ್ತೆ ಜೀವ ಕೊಡಲಾಗುತ್ತಿದೆ. ನಿರುದ್ಯೋಗವನ್ನು ನಿವಾರಿಸಲು ಅತ್ಯುನ್ನತವಾದ ಅವಶ್ಯಕತೆಯೆಂದರೆ, ಪ್ರಭುತ್ವವು ಅಂತರರಾಷ್ಟ್ರೀಯ ಮತ್ತು ದೇಶೀಯ ದೊಡ್ಡ ಬಂಡವಾಳದ ಚಪಲಗಳಿಗೆ ಗುಲಾಮರಾಗುವುದನ್ನು ಕೊಡವಿಕೊಳ್ಳಬೇಕು. ಅದು ಪುನಃ ತನ್ನನ್ನು ಸ್ವಾಧೀನಪಡಿಸಿಕೊಳ್ಳಬೇಕು ಮತ್ತು ಜನರ ಸೇವೆ ಮಾಡುವ ತನ್ನ ಸಂಕಲ್ಪವನ್ನು ಮತ್ತೆ ಪಡೆದು ಕಾರ್ಯಗತಗೊಳಿಸಬೇಕು.

ಬೇಡಿಕೆ–ನಿರ್ಬಂಧಿತ ವ್ಯವಸ್ಥೆಯಲ್ಲಿ ಸರಕಾರದ ವೆಚ್ಚಕ್ಕೆ ಹಣಕಾಸನ್ನು ವಿತ್ತೀಯ ಕೊರತೆಯಿಂದ ಒದಗಿಸಲಾಗಿದ್ದರೂ ಸಹ ಅದು ದೊಡ್ಡ ನಿರುದ್ಯೋಗವನ್ನು ನಿವಾರಿಸುತ್ತದೆ. ಅದರ ಮುಖ್ಯ ಹಾನಿಕಾರಕ ಪರಿಣಾಮ ಖಾಸಗಿ ಹೂಡಿಕೆಯನ್ನು "ಹೊರದಬ್ಬುತ್ತದೆ" ಅಥವಾ ಇಂತಹ ಇತರ ಬೋಗಸ್ ದಾವೆಗಳಿಂದಾಗಿ ಉದ್ಭವಿಸುವುದಿಲ್ಲ, ಬದಲಿಗೆ ಇದು ಸಂಪತ್ತಿನ ಅಸಮಾನತೆಯನ್ನು ಅನಪೇಕ್ಷಿತವಾಗಿ ಹೆಚ್ಚಿಸುತ್ತದೆ ಎಂಬುದು. ಸರ್ಕಾರವು ವಿತ್ತೀಯ ಕೊರತೆಯಿಂದ 100 ರೂ. ಗಳನ್ನು ಖರ್ಚು ಮಾಡಿದರೆ, ಅಂದರೆ ಸಾಲದ ಮೂಲಕ ಹಣಕಾಸು ಒದಗಿಸಿದರೆ, ಅದು ತನ್ನ ವೆಚ್ಚದ ಮೂಲಕ ಬಂಡವಾಳಶಾಹಿಗಳ ಕೈಗೆ 100 ರೂ. ಹಾಕುತ್ತದೆ (ದುಡಿಯುವ ಜನಗಳು ಹೆಚ್ಚುಕಡಿಮೆ ತಾವು ಗಳಿಸಿದ್ದನ್ನೆಲ್ಲ ಖರ್ಚು ಮಾಡುತ್ತಾರೆ) ಮತ್ತು ನಂತರ ಅದನ್ನು ಅವರಿಂದ ಎರವಲು ಪಡೆಯುತ್ತದೆ.

ಅಡ್ಡಿಗಳನ್ನು ಎದುರಿಸಲು ಸಿದ್ಧವಾಗಿರಬೇಕು

ನಾವು ಅರ್ಥವ್ಯವಸ್ಥೆಯನ್ನು ಮೂರು ಪರಸ್ಪರ ಪ್ರತ್ಯೇಕವಾದ ಮತ್ತು ಸಂಪೂರ್ಣ ಭಿನ್ನವಾದ ಭಾಗಗಳಾಗಿ, ಅಂದರೆ ಸರಕಾರ, ದುಡಿಯುವ ಜನರು ಮತ್ತು ಬಂಡವಾಳಶಾಹಿಗಳು ಎಂದು ವಿಭಜಿಸಿದರೆ ಇದು ಸುಲಭವಾಗಿ ಕಂಡುಬರುತ್ತದೆ. ಗಣಿತದ ಪ್ರಕಾರ, ಈ ಮೂರು ಭಾಗಗಳ ಒಟ್ಟು ಕೊರತೆಯು ಯಾವುದೇ ಅವಧಿಯಲ್ಲಿ ಶೂನ್ಯವಾಗಿರಬೇಕು. ದುಡಿಯುವ ಜನರು ಸಾಮಾನ್ಯವಾಗಿ ಅವರು ಗಳಿಸುವ ಎಲ್ಲವನ್ನೂ ಬಳಸುವುದರಿಂದ, ಅವರ ಕೊರತೆ (ಅಥವಾ ಹೆಚ್ಚುವರಿ) ಶೂನ್ಯವಾಗಿರುತ್ತದೆ. ಸರ್ಕಾರ ವಿತ್ತೀಯ ಕೊರತೆಗಿಳಿದರೆ, ಅಷ್ಟೇ ಮೊತ್ತದಷ್ಟು ಮೀಸಲು ಹಣವನ್ನು ತಂತಾನೇ ಬಂಡವಳಿಗರಲ್ಲಿ, ಅದರ ಬಗ್ಗೆ ಅವರು ಪ್ರಜ್ಞಾಪೂರ್ವಕವಾಗಿ ಏನನ್ನೂ ಮಾಡದೆಯೇ ಸೃಷ್ಟಿಸಬೇಕು. ಸರ್ಕಾರವು ಪ್ರಾರಂಭದಲ್ಲಿ ಬ್ಯಾಂಕ್‌ಗಳಿಂದ ರೂ.100 ಸಾಲ ಪಡೆದು ಖರ್ಚು ಮಾಡಿದರೆ, ಅವಧಿಯ ಅಂತ್ಯದ ವೇಳೆಗೆ ಅದು ಬಂಡವಳಿಗರಲ್ಲಿ ಅನಪೇಕ್ಷಿತವಾಗಿ ಸಂಗ್ರಹವಾಗಬಹುದಾದ ರೂ.100 ಹೆಚ್ಚುವರಿ ಹಣವನ್ನು ಅವರಿಂದ ಎರವಲು ಪಡೆಯಬಹುದು ಮತ್ತು ಬ್ಯಾಂಕುಗಳಿಗೆ ಮರುಪಾವತಿ ಮಾಡಬಹುದು.

ಈ ಹೆಚ್ಚುವರಿ ಮೊತ್ತವು ಸರ್ಕಾರ ಮಾಡುವ ವೆಚ್ಚದಿಂದ ಉತ್ಪತ್ತಿಯಾಗುವ ಸರಕುಗಳಿಗೆ ಹೆಚ್ಚಿನ ಬೇಡಿಕೆಯಿಂದಾಗಿ ಬಂಡವಾಳಶಾಹಿಗಳಿಗೆ ಸೇರಿಕೊಳ್ಳುತ್ತದೆ. ಇದು ಅವರ ಉಳಿತಾಯ ಮತ್ತು ಸಂಪತ್ತಿಗೆ ಅನಪೇಕ್ಷಿತ ಸೇರ್ಪಡೆಯಾಗಿದೆ ಮತ್ತು ಅದರಿಂದಾಗಿ ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುತ್ತದೆ. ಸಂಪತ್ತಿನ ಅಸಮಾನತೆಯನ್ನು ತಡೆಗಟ್ಟಲು, ಸರ್ಕಾರವು ಬಂಡವಳಿಗರ ಮೇಲೆ ಅಷ್ಟೇ ಮೊತ್ತದ ತೆರಿಗೆಯನ್ನು ವಸೂಲು ಮಾಡಿ ತನ್ನ ವೆಚ್ಚವನ್ನು ಭರಿಸಬಹುದು. ಇದು ಆರಂಭಿಕ ಪರಿಸ್ಥಿತಿಗೆ ಹೋಲಿಸಿದರೆ ಬಂಡವಳಿಗರ ಸಂಪತ್ತನ್ನು ಕಡಿಮೆ ಮಾಡುವುದಿಲ್ಲ. ಅಂದರೆ, ಬಂಡವಳಿಗರ ಮೇಲೆ ತೆರಿಗೆ ವಿಧಿಸುವ ಮೂಲಕ ಪ್ರಭುತ್ವದ ಹೆಚ್ಚುವರಿ ವೆಚ್ಚದಿಂದ ರಾಜ್ಯ ವೆಚ್ಚವು ಉದ್ಯೋಗಗಳನ್ನು ಹೆಚ್ಚಿಸಬಹುದು. ಇದು ಬಂಡವಳಿಗರ ಸಂಪತ್ತನ್ನೂ ತಟ್ಟುವುದಿಲ್ಲ, ಏಕೆಂದರೆ ಅವರ ಆರಂಭಿಕ ಸಂಪತ್ತು ಬದಲಾಗದೆ ಉಳಿದಿರುತ್ತದೆ. ಪ್ರಭುತ್ವವು ಉದ್ಯೋಗವನ್ನು ಹೆಚ್ಚಿಸಲು ಬಯಸಿದರೆ ತನ್ನ ವೆಚ್ಚವನ್ನು ವಿಸ್ತರಿಸುವ ಧೈರ್ಯವನ್ನು ಹೊಂದಿರಬೇಕು ಮತ್ತು ದೇಶೀಯ ಮತ್ತು ವಿದೇಶಿ ಬಂಡವಾಳಶಾಹಿಗಳು ತನ್ನ ಕ್ರಮಗಳಿಗೆ ಒಡ್ಡುವ ಅಡ್ಡಿ–ಆತಂಕಗಳನ್ನು (ಬಂಡವಾಳದ ಹೊರಹರಿವು ಮುಂತಾದ

ಪುಟ 15 ಕ್ಕೆ



ರೈತರ ರಕ್ತದಿಂದ ತೊಯ್ದ ಕೈಗಳಿಗೆ ಕೃಷಿ ಮಂತ್ರಿಯ ಹುದ್ದೆ–ಎಐಕೆಎಸ್ ಖಂಡನೆ

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ರನ್ನು ಹೊಸ ಎನ್‌ಡಿಎ ಸಂಪುಟದಲ್ಲಿ ಕೃಷಿ ಮತ್ತು ರೈತರ ಕಲ್ಯಾಣ ಸಚಿವರನ್ನಾಗಿ ಆಯ್ಕೆ ಮಾಡಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಬಲವಾಗಿ ಖಂಡಿಸಿವೆ. 2017 ರ ಜೂನ್ 6 ರಂದು ಮಧ್ಯಪ್ರದೇಶದ ಮಂದಸೌರ್‌ನಲ್ಲಿ, ಎಲ್ಲಾ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯಲ್ಲಿ ಖಾತ್ರಿಪಡಿಸಿದ ಖರೀದಿ, ಸಾಲ ಮನ್ನಾ ಮತ್ತು ರೈತರ ಆತ್ಮಹತ್ಯೆಗಳು ಅಂತ್ಯಗೊಳ್ಳಬೇಕು ಎಂಬ ನೈಜ ಬೇಡಿಕೆಗಳಿಗೆ ಹೋರಾಟ ನಡೆಸುತ್ತಿದ್ದ ರೈತರ ಮೇಲೆ, ಶಿವರಾಜ್‌ಸಿಂಗ್ ಚೌಹಾಣ್ ಮುಖ್ಯಮಂತ್ರಿಯಾಗಿದ್ದ ಬಿಜೆಪಿ ಸರಕಾರದ ಅಡಿಯಲ್ಲಿ ಗೋಲೀಬಾರ್ ನಡೆದು 6 ರೈತರ ಕಗ್ಗೊಲೆಯಾಯಿತು.

ರೈತರ ರಕ್ತದಿಂದ ತೊಯ್ದ ಕೈಗಳ ರಾಜಕಾರಣಿಗೆ ಕೃಷಿ ಸಚಿವ ಸ್ಥಾನ ನೀಡಿರುವುದು ನೈತಿಕವಾಗಿ ಖಂಡನೀಯ ಎಂದು ಎಐಕೆಎಸ್ ಹೇಳಿದೆ. ಈ ನಿರ್ಧಾರವು ಭಾರತದಾದ್ಯಂತ ರೈತರು ಮತ್ತು ಕೃಷಿ ಸಂಕಷ್ಟದ ಬಗ್ಗೆ ಬಿಜೆಪಿ–ಎನ್‌ಡಿಎಯ ಮನಸ್ಥಿತಿ, ಧೋರಣೆ ಮತ್ತು ದಿಕ್ಕಿನ ಸಂಕೇತವಾಗಿದೆ ಎಂದು ಅದು ಹೇಳಿದೆ.

ಗಮನಾರ್ಹವಾಗಿ ದುರ್ಬಲಕೊಂಡಿರುವ ಬಿಜೆಪಿಯ ನೇತೃತ್ವದ ಹೊಸ ಎನ್‌ಡಿಎ ಸರ್ಕಾರವು ತನ್ನ ಮೊದಲ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರಗಳು ಇದು ರೈತ ವಿರೋಧಿ ಸರಕಾರ ಎಂದು ಈಗಾಗಲೇ ಸಾಬೀತು ಮಾಡಿದೆ. ಪಿಎಂ–ಕಿಸಾನ್ ಅಡಿಯಲ್ಲಿ 2,000 ರೂ.ಗಳ ನೇರ ನಗದು ವರ್ಗಾವಣೆಯ ಕಂತು ಬಿಡುಗಡೆಗೆ ನಿರ್ಧರಿಸಿರುವುದು ಒಂದು 'ದೊಡ್ಡ ನಿರ್ಧಾರ' ಎಂದು ಮಾಧ್ಯಮಗಳಲ್ಲಿ ಡಂಗುರ ಬಾರಿಸಲಾಗುತ್ತಿದೆ. ಆದರೆ ಇದು ಸಂಪೂರ್ಣವಾಗಿ ಅಸಮರ್ಪಕವಾದ ಹಳೆಯ ಯೋಜನೆಯ ಮುಂದುವರಿಕೆಯಷ್ಟೇ, C2+50% ನ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕಾನೂನುಬದ್ಧವಾಗಿ ಖಾತರಿಪಡಿಸಿದ ಸಂಗ್ರಹಣೆಯೊಂದಿಗೆ ಫಲದಾಯಕ ಬೆಲೆಯನ್ನು ಪಡೆಯುವ ಹಕ್ಕಿನಿಂದ ರೈತರ ಗಮನವನ್ನು ಬೇರೆಡೆಗೆ ತಿರುಗಿಸುವ ಕಣ್ಕಟ್ಟಿನ ಕ್ರಮ ಎಂದು ಎಐಕೆಎಸ್ ಹೇಳಿದೆ. ಪಿಎಂ–ಕಿಸಾನ್ ಯೋಜನೆಯು 2019ರಲ್ಲಿ ಪ್ರಾರಂಭವಾಯಿತು, ಆಗ 14.5 ಕೋಟಿ ರೈತರನ್ನು ಒಳಗೊಂಡಿದ್ದ ಈ ಯೋಜನೆಯ ವ್ಯಾಪ್ತಿ ಈಗ, ಸರ್ಕಾರವೇ ಒಪ್ಪಿಕೊಂಡಿರುವಂತೆ, 9.3 ಕೋಟಿಗೆ ಇಳಿದಿದೆ ಎಂಬ ಸಂಗತಿಯತ್ತವೂ ಎಐಕೆಎಸ್ ಗಮನ ಸೆಳೆದಿದೆ.

ಎನ್‌ಡಿಎ ಯ ಮೊದಲ ಸಂಪುಟ ಸಭೆಯು ಸಿ2+50% ದ ಸ್ವಾಮಿನಾಥನ್ ಸೂತ್ರದ ಆಧಾರದ ಮೇಲೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯನ್ನು ಖಾತರಿಪಡಿಸುವ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ, ಅಥವಾ ಎಲ್ಲಾ ರೈತರ ಸಮಗ್ರ ಸಾಲ ಮನ್ನಾ ಅಥವಾ ವಿದ್ಯುತ್ ಖಾಸಗೀಕರಣವನ್ನು ರದ್ದುಗೊಳಿಸಿಸುವ ಬೇಡಿಕೆಗಳ ಬಗ್ಗೆ ಯಾವುದೇ ನಿರ್ಧಾರವನ್ನು ಕೈಗೊಂಡಿಲ್ಲ. ಈ ಮೂಲಕ 9ನೇ ಡಿಸೆಂಬರ್ 2021 ರಂದು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಜೊತೆಗಿನ ಒಪ್ಪಂದವನ್ನು ಹೊಸ ಬಿಜೆಪಿ–ಎನ್‌ಡಿಎ ಸರ್ಕಾರ ಹೇಗೆ ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ ಎಂಬುದನ್ನು ಇದು ತೋರಿಸುತ್ತದೆ. ಇವು ದೆಹಲಿಯ ಗಡಿಗಳಲ್ಲಿ ಐತಿಹಾಸಿಕ ರೈತ ಆಂದೋಲನದ ಸಮಯದಲ್ಲಿ ರೂಪುಗೊಂಡ ಮತ್ತು ನಂತರದ ರೈತ ಹೋರಾಟಗಳ ಅಲೆಗಳ ಮೂರು ಪ್ರಾಥಮಿಕ ಬೇಡಿಕೆಗಳು.

ಈ ನೀತಿ ಕ್ರಮಗಳಿಲ್ಲದಿದ್ದರೆ, ಕೃಷಿ ಬಿಕ್ಕಟ್ಟು ಮತ್ತಷ್ಟು ಆಳವಾಗುತ್ತದೆ. ಪಿಎಂ–ಕಿಸಾನ್‌ನಂತಹ ನೇರ ವರ್ಗಾವಣೆ ಯೋಜನೆಗಳು ಭಾರತದ ರೈತ ಸಮುದಾಯದ ಹದಗೆಡುತ್ತಿರುವ ಸ್ಥಿತಿಯನ್ನು ಸುಧಾರಿಸಲು ಸಾಕಾಗುವುದಿಲ್ಲ, ಸ್ಥಿರ ಮತ್ತು ಫಲದಾಯಕ ಬೆಲೆಗಳು, ಋಣಭಾರದಿಂದ ಮುಕ್ತಿ ಮತ್ತು ಉತ್ಪಾದನಾ ವೆಚ್ಚದಲ್ಲಿನ ಕಡಿತದ ಧೋರಣೆಗಳು ಇಲ್ಲದ ಯಾವುದೇ ನಿರ್ಧಾರ ಆಕ್ರೋಶಕಾರಿ ಎಂದು ಎಐಕೆಎಸ್ ಹೇಳಿದೆ.

159 ಗ್ರಾಮೀಣ ಕ್ಷೇತ್ರಗಳಲ್ಲಿನ ಸೋಲಿನಿಂದಲೂ ಬಿಜೆಪಿ–ಎನ್‌ಡಿಎ ಪಾಠ ಕಲಿಯುತ್ತಿಲ್ಲ. ಬಿಜೆಪಿ ಕಳೆದುಕೊಂಡಿರುವ 63 ಸ್ಥಾನಗಳ ಪೈಕಿ 60 ಸ್ಥಾನಗಳು ಗ್ರಾಮೀಣ ಪ್ರಾಬಲ್ಯದ ಪ್ರದೇಶಗಳಿಗೆ ಸೇರಿವೆ. ರಾಜಸ್ಥಾನದ ಸಿಕರ್‌ನಿಂದ ಆಮ್ರಾ ರಾಮ್, ಬಿಹಾರದಲ್ಲಿ ರಾಜಾ ರಾಮ್ ಸಿಂಗ್ ಮತ್ತು ಸುದಾಮ ಪ್ರಸಾದ್ ಮತ್ತು ತಮಿಳುನಾಡಿನ ದಿಂಡಿಗಲ್‌ನಿಂದ ಆರ್ ಸಚಿಂತಾನಂತಂ ಸೇರಿದಂತೆ ಎಸ್‌ಕೆಎಂ ನಾಯಕರ ಗೆಲುವು ಎನ್‌ಡಿಎ ಯ ಕಾರ್ಪೊರೇಟ್–ಪರ ಧೋರಣೆಗಳ ವಿರುದ್ಧ ರೈತರು ಮತ್ತು ಗ್ರಾಮೀಣ ಜನರಲ್ಲಿ ಹರಡಿರುವ ವ್ಯಾಪಕ ಸಿಟ್ಟನ್ನು ಬಿಂಬಿಸುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಮಂದಸೌರಿನಲ್ಲಿ ಆರು ರೈತರ ಕಗ್ಗೊಲೆಗೆ ಹೊಣೆಗಾರರಾಗಿರುವವರನ್ನೇ ಕೃಷಿ ಮಂತ್ರಿಯಾಗಿ ನೇಮಿಸಿರುವ ನಿರ್ಧಾರ 2014 ಮತ್ತು 2019ರಲ್ಲಿ ಬಿಜೆಪಿ ಬಹುಮತದ ಸರಕಾರಗಳು ಪ್ರದರ್ಶಿಸಿದ ಭಂಡತನದ ಸಂಕೇತ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ಈ ಘಟನೆ ದೇಶಾದ್ಯಂತ ರೈತರು ಮತ್ತು ಇತರ ಗ್ರಾಮೀಣ ಜನತೆಯಲ್ಲಿ ಆಕ್ರೋಶ ಉಂಟು ಮಾಡಿತ್ತು ಎಂದು ಅದು ನೆನಪಿಸಿದೆ.

ಬಸ್ಸುಗಳ ಕಾರ್ಯಾಚರಣೆಗೂ ಇಳಿದಿದೆ ಅಮೆರಿಕ ಮೂಲದ 'ಉಬರ್'.........

ಪುಟ 16 ರಿಂದ

ಸಾರಿಗೆ ವಲಯದ ಮೇಲೆ ಹಿಡಿತ ಸಾಧಿಸಲು ಅನುವು ಮಾಡಿಕೊಡುವ ಉದ್ದೇಶದಿಂದ, 2019 ರ ಮೋಟಾರು ವಾಹನ ತಿದ್ದುಪಡಿ ಕಾಯ್ದೆಯು ಪ್ರಧಾನ ಕಾಯಿದೆಯ ಸೆಕ್ಷನ್ 93 ಕ್ಕೆ ಷರತ್ತು 36 ಅನ್ನು ಪರಿಚಯಿಸಿತು. ಈ ಷರತ್ತು ಇಂತಹ ಕಂಪನಿಗಳಿಗೆ ಪರವಾನಗಿ ನೀಡುತ್ತದೆ. ಸಾರಿಗೆ ವಲಯದ ಕಾರ್ಮಿಕ ಸಂಘಟನೆಗಳು ಈ ತಿದ್ದುಪಡಿ ಕಾಯ್ದೆಯನ್ನು ಬಲವಾಗಿ ವಿರೋಧಿಸಿ, ಮುಷ್ಕರ ಸೇರಿದಂತೆ ರಾಷ್ಟ್ರವ್ಯಾಪಿ ಹೋರಾಟಗಳನ್ನು ಸಂಘಟಿಸಿದ್ದವು. ವಿರೋಧದ ಹೊರತಾಗಿಯೂ, ಸಂಸತ್ತು ಜುಲೈ 31, 2019 ರಂದು ತಿದ್ದುಪಡಿ ಕಾಯಿದೆಯನ್ನು ಅನುಮೋದಿಸಿತು ಮತ್ತು ಇದು ಆಗಸ್ಟ್ 8, 2019 ರಂದು ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆಯಿತು. ಇದರ ಪರಿಣಾಮ ಈಗ ಉಬರ್ ಸಂಸ್ಥೆ ಬಸ್ಸುಗಳ ಕಾರ್ಯಾಚರಣೆಗೆ ಇಳಿಯಲು ಅವಕಾಶ ಸಿಕ್ಕಿದೆ.

ಖಾಸಗಿ ಎಲೆಕ್ಟ್ರಿಕ್ ಬಸ್ಸುಗಳು

ಈಗಾಗಲೇ ಬೆಂಗಳೂರು ನಗರ ಸಾರಿಗೆ(ಬಿಎಂಟಿಸಿ)ಯಲ್ಲಿ ಮತ್ತು ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಒಂದಷ್ಟು ಎಲೆಕ್ಟ್ರಿಕ್ ಬಸ್ಸುಗಳು ಕಾರ್ಯಾಚರಣೆಗೆ ಇಳಿದಿವೆ. ಈ ಬಸ್ಸುಗಳು ಖಾಸಗಿ ಒಡೆತನ ಹೊಂದಿವೆ. ಇವುಗಳ ಚಾಲಕರು ಖಾಸಗಿ ಮಾಲೀಕರಿಗೆ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ. ಈ ಚಾಲಕರಿಗೆ ಉದ್ಯೋಗದ ಭದ್ರತೆ ಎಂಬುದಿಲ್ಲ. ಈ ಬಸ್ಸುಗಳ ಕಂಡಕ್ಟರ್ ಗಳು ಮಾತ್ರ ಬಿಎಂಟಿಸಿ/ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ನೌಕರರು!!

ಕೇಂದ್ರದ ಮೋದಿ ಸರ್ಕಾರವು, ವಿದ್ಯುತ್ ವಾಹನಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ FAME (Fast Adoption and Manufacturing of Electric Vehicles in India) ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಈಗ FAME-2 ಯೋಜನೆ ಜಾರಿಯಲ್ಲಿದೆ. ಇದರ ಪ್ರಕಾರ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡುವ ಖಾಸಗಿ ಕಂಪನಿಗಳಿಗೆ ಪ್ರತಿ ಬಸ್ಸಿಗೆ 50 ಲಕ್ಷ ರೂಗಳನ್ನು ಕೇಂದ್ರ ಸರ್ಕಾರ ಸಬ್ಸಿಡಿ ನೀಡುತ್ತದೆ. (FAME-1 ಯೋಜನೆಯಲ್ಲಿ ರೂ. 80 ಲಕ್ಷ ಸಬ್ಸಿಡಿ ನೀಡಲಾಗುತ್ತಿತ್ತು). ಬಿಎಂಟಿಸಿ ಮತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಬಸ್ಸುಗಳ ಖಾಸಗಿ ಮಾಲಿಕರು ಈ ಸಬ್ಸಿಡಿಯನ್ನು ಪಡೆದುಕೊಂಡಿದ್ದಾರೆ.

ಬಿಎಂಟಿಸಿ ಯಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ಕಾರ್ಯಾಚರಣೆ ಬಗ್ಗೆ ಸಿಐಟಿಯು ಸಂಘಟನೆ ಹೀಗೆ ಹೇಳುತ್ತದೆ: ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಹೆಸರಲ್ಲಿ ಸರ್ಕಾರಿ ಸಾರಿಗೆ ನಿಗಮಗಳಲ್ಲಿ ವಿದ್ಯುತ್ ಬಸ್ಸುಗಳನ್ನು ಕ್ರಮೇಣ ಹೆಚ್ಚಿಸಲಾಗುತ್ತಿದೆ. ಪ್ರಸ್ತುತ ಬಿಎಂಟಿಸಿ ನಿಗಮದಲ್ಲಿ 470 ವಿದ್ಯುತ್ ಬಸ್ಸುಗಳು ಕಾರ್ಯಾಚರಣೆ ಮಾಡುತ್ತಿವೆ. ಸದ್ಯದಲ್ಲೇ 921 ವಿದ್ಯುತ್ ಬಸ್ಸುಗಳು ಸೇರ್ಪಡೆ ಆಗಲಿವೆ. ಮುಂದಿನ ಕೆಲವು ತಿಂಗಳಲ್ಲಿ ಇನ್ನೂ 1500 ವಿದ್ಯುತ್ ಬಸ್ಸುಗಳು ಸೇರ್ಪಡೆ ಆಗಲಿವೆ ಎಂದು ಸರ್ಕಾರ ಹೇಳಿದೆ. ಈಗಾಗಲೇ ಬಿಎಂಟಿಸಿ ಯ ಕೆಲವು ಡಿಪೋಗಳನ್ನು ಖಾಸಗಿ ವಿದ್ಯುತ್ ಬಸ್ ಕಂಪನಿಗಳಿಗೆ ನೀಡಲಾಗಿದೆ. ಅಲ್ಲಿದ್ದ ಬಿಎಂಟಿಸಿ ನಿಗಮದ ಕಾರ್ಮಿಕರನ್ನು ಬೇರೆ ಡಿಪೋಗಳಿಗೆ ವರ್ಗಾಯಿಸಲಾಗಿದೆ. ಇದೇ ರೀತಿ ಮುಂದುವರಿದರೆ ಮುಂದಿನ 3–4 ವರ್ಷಗಳಲ್ಲಿ ಬಿಎಂಟಿಸಿ ಪೂರ್ಣವಾಗಿ ಖಾಸಗಿ ವಿದ್ಯುತ್ ಬಸ್ಸುಗಳಿಂದ ತುಂಬಿ ಹೋಗಲಿದೆ. ಆಗ ಬಿಎಂಟಿಸಿ ಯು ಸರ್ಕಾರಿ ನಿಗಮವಾಗಿ ಉಳಿಯುವ ಅಗತ್ಯವೇ ಇರುವುದಿಲ್ಲ. ಇನ್ನು ನಿಗಮದ ಕಾರ್ಮಿಕರು ಮತ್ತು ಡಿಪೋಗಳು ಇರಬೇಕಾದ ಪ್ರಶ್ನೆ ಬರುವುದಿಲ್ಲ. ಬಿಎಂಟಿಸಿ ಸಂಪೂರ್ಣ ಖಾಸಗೀಕರಣಗೊಳ್ಳುತ್ತದೆ. ಇದೇ ಪರಿಸ್ಥಿತಿ ಕ್ರಮೇಣವಾಗಿ ಕೆ.ಎಸ್.ಆರ್.ಟಿ.ಸಿ. ಮತ್ತು ಉಳಿದ ನಿಗಮಗಳಿಗೂ ಬರುತ್ತದೆ.

ವಿದ್ಯುತ್ ಬಸ್ಸುಗಳು ಮಾಲಿನ್ಯ ರಹಿತವಾಗಿವೆ. ಪರಿಸರ ಮತ್ತು ಮಾಲಿನ್ಯ ರಕ್ಷಣೆ ದೃಷ್ಟಿಯಿಂದ ಈಗಿರುವ ಡೀಸೆಲ್ ಬಸ್ಸುಗಳಿಗಿಂತ ವಿದ್ಯುತ್ ಬಸ್ಸುಗಳು ಉಪಯುಕ್ತ. ಆದರೆ, ವಿದ್ಯುತ್ ಬಸ್ಸುಗಳನ್ನು ಸರ್ಕಾರವೇ ಖರೀದಿಸದೆ ಇರುವುದೇಕೆ? ಖಾಸಗಿ ಕಂಪನಿಗಳು ಮಾತ್ರ ವಿದ್ಯುತ್ ಬಸ್ಸುಗಳನ್ನು ಕಾರ್ಯಾಚರಣೆ ಮಾಡಬೇಕು ಎಂಬುದೇಕೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರಿಗೆ ನಿಗಮಗಳಿಗೆ ಸಬ್ಸಿಡಿಯನ್ನು ನೀಡದಿರುವುದೇಕೆ? ಎಂದು ಸಿಐಟಿಯು ಪ್ರಶ್ನಿಸುತ್ತದೆ.

ಎಲೆಕ್ಟ್ರಿಕ್ ಬಸ್ಸುಗಳು ಉಬರ್ ಜೊತೆ ಸೇರಿದರೆ?

ಉಬರ್ ಸಂಸ್ಥೆ ತನ್ನ ಸ್ವಂತ ಬಸ್ಸುಗಳನ್ನು ಖರೀದಿಸುವುದಿಲ್ಲ. ಈಗ ಟ್ಯಾಕ್ಸಿ, ಆಟೋರಿಕ್ಷಾಗಳನ್ನು ಹೇಗೆ ತಮ್ಮ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆಯೋ, ಅದೇ ರೀತಿ ಬಸ್ಸುಗಳ ಮಾಲೀಕರು ಬೇರೆಯವರಾಗಿರುತ್ತಾರೆ. "ಉಬರ್ ಸರ್ಕಾರಿ ಮತ್ತು ಖಾಸಗಿ ಬಸ್ ವಾಹಕಗಳೊಂದಿಗೆ ತನ್ನ ರೋಲ್ ಔಟ್‌ಗಾಗಿ ಇತರ ಹಲವು ರಾಜ್ಯಗಳೊಂದಿಗೆ ಸಕ್ರಿಯ ಸಂವಾದ ನಡೆಸುತ್ತಿದೆ. ಇವು ಡೈನಾಮಿಕ್ ಮಾರ್ಗಗಳಾಗಿವೆ ಮತ್ತು ಗರಿಷ್ಠ ಬಳಕೆಯ ಪ್ರದೇಶಗಳನ್ನು ಗುರುತಿಸಲು ನಮ್ಮ ಅಸ್ತಿತ್ವದಲ್ಲಿರುವ ನೆಟ್ ವರ್ಕ್ ನಿಂದ ಡೇಟಾವನ್ನು ಬಳಸುತ್ತೇವೆ." ಎಂದು ಉಬರ್ ಹೇಳಿಕೊಂಡಿದೆ.

ಈ ಎಲೆಕ್ಟ್ರಿಕ್ ಬಸ್ಸುಗಳು ಉಬರ್ ಅಥವಾ ಇನ್ನಿತರೆ ಅಗ್ರಿಗೇಟರ್ ಕಂಪನಿಗಳ ಜೊತೆ ಸೇರಿ ಕಾರ್ಯಾಚರಣೆಗೆ ಮುಂದಾಗುತ್ತವೆ. ಸರ್ಕಾರ ಇದಕ್ಕೆ ಅನುಮತಿ ಕೊಡುತ್ತದೆ. ಅಂತಹ ಸಂದರ್ಭದಲ್ಲಿ ಬಿಎಂಟಿಸಿ ಅಥವಾ ಕೆ.ಎಸ್.ಆರ್.ಟಿ.ಸಿ. ಜೊತೆ ವ್ಯವಹರಿಸುವ ಅಗತ್ಯ ಈ ಎಲೆಕ್ಟ್ರಿಕ್ ಬಸ್ಸುಗಳ ಖಾಸಗಿ ಮಾಲೀಕರಿಗೆ ಇರುವುದಿಲ್ಲ. ಬೇಡಿಕೆ ಇರುವ ಮತ್ತು ಗರಿಷ್ಠ ಬಳಕೆಯ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಲ್ಲಿ ಮಾತ್ರ ಬಸ್ಸುಗಳ ಕಾರ್ಯಾಚರಣೆ ಮಾಡುತ್ತವೆ. ಏಕೆಂದರೆ, ಬಂಡವಾಳಗಾರರಿಗೆ ಲಾಭ ಮುಖ್ಯವೇ ವಿನಃ, ಜನತೆಗೆ ಮೂಲಭೂತ ಸೌಕರ್ಯ ಒದಗಿಸಬೇಕೆಂಬ ಭದ್ದತೆ ಇರುವುದಿಲ್ಲ. ವಿರಳ ಪ್ರಯಾಣಿಕರು ಇರುವ ಪ್ರದೇಶಗಳ ಜನರಿಗೆ ಬಸ್ ಸೌಲಭ್ಯ ಇಲ್ಲದಂತಾಗುತ್ತದೆ, ಅಥವಾ ಬಸ್ಸುಗಳಿಗಾಗಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಬರುತ್ತದೆ.

ಬಿಎಂಟಿಸಿ ಉಳಿಯುತ್ತದೆಯೇ?

ಈ ಅಗ್ರಿಗೇಟರ್ ಕಂಪನಿಗಳು ಜಾಹಿರಾತುಗಳ ಮೂಲಕ ಮತ್ತು ಉಚಿತ, ರಿಯಾಯಿತಿ ದರ, ಇತ್ಯಾದಿ ಆಮಿಷಗಳ ಮೂಲಕ ಪ್ರಯಾಣಿಕರನ್ನು ತಮ್ಮತ್ತ ಸೆಳೆಯುವ ಪ್ರಯತ್ನ ಮಾಡುತ್ತವೆ. ಇಂತಹ ಅನುಭವ ಟ್ಯಾಕ್ಸಿ ಮತ್ತು ಆಟೋರಿಕ್ಷಾ ಕಾರ್ಯಾಚರಣೆಯಲ್ಲಿ ನಮಗೆ ಈಗಾಗಲೇ ಆಗಿದೆ. ಸಹಸ್ರಾರು ಕೋಟಿ ಬಂಡವಾಳ ಹೂಡುವ ಇಂತಹ ವಿದೇಶಿ ಮತ್ತು ಸ್ವದೇಶಿ ಅಗ್ರಿಗೇಟರ್ ಕಂಪನಿಗಳ ಎದುರು ನಮ್ಮ ಬಿಎಂಟಿಸಿ ಮತ್ತು ಕೆ.ಎಸ್. ಆರ್.ಟಿ..ಸಿ ಪೈಪೋಟಿ ನಡೆಸಲಾಗುತ್ತದೆಯೇ? ಸರ್ಕಾರದ ಸಂಸ್ಥೆಯನ್ನು ಉಳಿಸಿ, ಬೆಳಸಬೇಕು ಎಂಬ ಪ್ರಾಮಾಣಿಕ ಖಾಳಜಿಯುಳ್ಳ ಅಧಿಕಾರಿಗಳು ನಮ್ಮಲ್ಲಿದ್ದಾರೆಯೇ? ಖಾಸಗಿ ಬಂಡವಾಳಗಾರರ ಜೊತೆ ಕೈಜೋಡಿಸಿ ಸರ್ಕಾರಿ ಉದ್ಯಮಗಳನ್ನು ನಾಶ ಮಾಡುವ ಅಧಿಕಾರಿಗಳೂ ನಮ್ಮಲ್ಲಿದ್ದಾರೆ. ಒಂದು ವೇಳೆ ಅಂತಹ ಪ್ರಾಮಾಣಿಕ ಅಧಿಕಾರಿಗಳು ಇದ್ದರೂ, ಮುಕ್ತ ಆರ್ಥಿಕ ನೀತಿಗಳ ಪರವಾಗಿರುವ ಸರ್ಕಾರ ಅಂತಹ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡುತ್ತದೆಯೇ ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಇವೆಲ್ಲದರ ಪರಿಣಾಮ ಸರ್ಕಾರಿ ಬಸ್ಸುಗಳು ನಷ್ಟ ಹೊಂದುತ್ತವೆ. ಹೊಸ ಬಸ್ಸುಗಳ ಖರೀದಿ ಕುಂಠಿತವಾಗುತ್ತದೆ. ನೌಕರರು ನಿವೃತ್ತಿ ಹೊಂದಿದ ಕಾರಣದಿಂದ ತೆರವಾಗುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದನ್ನು ಈಗಾಗಲೇ ನಿಲ್ಲಿಸಿಬಿಟ್ಟಿದ್ದಾರೆ. ತೀರಾ ಅಗತ್ಯ ಎನಿಸಿದರೆ, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಅಗ್ರಿಗೇಟರ್ ಕಂಪನಿಗಳ ಬಸ್ಸುಗಳ ಸಂಖ್ಯೆ ಹೆಚ್ಚುತ್ತಿದ್ದಂತೆ, ಸರ್ಕಾರಿ ಬಸ್ಸುಗಳು ಕಡಿಮೆಯಾಗುತ್ತಾ ಹೋಗುತ್ತವೆ. ಅಂತಹ ಸಂದರ್ಭ ಬಂದಾಗ ಸರ್ಕಾರಿ ಸಾರಿಗೆ ಸಂಸ್ಥೆಗಳಿಗೆ ಹುದ್ದೆಗಳ ನೇಮಕದ ಅಗತ್ಯವೇ ಬರುವುದಿಲ್ಲ. ಇದನ್ನು ತಡೆಗಟ್ಟಲು ಇರುವ ಮಾರ್ಗವೆಂದರೆ, ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳ ನೌಕರರು, ಅಧಿಕಾರಿಗಳು, ಸಾರ್ವಜನಿಕರು, ಆಟೋ ಮತ್ತು ಟ್ಯಾಕ್ಸಿ ಚಾಲಕರು ಒಟ್ಟಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಖಾಸಗೀಕರಣ ನೀತಿಗಳ ವಿರುದ್ಧ ದೊಡ್ಡ ಮಟ್ಟದ ಹೋರಾಟ ನಡೆಸುವುದು. ಇದಕ್ಕೆ ಸಿದ್ದರಾಗೋಣ.

ಮೆಕ್ಸಿಕೊ: ಎಡಪಂಥೀಯ ಮಹಿಳಾ ಅಧ್ಯಕ್ಷರ ಆಯ್ಕೆ

ಜಗದ ಸುತ್ತ

ಎನ್.ಕೆ.ವಿ.



ಒಂದು ಐತಿಹಾಸಿಕ ಚುನಾವಣೆಯಲ್ಲಿ, ಮೆಕ್ಸಿಕನ್ ಮತದಾರರು ಕಾರ್ಮಿಕರ ಪರ ಪ್ರಗತಿಪರ ಅಭ್ಯರ್ಥಿ ಕ್ಲೌಡಿಯಾ ಶೀನ್ಬಾಮ್ ಅವರನ್ನು ಆಯ್ಕೆ ಮಾಡಿದ್ದಾರೆ. ಆರು ವರ್ಷಗಳ ಅವಧಿಗೆ ಆಯ್ಕೆಯಾದ ಅವರು ಇಡೀ ಉತ್ತರ ಅಮೆರಿಕಾದಲ್ಲಿಯೇ ಅಧ್ಯಕ್ಷರಾಗಿ ಚುನಾಯಿತರಾದ ಮೊದಲ ಮಹಿಳೆ ಮತ್ತು ಮೊದಲ ಯಹೂದಿ ವ್ಯಕ್ತಿ.

ನಾವು ಮಹಿಳೆಯರು ಅಧ್ಯಕ್ಷ ಸ್ಥಾನಕ್ಕೆ ಬಂದಿದ್ದೇವೆ, ಆದರೆ ನಾವು ಎಲ್ಲರಿಗಾಗಿ ಆಡಳಿತ ನಡೆಸಲಿದ್ದೇವೆ" ಎಂದು ಶೀನ್ಬಾಮ್ ತಮ್ಮ ವಿಜಯ ಭಾಷಣದಲ್ಲಿ ಘೋಷಿಸಿದರು.

"ಗಣರಾಜ್ಯದ 200 ವರ್ಷಗಳಲ್ಲಿ ಮೊದಲ ಬಾರಿಗೆ, ನಾನು ಮೆಕ್ಸಿಕೋದ ಮಹಿಳಾ ಅಧ್ಯಕ್ಷಳಾಗುತ್ತೇನೆ. ನಾನು ಇತರ ಸಂದರ್ಭಗಳಲ್ಲಿ ಹೇಳಿದಂತೆ, ನಾನು ಒಬ್ಬಂಟಿಯಾಗಿ ಬಂದಿಲ್ಲ. ನಮ್ಮ ತಾಯ್ನಾಡನ್ನು ನಮಗೆ ನೀಡಿದ ನಮ್ಮ ನಾಯಕಿಯರೊಂದಿಗೆ, ನಮ್ಮ ಪೂರ್ವಜರು, ನಮ್ಮ ತಾಯಂದಿರು, ನಮ್ಮ ಹೆಣ್ಣುಮಕ್ಕಳು ಮತ್ತು ನಮ್ಮ ಮೊಮ್ಮಕ್ಕಳು– ನಾವೆಲ್ಲರೂ ಜೊತೆಯಾಗಿಯೇ ಬಂದಿದ್ದೇವೆ" ಎಂದು ಅವರು ಹೇಳಿದರು.

ಶೀನ್ಬಾಮ್ ಮೆಕ್ಸಿಕೊದ ಪ್ರಸ್ತುತ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡಾರ್ ಅವರ AMLO ಎಂದು ಕರೆಯಲಾಗುವ ಕೂಟದ ಸಹಚರರು ಮತ್ತು ಅವರ ಮೊರೆನಾ (Morena) ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿದ್ದರು. ಮೆಕ್ಸಿಕೋದ ಮೊದಲ ಮಹಿಳಾ ಅಧ್ಯಕ್ಷೆ ಮತ್ತು ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಬಹುಸಂಖ್ಯಾತರಾಗಿರುವ ರಾಷ್ಟ್ರದಲ್ಲಿ ಮೊದಲ ಯಹೂದಿ ಅಧ್ಯಕ್ಷರಾಗಿದ್ದಾರೆ. ಅವರು ಅಕ್ಟೋಬರ್ 1 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಮೆಕ್ಸಿಕನ್ ಅಧ್ಯಕ್ಷರು ಕೇವಲ ಒಂದು ಅವಧಿಗೆ ಮಾತ್ರ ಸೇವೆ ಸಲ್ಲಿಸಬಹುದು.

ಯುರೋ ಕೂಟದ ಚುನಾವಣೆಗಳಲ್ಲಿ ಫ್ರಾನ್ಸ್, ಜರ್ಮನಿ, ಇಟಲಿ ಸೇರಿದಂತೆ ಹಲವು ದೇಶಗಳಲ್ಲಿ ಉಗ್ರ ಬಲಪಂಥದ ನವ–ನಾಜಿ ಪಕ್ಷಗಳಿಗೆ ದೊಡ್ಡ ಮುನ್ನಡೆ ಸಿಕ್ಕಿರುವುದು ಸೇರಿದಂತೆ ಚುನಾವಣೆ ನಡೆಯಲಿರುವ ಯು.ಎಸ್. ಸೇರಿದಂತೆ ಹಲವು ದೇಶಗಳಲ್ಲಿ ಉಗ್ರ ಬಲಪಂಥೀಯರು ಪ್ರಾಬಲ್ಯ ಸ್ಥಾಪಿಸುವ ಹೊತ್ತಿನಲ್ಲಿ ಮೆಕ್ಸಿಕೊದ ಈ ಚುನಾವಣಾ ಫಲಿತಾಂಶ ಚೇತೋಹಾರಿಯಾಗಿದೆ.

ಮೊದಲ ನೊಬೆಲ್ ಪ್ರಶಸ್ತಿ ವಿಜೇತ ಅಧ್ಯಕ್ಷರು ಸಹ

ಅವರು ಮೆಕ್ಸಿಕೋದ ಮೊದಲ ನೊಬೆಲ್ ಪ್ರಶಸ್ತಿ ವಿಜೇತ ಅಧ್ಯಕ್ಷರೂ ಆಗಿರುತ್ತಾರೆ. ಜಾಗತಿಕ ತಾಪಮಾನ ಏರಿಕೆಯ ತನಿಖೆ ಮಾಡಿದ ಮತ್ತು ಅದರ ವೇಗವರ್ಧಿತ ಬೆದರಿಕೆಯನ್ನು ಪ್ರಕಟಿಸಿದ ವಿಶ್ವಸಂಸ್ಥೆಯ ಹವಾಮಾನ ವಿಜ್ಞಾನ ಸಮಿತಿಯಲ್ಲಿ ಸಹೋದ್ಯೋಗಿಗಳೊಂದಿಗೆ ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ. ಶೀನ್ಬಾಮ್ ಮೆಕ್ಸಿಕೋದ ಪ್ರಮುಖ ವಿಶ್ವವಿದ್ಯಾಲಯದಿಂದ ಎನರ್ಜಿ ಎಂಜಿನಿಯರಿಂಗ್ ನಲ್ಲಿ ಡಾಕ್ಟರೇಟ್ ಪಡೆದಿದ್ದಾರೆ.

ಶೀನ್ಬಾಮ್ ಅವರು ಅಧಿಕಾರ ವಹಿಸಿದ ಮೇಲೆ ಕೈಗೊಳ್ಳಬೇಕಾದ ಪ್ರಮುಖ ಕಾರ್ಯಭಾರಗಳು – ಕ್ರಿಮಿನಲ್ ಕಾರ್ಟೆಲ್ ಗಳು ಮತ್ತು ದೊಡ್ಡ ಲಿಂಗ ಅಂತರವನ್ನು ಸಹ ಒಳಗೊಂಡಂತೆ ಇರುವ ಅಗಾಧ ಆದಾಯದ ಅಸಮಾನತೆಯ ವಿರುದ್ಧ ಹೋರಾಡುವುದು. ಮಾಜಿ ಮೆಕ್ಸಿಕೋ ಸಿಟಿ ಮೇಯರ್ ಮತ್ತು AMLO ಕ್ಯಾಬಿನೆಟ್‌ನ ಸದಸ್ಯರೂ ಆಗಿದ್ದ ಅವರಿಗೆ, ಯುಎಸ್ ಅಧ್ಯಕ್ಷರಾದರೆ ಡೊನಾಲ್ಡ್ ಟ್ರಂಪ್ ಅವರನ್ನು ಹೇಗೆ ನಿರ್ವಹಿಸುವ ಗಂಭೀರ ಸವಾಲೂ ಎದುರಾಗಬಹುದು.

ರಿಪಬ್ಲಿಕನ್ ಯುಎಸ್ ಅಧ್ಯಕ್ಷೀಯ ಅಭ್ಯರ್ಥಿ ಮೆಕ್ಸಿಕನ್ ವಿರೋಧಿ, ವಲಸೆ ವಿರೋಧಿ ಮತ್ತು ಬಣ್ಣದ ಜನರ ವಿರೋಧಿ ಮಾತ್ರವಲ್ಲ, ಆದರೆ ಅವರು ಈಗ ಶಿಕ್ಷೆಗೊಳಗಾದ ಅಪರಾಧಿಯೂ ಆಗಿದ್ದಾರೆ. ಯಾವುದೇ ದೇಶದ ಅಪರಾಧಿಗಳನ್ನು (ಅವರ ಮೇಲ್ಮನವಿಗಳು ನ್ಯಾಯಾಲಯಗಳಲ್ಲಿ ಇದ್ದರೂ ಸಹ) ಮೆಕ್ಸಿಕನ್ ಕಾನೂನು ಅಧ್ಯಕ್ಷೀಯ ಮನ್ನಾ ಇಲ್ಲದೆ ಪ್ರವೇಶಿಸುವುದನ್ನು ನಿರ್ಬಂಧಿಸುತ್ತದೆ. ಇದು ಟ್ರಂಪ್ ನವೆಂಬರಿನ ಚುನಾವಣೆಯಲ್ಲಿ ಗೆದ್ದರೂ ಸಹ ಅನ್ವಯಿಸುತ್ತದೆ. ಇಂತಹ ನಿಷೇಧಗಳನ್ನು ಹೊಂದಿರುವ ಇತರ ರಾಷ್ಟ್ರಗಳಲ್ಲಿ ಕೆನಡಾ ಮತ್ತು ಯುಕೆ ಸಹ ಸೇರಿವೆ.

ಶೀನ್ಬಾಮ್ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಮಹಿಳಾ ಸೆನೆಟರ್ ಕ್ಸೊಚಿಟ್ಲ್ ಗಾಲ್ವೆಜ್ ಅವರ ಎರಡರಷ್ಟು ಮತ ಪಡೆದಿದ್ದರು. ಇಬ್ಬರು ಮಹಿಳೆ–ಇಬ್ಬರು ಪುರುಷರ ಓಟದಲ್ಲಿ ಅವರು ಗೆದ್ದಿದ್ದಾರೆ. ಆದರೆ ಮೆಕ್ಸಿಕೊದ ಕೆಳಸದನದಲ್ಲಿ ಮೊರೆನಾ ಬಹುಮತವನ್ನು ತಂದರು ಮತ್ತು ಮೇಲ್ಸದನ ಸೆನೆಟ್ ನಲ್ಲಿ ಬಹುಮತದ ಸಮೀಪಕ್ಕೆ ಬಂದರು.

ತನ್ನ ವಿಜಯದ ಭಾಷಣದಲ್ಲಿ, ಶೀನ್ಬಾಮ್ AMLO ಅನ್ನು ಶ್ಲಾಘಿಸಿದರು ಮತ್ತು ಮೆಕ್ಸಿಕೋದ ಅಗಾಧ ಆದಾಯದ ಅಸಮಾನತೆಯನ್ನು ಕಡಿಮೆ ಮಾಡುವಲ್ಲಿ ಒತ್ತು ಕೊಡುತ್ತಾ ಅವರ ಅನೇಕ ನೀತಿಗಳನ್ನು ಮುಂದುವರಿಸುವುದಾಗಿ ಭರವಸೆ ನೀಡಿದರು. ಮೆಕ್ಸಿಕೋದ ಕಾರ್ಪೊರೇಟ್ ಗಳು (ಅವುಗಳಲ್ಲಿ ಹಲವು ಕಾರ್ಟೆಲ್ ಗಳಿಗೆ ಸಂಬಂಧಿಸಿವೆ) ಶೀನ್ಬಾಮ್ ಮತ್ತು ಮೊರೆನಾ ಅವರ ಭಾರೀ ಬಹುಮತದಿಂದ ಸ್ಟಾಕ್ ಮಾರುಕಟ್ಟೆಯು ಸ್ವಲ್ಪ ಕುಸಿತದೊಂದಿಗೆ ಪ್ರತಿಕ್ರಿಯಿಸಿತು.

ಶೀನ್ಬಾಮ್ ಅವುಗಳ ಮೂಲಕಾರಣಗಳನ್ನು ಪರಿಹರಿಸುವ ತಂತ್ರ ಮತ್ತು ಕಾರ್ಟೆಲ್ ಅಪರಾಧಿಗಳ ಬಗ್ಗೆ "ಶೂನ್ಯ ರಿಯಾಯಿತಿ" ಯ ಮೂಲಕ ಕಾರ್ಟೆಲ್ ಗಳನ್ನು ಎದುರಿಸುವುದನ್ನು ಮುಂದುವರೆಸುವ ಭರವಸೆ ನೀಡಿದರು.

ಮೆಕ್ಸಿಕನ್ ಆದಾಯದ ಅಸಮಾನತೆಯು ಲಿಂಗ ಮತ್ತು ವರ್ಗ ಅಸಮಾನತೆಯನ್ನು ಪ್ರತಿಬಿಂಬಿಸುತ್ತದೆ. ಮನೆ ಕಾರ್ಮಿಕರು ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಾರೆ ಮತ್ತು ಕೆಲಸದ ಸ್ಥಳದಲ್ಲಿ ಹೆಚ್ಚುತ್ತಿರುವ ಹಿಂಸೆಯನ್ನು ಎದುರಿಸುತ್ತಾರೆ. ಮಹಿಳೆಯರನ್ನು ಗುರಿಯಾಗಿಸಿಕೊಂಡು ಕೊಲೆ ಪ್ರಮಾಣ ಹೆಚ್ಚಾಗಿದೆ. ಮೆಕ್ಸಿಕನ್ ರಾಜ್ಯಗಳಲ್ಲಿನ ಸ್ತ್ರೀವಾದಿ ಗುಂಪುಗಳು ಗರ್ಭಪಾತ ಕ್ಕೆ ಅವಕಾಶ ಮತ್ತು ಲೈಂಗಿಕ ಮತ್ತು ಸಂತಾನೋತ್ಪತ್ತಿ ಹಕ್ಕುಗಳಿಗಾಗಿ ಹೋರಾಡುತ್ತಲೇ ಇರಬೇಕು.

ಅಧಿಕಾರ ವಹಿಸಿಕೊಂಡ ಮೇಲೆ AMLO ನ ಮೊದಲ ಕ್ರಮವೆಂದರೆ ಮೆಕ್ಸಿಕೋದ ಕನಿಷ್ಠ ವೇತನವನ್ನು ದ್ವಿಗುಣಗೊಳಿಸುವುದಾಗಿತ್ತು. ಉತ್ತಮ ವೃದ್ಧಾಪ್ಯ ಪಿಂಚಣಿಗಳನ್ನು ಸ್ಥಾಪಿಸುವುದು ಮತ್ತು ಯುವಜನರನ್ನು ಕ್ರಿಮಿನಲ್ ಕಾರ್ಟೆಲ್ ಗಳಿಂದ ಹೊರಗಿಡಲು ಕಾಲೇಜು ವಿದ್ಯಾರ್ಥಿವೇತನಗಳು ಮತ್ತು ಇತರ ಪ್ರೋತ್ಸಾಹಗಳನ್ನು ಒದಗಿಸುವುದು ಇತರ ಕ್ರಮಗಳು ಒಳಗೊಂಡಿತ್ತು. ಕುಖ್ಯಾತ ಭ್ರಷ್ಟ ರಾಷ್ಟ್ರೀಯ ಪೋಲಿಸ್ ಅನ್ನು ವಿಸರ್ಜಿಸಿದರು, ಕಾನೂನು ಜಾರಿಯನ್ನು ಸಶಸ್ತ್ರ ಪಡೆಗಳಿಗೆ ಹಸ್ತಾಂತರಿಸಿದರು.

ಯುಎಸ್ ಜತೆ ಗಡಿಯಲ್ಲಿ ವಲಸೆಯಲ್ಲಿ ಯುಎಸ್ ಸರಕಾರದ ದಮನದ ಪರಿಣಾಮ ಮತ್ತು ನಂತರದ ಪರಿಣಾಮಗಳನ್ನು ಸಹ ಅವರು ಎದುರಿಸಬೇಕಾಗುತ್ತದೆ. ಬಿಡೆನ್ ಅವರು ಅಧ್ಯಕ್ಷರಾಗಿದ್ದಾಗ ಟ್ರಂಪ್ ಮಂಡಿಸಿದ ಅನೇಕ ವಲಸೆ ವಿರೋಧಿ ನೀತಿಗಳನ್ನು ಈಗಾಗಲೇ ಜಾರಿಗೆ ತಂದಿದ್ದಾರೆ. ಬಿಡೆನ್ ಜೂನ್ 4 ರಂದು ಹೊಸ ಗಡಿ ಸಂರಕ್ಷಣಾ ಯೋಜನೆಯನ್ನು ತಯಾರಿಸಿದರು. ಇದು ಎಲ್ಲಾ ಆಶ್ರಯ ಪಡೆಯುವವರ ಬಹುತೇಕ ಸ್ವಯಂಚಾಲಿತ ನಿರಾಕರಣೆಯನ್ನು ಒಳಗೊಂಡಿದೆ ಮತ್ತು ಇತರ ವಲಸಿಗರನ್ನು ಉತ್ತರ ಮೆಕ್ಸಿಕೋದ ಗಡಿಯ ದಕ್ಷಿಣಕ್ಕೆ ಶಿಬಿರಗಳಲ್ಲಿ ಉಳಿಯಲು ಒತ್ತಾಯಿಸುತ್ತದೆ.

ಯುಎಸ್ ನಲ್ಲಿರುವ ಎಲ್ಲಾ 10 ರಿಂದ 11 ದಶಲಕ್ಷ ದಾಖಲೆ–ರಹಿತ ಜನರನ್ನು (ಅವರಲ್ಲಿ ಮೆಕ್ಸಿಕನ್ನರು ಬಹುಸಂಖ್ಯಾತರು) ಮೊದಲು ಸುತ್ತುವರೆದು ಜೈಲು ಶಿಬಿರಗಳಿಗೆ ಎಸೆದ ನಂತರ ಅವರನ್ನು ಗಡೀಪಾರು ಮಾಡುವುದಾಗಿ ಟ್ರಂಪ್ ಹೇಳುತ್ತಾರೆ. ಅವರು ವಿದೇಶಿ ವಲಸಿಗರನ್ನು ಅಪರಾಧಿಗಳು ಮತ್ತು ಅತ್ಯಾಚಾರಿಗಳು ಎಂದು ಕರೆಯುತ್ತಾರೆ. "ದರಿದ್ರ ದೇಶಗಳಿಂದ ಮುಸ್ಲಿಮರು ಮತ್ತು ಇತರ ಜನ ವಲಸೆ ಬರುವುದನ್ನು ತಡೆಯಲು ಗಡಿಯನ್ನು ಮುಚ್ಚುವುದಾಗಿ ಭರವಸೆ ನೀಡುತ್ತಾರೆ.

ನಿರುದ್ಯೋಗ ನಿವಾರಣೆಗೆ ಏನು ಮಾಡಬೇಕು........

ಪುಟ 13 ರಿಂದ

ರೂಪಗಳಲ್ಲಿ) ಎದುರಿಸಲು ಸಿದ್ಧವಾಗಿರಬೇಕು.

ಒಂದೇ ಕಲ್ಲಿನಲ್ಲಿ ಮೂರು ಹಕ್ಕಿಗಳು

ಉದ್ಯೋಗವನ್ನು ವಿಸ್ತರಿಸಲು, ಮೊದಲನೆಯದಾಗಿ, ಶಾಲೆ ಮತ್ತು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಶಿಕ್ಷಕರು, ಆರೋಗ್ಯ ಮತ್ತು ಶುಶ್ರೂಷಾ ಸಿಬ್ಬಂದಿ ಸೇರಿದಂತೆ ಸರ್ಕಾರದೊಳಗೆ ಇರುವ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯವಿದೆ. ಎರಡನೆಯದಾಗಿ, ಈ ವಲಯಗಳಲ್ಲಿನ ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚಳದ ಅಗತ್ಯವಿದೆ. ಉದಾಹರಣೆಗೆ ದೇಶದಲ್ಲಿ ಶಿಕ್ಷಣವು ಹೀನಾಯ ಮಟ್ಟವನ್ನು ತಲುಪಿದೆ ಮತ್ತು ಅರ್ಹ ಸಿಬ್ಬಂದಿಯ ಸೂಕ್ತ ವಿಸ್ತರಣೆಯ ಮೂಲಕ ಅದಕ್ಕೆ ಪುನಶ್ಚೇತನದ ಅಗತ್ಯವಿದೆ. ಮೂರನೆಯದಾಗಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಸ್ತಿತ್ವದಲ್ಲಿರುವ ಮಿತಿಗಳನ್ನು ತೆಗೆದುಹಾಕುವ ಮೂಲಕ ಮತ್ತು ಸಾರ್ವತ್ರಿಕ ಮತ್ತು ಬೇಡಿಕೆ–ಚಾಲಿತಗೊಳಿಸುವ ಮೂಲಕ ಅದರ ವ್ಯಾಪ್ತಿಯನ್ನು ವಿಸ್ತರಿಸುವ ಅಗತ್ಯವಿದೆ. ಇದನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು ಮತ್ತು ಪ್ರಸ್ತುತ ಕೊಡುತ್ತಿರುವ ಅತ್ಯಲ್ಪ ಮೊತ್ತಕ್ಕಿಂತ ಹೆಚ್ಚಿನ ಕೂಲಿಯನ್ನು ಸೂಕ್ತ ಮಟ್ಟದಲ್ಲಿ ನಿಗದಿಪಡಿಸಬೇಕು.

ಇದರಿಂದಲೇ ಅರ್ಥವ್ಯವಸ್ಥೆಯಲ್ಲಿ ಎಲ್ಲಾ ತರಹದ ಸರಕುಗಳಿಗೆ ಬೇಡಿಕೆ ಸೃಷ್ಟಿಯಾಗುತ್ತದೆ. ಇದನ್ನು ಭಾಗಶಃ ಅಸ್ತಿತ್ವದಲ್ಲಿರುವ ಸಾಮರ್ಥ್ಯದ ಹೆಚ್ಚಿನ ಬಳಕೆಯ ಮೂಲಕ, ಆಮೂಲಕ ಹೆಚ್ಚಿನ ಉದ್ಯೋಗಗಳಿಂದ ಮತ್ತು ಭಾಗಶಃ ಉತ್ಪಾದನಾ ಸಾಮರ್ಥ್ಯವನ್ನು ಮುಖ್ಯವಾಗಿ ಸಣ್ಣ ಪ್ರಮಾಣದ ವಲಯದಲ್ಲಿ, ಸೂಕ್ತ ಸಾಲ–ವ್ಯವಸ್ಥೆಗಳ ಮೂಲಕ ಹೆಚ್ಚಿಸಿ ಪೂರೈಸಬಹುದು. ಬೇರೆ ರೀತಿಯಲ್ಲಿ ಹೇಳುವುದಾದರೆ ಸರ್ಕಾರ ಉದ್ಯೋಗವನ್ನು ಒದಗಿಸುವುದು ಅದರ "ಗುಣಕ" ಪರಿಣಾಮಗಳಿಂದಾಗಿ ಖಾಸಗಿ ವಲಯದಲ್ಲೂ ಹೆಚ್ಚುವರಿ ಉದ್ಯೋಗವನ್ನು ಸೃಷ್ಟಿಸುತ್ತದೆ.

ಮೇಲೆ ಚರ್ಚಿಸಿದಂತೆ, ಪ್ರಭುತ್ವದ ಹೆಚ್ಚುವರಿ ವೆಚ್ಚಕ್ಕೆ ಸಂಪೂರ್ಣವಾಗಿ ಬಂಡವಳಿಗರ ಮೇಲೆ, ಒಟ್ಟಾರೆಯಾಗಿ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳ ಮೂಲಕ ಹಣಕಾಸು ಒದಗಿಸಬೇಕಾಗುತ್ತದೆ. ಅಂತಹ ತೆರಿಗೆಗಳು ಅವರ ಹರಿವಿನ ಆದಾಯದ ಮೇಲೆ ಅಥವಾ ಅವರ ಸಂಪತ್ತಿನ ದಾಸ್ತಾನುಗಳ ಮೇಲೆ ಇರಬಹುದು; ಇವೆರಡರಲ್ಲಿ, ರಿಯಲ್ ಎಸ್ಟೇಟ್ ಮತ್ತು ನಗದು ಬಾಕಿಗಳನ್ನು ಒಳಗೊಂಡಂತೆ ಯಾವುದೇ ಗಮನಾರ್ಹ ನೇರ ಆದಾಯವನ್ನು ಗಳಿಸದ ಅವರ ಸಂಪತ್ತಿನ ಮೇಲಿನ ತೆರಿಗೆ ವಿಧಿಸುವುದು ಒಳ್ಳೆಯದು. ಏಕೆಂದರೆ ಅದು ಉತ್ಪಾದಕ ಹೂಡಿಕೆಯ ಮೇಲೆ ಯಾವುದೇ ಪ್ರತಿಕೂಲ ಪರಿಣಾಮಗಳನ್ನು ಬೀರುವುದಿಲ್ಲ ಎಂದು ಹೇಳಬಹುದು. ನಿಜ, ಯಾವುದೇ ಸಂಪತ್ತಿನ ತೆರಿಗೆಯೊಂದಿಗೆ, ಅದನ್ನು ವಂಚಿಸುವುದನ್ನು ತಡೆಗಟ್ಟಲು ಪಿತ್ರಾರ್ಜಿತ ತೆರಿಗೆ ಇರಬೇಕು. ನವ ಉದಾರವಾದಿ ಯುಗದಲ್ಲಿ ದೇಶದಲ್ಲಿ ಸಂಪತ್ತಿನ ಅಸಮಾನತೆಯು ಗಗನಕ್ಕೇರಿದ್ದರೂ ಸಹ ಭಾರತವು ವಾಸ್ತವಿಕವಾಗಿ ಯಾವುದೇ ಸಂಪತ್ತು ಅಥವಾ ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಹೊಂದಿಲ್ಲ ಎಂಬುದು ಆಘಾತಕಾರಿ ಸಂಗತಿ. ಆದಾಗ್ಯೂ ಈ ಖಂಡನೀಯ ಸಂಗತಿಯು ಸಂಪತ್ತು ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆಯನ್ನು ಹೇರಲು ಅಪಾರ ಅವಕಾಶಗಳಿವೆ ಎಂಬುದನ್ನೂ ಸೂಚಿಸುತ್ತದೆ.

ಸಂಪತ್ತು ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆಯಿಂದ ಹಣಕಾಸು ಒದಗಿಸಿಕೊಂಡ ಸರ್ಕಾರಿ ವೆಚ್ಚದ ಹೆಚ್ಚಳವು ಅರ್ಥವ್ಯವಸ್ಥೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸುವ ಅತ್ಯಂತ ಸುಲಭವಾದ ಮತ್ತು ನೇರವಾದ ಮಾರ್ಗವನ್ನು ಒದಗಿಸುತ್ತದೆ. ಇದು ಒಂದೇ ಕಲ್ಲಿನಲ್ಲಿ ಹಲವಾರು ಪಕ್ಷಿಗಳನ್ನು ಹೊಡೆಯುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗವನ್ನು ಒದಗಿಸುವುದು, ಪ್ರಜಾಪ್ರಭುತ್ವಕ್ಕೆ ಅಗತ್ಯವಾದ ಸಂಪತ್ತಿನ ಅಸಮಾನತೆಯನ್ನು ತಡೆಗಟ್ಟುವುದು ಮತ್ತು ದೇಶದಲ್ಲಿ ಶಿಕ್ಷಣ ಮತ್ತು ಆರೋಗ್ಯದ ಸ್ಥಿತಿಯನ್ನು ಅವುಗಳು ಈಗ ತಲುಪಿರುವ ಹೀನಾಯ ಸ್ಥಿತಿಯಿಂದ ಮೇಲಕ್ಕೆತ್ತಿ ಉತ್ತಮಗೊಳಿಸುವುದು.

ಅನು:ಕೆ.ವಿ.

NEW No. MAG(3)/NPP/205/2021-2022
JANASHAKTHI KANNADA VARA PATRIKE June 17-23, 2024 Price: Rs. 10/- Date of Publication: 14 June 2024 RNI No. KARKAN /2006/17926 Posted on 19-06-2024
Posted at BG PSO, BG - 560026 **Posted at Periodical Rate -** Rs. 2

ಬಸ್ಸುಗಳ ಕಾರ್ಯಾಚರಣೆಗೂ ಇಳಿದಿದೆ ಅಮೆರಿಕ ಮೂಲದ 'ಉಬರ್'

ಮೊದಲು ಕೊಲ್ಕತ್ತಾ, ಈಗ ದೆಹಲಿ: ಬೆಂಗಳೂರಿನಲ್ಲೂ ಬಸ್ಸುಗಳ ಕಾರ್ಯಾಚರಣೆಗೆ ಇಳಿಯಲಿದೆ ಉಬರ್: ಬಿಎಂಟಿಸಿ, ಕೆ.ಎಸ್.ಆರ್.ಟಿ.ಸಿ. ಇನ್ನೆಷ್ಟು ಸಮಯ ಉಳಿಯಲಿವೆ?

ಸಿ.ಸಿದ್ದಯ್ಯ

ಒಂದು ವರ್ಷದ ಹಿಂದೆ ಕೊಲ್ಕತ್ತಾದಲ್ಲಿ ಬಸ್ ಸೇವೆಗೆ ಇಳಿದಿದ್ದ 'ಉಬರ್' ಅಪ್ಲಿಕೇಶನ್ ಈಗ ದೆಹಲಿ ಪ್ರೀಮಿಯಂ ಬಸ್ಸುಗಳ ಯೋಜನೆಯಡಿಯಲ್ಲಿ ಬಸ್ಸುಗಳನ್ನು ನಿರ್ವಹಿಸಲು ದೆಹಲಿ ಸಾರಿಗೆ ಇಲಾಖೆಯಿಂದ ಅಗ್ರಿಗೇಟರ್ ಪರವಾನಗಿ (aggregator license)ಯನ್ನು ಪಡೆದುಕೊಂಡಿದೆ. ಬೆಂಗಳೂರು ಮತ್ತು ಹೈದಾರಾಬಾದ್ ನಂತಹ ನಗರಗಳಲ್ಲಿಯೂ ಕಾರ್ಯಾಚರಣೆ ನಡೆಸಲು ಉಬರ್ ಸಿದ್ಧತೆ ನಡೆಸುತ್ತಿದೆ. ಈ ಮೂಲಕ ಇಡೀ ರಸ್ತೆ ಸಾರಿಗೆ ವಲಯವನ್ನೇ ನುಂಗಿಹಾಕುವಲ್ಲಿ ವಿದೇಶಿ ಮತ್ತು ಸ್ವದೇಶಿ ಖಾಸಗಿ ಅಗ್ರಿಗೇಟರ್ ಕಂಪನಿಗಳು ದಾಪುಗಾಲು ಹಾಕುತ್ತಿವೆ. ಕ್ರಮೇಣವಾಗಿ, ಸರ್ಕಾರ ಸಾರ್ವಜನಿಕ ಸಾರಿಗೆ ಸೇವೆ ಒದಗಿಸುವ ತನ್ನ ಜವಾಬ್ದಾರಿಯಿಂದ ಹಿಂದೆ ಸರಿಯುತ್ತದೆ. ಇವೆಲ್ಲವೂ ಭಾರತ ಸರ್ಕಾರದ ಮುಕ್ತ ಆರ್ಥಿಕ ನೀತಿ ಮತ್ತು ಖಾಸಗೀಕರಣ ನೀತಿಗಳ ಭಾಗವಾಗಿ ನಡೆಯುತ್ತಿವೆ.



ಪ್ರಯಾಣಿಕರ ವಾಹನಗಳಾದ ಟ್ಯಾಕ್ಸಿ, ಆಟೋರಿಕ್ಷಾ, ಬೈಕ್ ಟ್ಯಾಕ್ಸಿಗಳು ಹಾಗೂ ಸರಕು ಸಾಗಣೆ ವಾಹನಗಳಾಯ್ತು, ಈಗ ಬಸ್ಸುಗಳ ಕಾರ್ಯಾಚರಣೆಗೂ ಇಳಿದಿವೆ ಅಗ್ರಿಗೇಟರ್ ಕಂಪನಿಗಳು. ಅಮೆರಿಕ ಮೂಲದ ಕಂಪನಿ 'ಉಬರ್' ಈಗ ಭಾರತದ ನಗರಗಳಲ್ಲಿ ಬಸ್ಸುಗಳ ಕಾರ್ಯಾಚರಣೆಗೆ ಇಳಿದಿದೆ.

"ಪ್ರಯಾಣಿಕರು ಆ್ಯಪ್ ನಲ್ಲಿ 'ಉಬರ್ ಷಟಲ್' ಆಯ್ಕೆಯನ್ನು ಆರಿಸಿಕೊಳ್ಳಬಹುದು ಮತ್ತು ನಗದು ರಹಿತ ಪಾವತಿಗಳ ಮೂಲಕ ಒಂದು ವಾರದ ಮುಂಚಿತವಾಗಿ ಸೀಟುಗಳನ್ನು ಮುಂಗಡವಾಗಿ ಕಾಯ್ದಿರಿಸಬಹುದು. ಈ ಬಸ್‌ಗಳು ನಿಮ್ಮ ಸರಾಸರಿ ವಾಹನಗಳಂತೆ ಇರುವುದಿಲ್ಲ – ವೈ–ಫೈ ಸಂಪರ್ಕ, ನಿಖರವಾದ ನ್ಯಾವಿಗೇಷನ್ ಗಾಗಿ GPS, ಭದ್ರತೆಗಾಗಿ CCTV, ಸುರಕ್ಷತೆಗಾಗಿ ಪ್ಯಾನಿಕ್ ಬಟನ್ ಗಳು ಮತ್ತು ಹೆಚ್ಚುವರಿ ಮೈಲಿ ಸೌಕರ್ಯಕ್ಕಾಗಿ 2+2 ಒರಗಿಕೊಳ್ಳುವ ಆಸನಗಳಂತಹ ಸೌಕರ್ಯಗಳನ್ನು ನಿರೀಕ್ಷಿಸಬಹುದು" ಎನ್ನುತ್ತದೆ ಉಬರ್ ಸಂಸ್ಥೆ.

"ನಿಮ್ಮ ಮೊದಲ ರೈಡ್ ಅನ್ನು ಉಚಿತವಾಗಿ ಪಡೆಯಿರಿ ಮತ್ತು 100 ರೈಡ್‌ಗಳಲ್ಲಿ 45% ವರೆಗೆ ರಿಯಾಯಿತಿ ಪಡೆಯಿರಿ. ಇಂದು ಉಬರ್ ಶಟಲ್ ಅನ್ನು ಪ್ರಯತ್ನಿಸಿ!" ಇದು ಉಬರ್‌ನ ಜಾಹಿರಾತು.

"ದೆಹಲಿಯಲ್ಲಿ ಆರಾಮದಾಯಕ, ಸುರಕ್ಷಿತ ಮತ್ತು ಅನುಕೂಲಕರ ಪ್ರಯಾಣವನ್ನು ಆನಂದಿಸಲು Uber ಷಟಲ್ ಒಂದು ಹೊಸ ಮಾರ್ಗವಾಗಿದೆ. ನೂಕುನುಗ್ಗಲಿನಲ್ಲಿ ಬೀಳಲು ಮತ್ತು ಕಿಕ್ಕಿರಿದ ಬಸ್ ಗಳಲ್ಲಿನ ಕಿರಿಕಿರಿ, ಮೆಟ್ರೋದಲ್ಲಿ ಗಂಟೆಗಟ್ಟಲೆ ಕಳೆಯಲು ಅಥವಾ ದಟ್ಟವಾದ ದಟ್ಟಣೆಯಲ್ಲಿ ಸಂಚರಿಸುವ ಅಗತ್ಯವಿಲ್ಲ." ದೆಹಲಿಯ ಟ್ಯಾಕ್ಸಿ, ಆಟೋ, ಸರ್ಕಾರಿ ಬಸ್ಸುಗಳಲ್ಲಿ ಸಂಚರಿಸುವ ಗ್ರಾಹಕರನ್ನು ತನ್ನತ್ತ ಸೆಳೆಯುವ ಉಬರ್ ನ ಮಾರುಕಟ್ಟೆ ತಂತ್ರಗಾರಿಕೆ ಇದು. ಉಬರ್, ಒಲಾ, ರ್‍ಯಾಪಿಡೋ ಮತ್ತು ಈ ಹಿಂದೆ ಇದ್ದ, ನಂತರ ಒಲಾಗೆ ಮಾರಿಕೊಂಡ 'ಟ್ಯಾಕ್ಸಿ ಫಾರ್ ಶ್ಯೂರ್' ನಂತಹ ಅಗ್ರಿಗೇಟರ್ ಕಂಪನಿಗಳು ಏನೆಲ್ಲಾ ಮಾರುಕಟ್ಟೆ ತಂತ್ರಗಾರಿಕೆ ಮಾಡಿದವು, ನಂತರ ಗ್ರಾಹಕರನ್ನು, ಟ್ಯಾಕ್ಸಿ, ಆಟೋ ಚಾಲಕ/ಮಾಲೀಕರನ್ನು ಹೇಗೆಲ್ಲಾ ಸುಲಿಗೆ ಮಾಡುತ್ತಿದ್ದಾರೆ ಎಂಬುದನ್ನು ನಾವು ಹೀಗಾಗಲೇ ನೋಡಿದ್ದೇವೆ, ಅನುಭವಿಸುತ್ತಿದ್ದೇವೆ.

ಬೆಂಗಳೂರಿಗೂ ಬರಲಿದೆ

2024ರ ಫೆಬ್ರವರಿ 22 ರಂದು ಉಬರ್ ಸಿಇಒ ದಾರಾ ಖೋಸ್ರವ್ ಶಹಿ 'x' (ಹಿಂದಿನ ಟ್ವಿಟ್ಟರ್)ನಲ್ಲಿ ಮಾಡಿದ ಟ್ವಿಟ್ ಹೀಗಿದೆ: @Uber ಷಟಲ್ ಬಸ್ ಅನ್ನು ನಮ್ಮ ಬೆಂಗಳೂರು ಕಛೇರಿಯಲ್ಲಿ ಪರಿಶೀಲಿಸಲು ಅದರ ಹಿಂದೆ ಇರುವ ಭಾರಿ ಪ್ರತಿಭಾವಂತ ತಂಡದ ಜೊತೆಗೆ ಉತ್ಸುಕನಾಗಿದ್ದೇನೆ. ಕಾರುಗಳು, ಬೈಕ್‌ಗಳು, ಆಟೋಗಳು ಮತ್ತು ಬಸ್‌ಗಳು–ಭಾರತದಲ್ಲಿ ಉಬರ್ ಒನ್–ಸ್ಟಾಪ್ ಮೊಬಿಲಿಟಿ ಹಬ್ (one-stop mobility hub) ಆಗಿದೆ.

ಬೆಂಗಳೂರಿನಲ್ಲಿಯೂ ಉಬರ್ ಬಸ್ಸುಗಳ ಕಾರ್ಯಾಚರಣೆಗೆ ಇಳಿದರೆ, ಟ್ಯಾಕ್ಸಿ, ಆಟೋರಿಕ್ಷಾ ಕೊಂಡು ಸ್ವಯಂ ಉದ್ಯೋಗ ಕಂಡುಕೊಂಡಿರುವ ನಗರದ ಇನ್ನಷ್ಟು ಚಾಲಕರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಬಿಎಂಟಿಸಿ, ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗಳ ಬಹುತೇಕ ಉದ್ಯೋಗಗಳು ಇಲ್ಲದಂತಾಗುತ್ತದೆ.

ಕಂಡಕ್ಟರ್ ಇಲ್ಲದ ಬಸ್ಸುಗಳು

ಇಂದು ಬಸ್ಸುಗಳಲ್ಲಿ ಟಿಕೆಟ್ ಕೊಡಲು ಕಂಡಕ್ಟರ್ ಇರುತ್ತಾರೆ. ಉಬರ್ ಬಸ್ಸುಗಳಿಗೆ ಚಾಲಕರಷ್ಟೇ ಸಾಕು. (ಮುಂದಿನ ದಿನಗಳಲ್ಲಿ ಚಾಲಕ ರಹಿತ ಬಸ್ಸುಗಳು ಬಂದರೆ ಚಾಲಕರ ಅಗತ್ಯವೂ ಇರುವುದಿಲ್ಲ.) ಏಕೆಂದರೆ, ಉಬರ್ ಬಸ್ಸುಗಳ ಪ್ರಯಾಣಿಕರು ಮೊದಲೇ, ಆಫ್ ಮೂಲಕ ಬಸ್ ಹತ್ತುವ ಮತ್ತು ಇಳಿಯುವ ಸ್ಥಳವನ್ನು ಸೂಚಿಸಿ ಸೀಟು ಕಾಯ್ದಿರಿಸಬಹುದು. ಪ್ರಯಾಣ ಮಾಡುವ ಒಂದು ವಾರ ಮುಂಚಿತವಾಗಿಯೂ ಗೊತ್ತುಪಡಿಸಬಹುದು. ನಾವೀಗ ರೈಲು ಮತ್ತು ಬಸ್ಸುಗಳಲ್ಲಿ ದೂರ ಪ್ರಯಾಣಕ್ಕೆ ಕೆಲ ದಿನಗಳ ಹಿಂದೆಯೇ ಸೀಟು ಕಾಯ್ದಿರಿಸುತ್ತೇವಲ್ಲಾ ಹಾಗೆ. ನೀವು ಸೂಚಿಸುವ ಪ್ರಯಾಣದ ದೂರವನ್ನು ಅವಲಂಭಿಸಿ ಸಂಸ್ಥೆ ದರ ನಿಗದಿ ಮಾಡುತ್ತದೆ. ಈ ದರವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಚಾಲಕನಿಗೆ ನಿಮ್ಮ ಮೊಬೈಲ್ ನಲ್ಲಿ ಗೊತ್ತುಪಡಿಸಿದ್ದನ್ನು ತೋರಿಸಿದರೆ ಸಾಕು. ಮುಂದಿನ ದಿನಗಳಲ್ಲಿ ನಗದು ರಹಿತ ವ್ಯವಹಾರದ ಮೂಲಕ ಖರೀದಿಸಿದ ಟಿಕೆಟ್ ಅನ್ನು ಮೊಬೈಲ್ ನಲ್ಲಿ ಅಥವಾ ಉಬರ್ ನೀಡುವ ಸ್ಮಾರ್ಟ್ ಕಾರ್ಡ್ ಅನ್ನು ಸ್ಕ್ಯಾನ್ ಮಾಡಿ ಬಸ್ಸು ಹತ್ತುವ ವ್ಯವಸ್ಥೆ ಬರಬಹುದು. ಇಂತಹ ವ್ಯವಸ್ಥೆ ಬಂದಾಗ ಚಾಲಕನಿಗೆ ಟಿಕೆಟ್ ತೋರಿಸುವ ಅಗತ್ಯ ಬರುವುದಿಲ್ಲ.

ಮತ್ತೊಂದು ಹೆಜ್ಜೆ ಮುಂದೆ ಹೋಗಿ, ಕ್ಯೂಆರ್ ಟಿಕೆಟ್ ಅಥವಾ ಇಂದಿನ ಮೆಟ್ರೋ ಕಾರ್ಡ್ ರೀತಿಯಲ್ಲಿ, ಮೆಟ್ರೋ ರೈಲು, ಬಸ್ಸು, ರೈಲು ಪ್ರಯಾಣಕ್ಕೆ, ಅಂಗಡಿಗಳಲ್ಲಿ ಸರಕುಗಳನ್ನು ಖರೀದಿಸಲು ಮತ್ತು ಇನ್ನಿತರೆ ವ್ಯವಹಾರಕ್ಕೆ ಒಂದೇ ಸ್ಮಾರ್ಟ್ ಕಾರ್ಡ್ ಬಳಕೆ ಮಾಡುವ ವ್ಯವಸ್ಥೆ ಬರಬಹುದು. ಟೋಲ್ ರಸ್ತೆಗಳಿಗೆ ನಗದು ಕೊಡುವ ವ್ಯವಹಾರ ಸದ್ಯದಲ್ಲೇ ಇಲ್ಲವಾಗುತ್ತದೆ. ಈಗ ಮೊದಲೇ ನಿರ್ಧಿಷ್ಟ ಹಣ ಠೇವಣಿ ಇಡುವ ಪಾಸ್‌ಟ್ಯಾಗ್ ವ್ಯವಸ್ಥೆ ಇದೆ. ಪಾಸ್‌ಟ್ಯಾಗ್ ಇಲ್ಲದಿದ್ದರೆ ಎರಡರಷ್ಟು ದರ ವಸೂಲಿ ಮಾಡುವುದನ್ನು ನೋಡಿದ್ದೇವೆ. ಮುಂದಿನ ದಿನಗಳಲ್ಲಿ ಈ ರಸ್ತೆಗಳಲ್ಲಿ ಟೋಲ್ ಪ್ಲಾಜಾಗಳೇ ಇರುವುದಿಲ್ಲ. ಇಲ್ಲಿ ಟೋಲ್ ರಹಿತ ರಸ್ತೆಗಳನ್ನಾಗಿ ಮಾಡುವ ಯೋಜನೆ ಕೇಂದ್ರ ಸರ್ಕಾರದ್ದು. ಹಿಂದಿನ ಸರಕಾರದ ಕೇಂದ್ರ ಸಾರಿಗೆ ಸಚಿವರಾಗಿದ್ದ ನಿತಿನ್ ಗಡ್ಕರಿ ಅವರು 2024ರ ಮಾರ್ಚ್ 28 ರಂದು ನೀಡಿದ ಹೇಳಿಕೆ ನೋಡಿ: "ಟೋಲ್ ಅನ್ನು ಕೊನೆಗೊಳಿಸುತ್ತಿದ್ದು, ಹೊಸ ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಶೀಘ್ರದಲ್ಲೇ ಪರಿಚಯಿಸಲಾಗುವುದು. ನಿಮ್ಮ ಬ್ಯಾಂಕ್ ಖಾತೆಯಿಂದ ಹಣವನ್ನು ಕಡಿತಗೊಳಿಸಲಾಗುತ್ತದೆ ಮತ್ತು ನೀವು ಬಳಕೆಮಾಡುವ ರಸ್ತೆಯ ಮೊತ್ತಕ್ಕೆ ಅನುಗುಣವಾಗಿ ಶುಲ್ಕ ವಿಧಿಸಲಾಗುತ್ತದೆ." ಇದರರ್ಥ, ಟೋಲ್ ರಸ್ತೆ ಬಳಕೆಗೆ ನಗದು ಅಥವಾ ಫಾಸ್ ಟ್ಯಾಗ್ ಉಪಯೋಗಕ್ಕೆ ಬರುವುದಿಲ್ಲ ಎಂದಾಯಿತು.

2019 ರ ಮೋಟಾರು ವಾಹನ ತಿದ್ದುಪಡಿ ಕಾಯ್ದೆ

ದೈತ್ಯ ಕಂಪನಿಗಳು ಸಂಪೂರ್ಣ ರಸ್ತೆ ಪುಟ 14 ಕ್ಕೆ

AIRTW ನಿಂದ ವಿರೋಧ

ದೆಹಲಿಯಲ್ಲಿ ಬಸ್ಸುಗಳನ್ನು ನಿರ್ವಹಿಸಲು ಉಬರ್ ಕಂಪನಿಗೆ ಪರವಾನಗಿ ನೀಡಿರುವುದನ್ನು ಆಲ್ ಇಂಡಿಯಾ ರೋಡ್ ಟ್ರಾನ್ಸ್ ಪೋರ್ಟ್ ವರ್ಕರ್ಸ್ ಫೆಡರೇಶನ್ (AIRTWF) ಬಲವಾಗಿ ವಿರೋಧಿಸಿದೆ. ಮೇ 21 ರಂದು ಹೊರಡಿಸಿದ ತನ್ನ ಹೇಳಿಕೆಯಲ್ಲಿ, ಇದು ದೆಹಲಿ ಸಾರಿಗೆ ನಿಗಮ (DTC) ಮತ್ತು ಅದರ ಚಾಲಕರು, ನಿರ್ವಾಹಕರು, ಒಟ್ಟಾರೆಯಾಗಿ ದೆಹಲಿ ಸಾರಿಗೆ ನಿಗಮದ ನೌಕರರಿಗೆ ಹಾಗೂ ಅಲ್ಲಿನ ಜನರಿಗೆ ಗಮನಾರ್ಹ ಅಪಾಯವನ್ನುಂಟುಮಾಡುತ್ತದೆ ಎಂದಿರುವ ಫೆಡರೇಶನ್, ಬಸ್ಸುಗಳನ್ನು ನಿರ್ವಹಿಸಲು ಉಬರ್‌ಗೆ ನೀಡಿರುವ ಅನುಮತಿಯನ್ನು ಹಿಂಪಡೆಯುವಂತೆ ದೆಹಲಿ ಸರ್ಕಾರವನ್ನು ಒತ್ತಾಯಿಸಿದೆ.

ಈ ಕಳವಳಗಳನ್ನು ಪರಿಹರಿಸಲು ಮತ್ತು ಡಿಟಿಸಿ ಮೂಲಕ ಸಾರ್ವಜನಿಕ ಸಾರಿಗೆಯನ್ನು ಸುಧಾರಿಸುವ ಮಾರ್ಗಗಳನ್ನು ಅನ್ವೇಷಿಸಲು ಎಲ್ಲಾ ಕಾರ್ಮಿಕ ಸಂಘಗಳು ಮತ್ತು ಪ್ರಯಾಣಿಕರ ಸಂಘಗಳೊಂದಿಗೆ ಸಭೆಯನ್ನು ಆಯೋಜಿಸಲು ಅದು ಸಲಹೆ ನೀಡಿದೆ.

ಈ ಕ್ರಮವು ಒಟ್ಟಾರೆಯಾಗಿ ಸುಮಾರು 90 ಪ್ರತಿಶತದಷ್ಟು ಸಣ್ಣ ಮಾಲೀಕರು–ಕಮ್–ಚಾಲಕರನ್ನು ತೊಡೆದುಹಾಕಲು ಕಾರಣವಾಗುತ್ತದೆ. ದೇಶದಲ್ಲಿ ಸಾರಿಗೆ ವಾಹನಗಳು. ಉಬರ/ಒಲಾ ಇಂತಹ ಅಗ್ರಿಗೇಟರ್ ಕಂಪನಿಗಳು ಚಾಲಕರನ್ನು ಹೇಗೆ ಶೋಷಣೆ ಮಾಡುತ್ತವೆ, ಅವರು ಕಷ್ಟಪಟ್ಟು ದುಡಿದ ಹಣವನ್ನು ಹೇಗೆ ಹಿಂಡುತ್ತವೆ, ಚಾಲಕರ ನಡುವೆ ಮುಷ್ಕರ ಮತ್ತು ಆತ್ಮಹತ್ಯೆಗೆ ಕಾರಣವಾಗುತ್ತವೆ ಎಂಬುದನ್ನು ಗಮನಿಸುವುದು ಯೋಗ್ಯವಾಗಿದೆ. ಹೆಚ್ಚುವರಿಯಾಗಿ, ಪ್ರಯಾಣಿಕರು ಪಾರದರ್ಶಕತೆ ಇಲ್ಲದೆ ಹೆಚ್ಚಿನ ದರಗಳನ್ನು ಎದುರಿಸುತ್ತಾರೆ, ವಿವಿಧ ತೊಂದರೆಗಳನ್ನು ಎದುರಿಸುತ್ತಾರೆ.

ಡಿಟಿಸಿ ಒದಗಿಸುವ ಅಸಮರ್ಪಕ ಸಾರ್ವಜನಿಕ ಸಾರಿಗೆಯಿಂದಾಗಿ ಪ್ರಯಾಣಿಕರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಈ ಸವಾಲುಗಳ ಬೆಳಕಿನಲ್ಲಿ, ಡಿಟಿಸಿ ಅನ್ನು ವಿಸ್ತರಿಸುವುದು ನಿರ್ಣಾಯಕ ಮತ್ತು ತುರ್ತು, ಇದು ಪ್ರಯಾಣಿಕರ ಪ್ರಯಾಣದ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸುತ್ತದೆ ಎಂದು ಖಚಿತಪಡಿಸುತ್ತದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರಿಂದಲೂ ಆರ್ಥಿಕ ನೆರವು ಬೇಕಾಗುತ್ತದೆ ಎಂದು ಫೆಡರೇಶನ್ ಹೇಳಿದೆ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**